ಅಮರೇಶ ನುಗಡೋಣಿ ಅವರ
'ಗೌರಿಯರು' ಕಾದಂಬರಿ: ವಿಭಿನ್ನ ಓದು

ದಿಟದ ಹೆಜ್ಜೆಗಳು

ಸಂಪಾದಕರು
ಡಾ. ಶೈಲಜ ಇಂ ಹಿರೇಮಠ

ದಿಟದ ಹೆಜ್ಜೆಗಳು

ಅಮರೇಶ ನುಗಡೋಣಿ ಅವರ 'ಗೌರಿಯರು'
ಕಾದಂಬರಿ : ವಿಭಿನ್ನ ಓದು

ಸಂಪಾದಕರು

ಡಾ. ಶೈಲಜ ಇಂ. ಹಿರೇಮಠ

ವಿಜಯಕಲ್ಯಾಣ ಪ್ರಕಾಶನ
೮ನೇ ವಾರ್ಡ್, ಕೊಂಡನಾಯಕನಹಳ್ಳಿ
ಹೊಸಪೇಟೆ–೫೮೩ ೨೦೧
ವಿಜಯನಗರ ಜಿಲ್ಲೆ

DITADA HEJJEGALU
(Dr. Amaresh Nugadoni Avara 'Gowriyaru'
Kadambari : Vibhinna Odu)

Edited by
Dr. Shailaja I. Hiremath
Professor, Dept. of Women's Studies
Kannada University, Hampi
Vidyaranya-583 276
Mo.: 8317343672

Published by
Vijayakalyana Prakaashana
8th Ward, Kondanayakanahalli
Hosapete-583 239, Vijayanagar Dist.
Mo.: 9880746551
E-mail: nandishwaradande@gmail.com

ಪುಟಗಳು: 12 + ೭೪ Price: 100/-
ಬೆಲೆ: ರೂ. ೧೦೦/-

© ಅಮರೇಶ ನುಗಡೋಣಿ

First Impression: 2024
ISBN: 978-81-928362-9-4
ಮುಖಪುಟ: ಶ್ರೀ ರಘು ಅಪಾರ
ಪುಟ ವಿನ್ಯಾಸ
ಜಿ.ಕೆ. ಈರಮ್ಮ, ಕಮಲಾಪುರ
ಮೊ: ೯೪೮೦೨ ೫೭೩೯೨

ಸ್ವಾನ್ ಪ್ರಿಂಟರ್ಸ್
svanprint@gmail.com

ವಿಮರ್ಶಕರ ಕಣ್ಣಂಚಿನಲ್ಲಿ ಗೌರಿಯರು

ಸಾಹಿತ್ಯಿಕ ಪಠ್ಯವನ್ನು ಸಾಹಿತ್ಯದ ಆಯಾಮದಲ್ಲಿ ಮಾತ್ರ ಚರ್ಚಿಸಲಾಗುವುದಿಲ್ಲ; ಯಾಕೆಂದರೆ ಅದು ಸಾಂಸ್ಕೃತಿಕ ಪಠ್ಯವೂ ಹೌದು, ರಾಜಕೀಯ ಪಠ್ಯವೂ ಹೌದು. ಪ್ರತಿ ಅಭಿಜಾತ ಸಾಹಿತ್ಯಿಕ ಪಠ್ಯವೂ ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡೇ ರಚಿತವಾಗಿರುತ್ತದೆ; ಹಾಗೂ ಸಾರ್ವಕಾಲಿಕವಾಗಿ ನಿಲ್ಲುವ ಸ್ವರೂಪವನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ **ಗೌರಿಯರು** ಕಾದಂಬರಿಯು ಮೂಡಿಬಂದಿದೆ.

ನಾಯಕಿ ಕೇಂದ್ರಿತ ಪಠ್ಯವನ್ನು 'ಮಹಿಳಾ ಸಂವೇದನೆ' ಹಾಗೂ 'ಮಹಿಳಾ ಅನನ್ಯತೆ' ಅಡಿಯಲ್ಲಿಯೇ ಚರ್ಚಿಸಲಾಗುತ್ತದೆ. ಯಾಕೆಂದರೆ 'ಮಹಿಳಾ ಸಂವೇದನೆ' ಎನ್ನುವ ಪರಿಭಾಷೆಯು 'ಮಹಿಳಾ ಅನನ್ಯತೆ'ಯನ್ನು ಸಾಬೀತುಪಡಿಸುತ್ತದೆ ಎಂದು ಸಾಹಿತ್ಯ ವಲಯವು ನಂಬಿದೆ; ಇದಕ್ಕೆ ಸ್ತ್ರೀವಾದಿ ವಿಮರ್ಶಕರೂ ಹೊರತಾಗಿಲ್ಲ. ಅಧ್ಯಯನದಲ್ಲಿ ಈಗಾಗಲೇ ಬಳಸಲ್ಪಟ್ಟ 'ಮಹಿಳಾ ಸಂವೇದನೆ', 'ಮಹಿಳಾ ಅನನ್ಯತೆ' ಪರಿಭಾಷೆಗಳು ಲಕ್ಷ್ಮಣ ರೇಖೆಯ ಒಳಗಡೆಯೇ ವ್ಯವಹರಿಸುತ್ತವೆ. ಹೀಗಾಗಿ ಈ ಪರಿಭಾಷೆಗಳಿಗೆ ಯಾವುದೇ ವಿರೋಧ ಕಂಡು ಬಂದಿಲ್ಲ; 'ಮಹಿಳಾ ಅಸ್ಮಿತೆಯ' ಮುಖವಾಡದಲ್ಲಿ ಸಾಂಪ್ರದಾಯಿಕ ಸಮಾಜವನ್ನು ಅವುಗಳು ಪೋಷಿಸುತ್ತಿವೆ. 'ಮಹಿಳಾ ಸಂವೇದನೆ'ಯು ಸಮಾಜದಿಂದ ಸಂಪೂರ್ಣವಾಗಿ ಕಳಚಿಕೊಂಡಾಗ ಮಾತ್ರ ರೂಪುದಾಳುತ್ತದೆ; ಈ ಸಾಧ್ಯತೆಯನ್ನು **ಗೌರಿಯರು** ಕಾದಂಬರಿಯು ಹಿಡಿದಿಡುತ್ತದೆ.

ನಾಲ್ಕು ತಲೆಮಾರಿನವರ ಸಂಕೀರ್ಣ ಜೀವನದ ಹದಗೊಂಡ ಕಥನದ ನೆಯ್ಗೆ ಪ್ರಸ್ತುತ ಕಾದಂಬರಿಯನ್ನು ರೂಪಿಸಿದೆ. ಅರಿವು ಪಡೆದುಕೊಂಡ ಆಧುನಿಕ ಮಹಿಳೆಯರಾದ ಶಿವಲೀಲಾ, ಅಕ್ಕಮ್ಮ, ಶ್ರೀದೇವಿಯರ ಮೂಲಕ ಮದುವೆ ಸಂಸ್ಥೆಯನ್ನು, ದಾಂಪತ್ಯ ನಿಷ್ಠೆಯನ್ನು ನಿಷ್ಠುರ ವಿಮರ್ಶೆಗೆ ಒಳಪಡಿಸಿದರೆ; ಸದಾಶಿವಪ್ಪ, ಶಿವಲಿಂಗಪ್ಪ ಹಾಗೂ ಶಂಕರಲಿಂಗ ಇವರ ಮೂಲಕ ರೈತರ ಜೀವನದ ಸಂದಿಗ್ಧತೆಯನ್ನು ಹಾಗೂ ಸವಾಲನ್ನು ಸೂಕ್ಷ್ಮವಾಗಿ ಕಾದಂಬರಿ ಪರಿಶೀಲಿಸುತ್ತದೆ. ಚಿನ್ನೂರಿನಲ್ಲಿ ಪಾರ್ವತಿ–ಸದಾಶಿವಪ್ಪ ಅವರ ಮನೆಯಲ್ಲಿ ನಡೆಯುವ ಗೌರಮ್ಮನ ನೋಪಿ ಪೂಜೆಯನ್ನು ನೆಪವಾಗಿಸಿಕೊಂಡು ಗೌರಿಯರ ಸಂಕಟಗಳನ್ನು, ಸಂಕಟದೊಳಗೂ ಅವರಲ್ಲಿ ಜೀವಂತವಾಗಿದ್ದ ಆತ್ಮವಿಶ್ವಾಸವನ್ನು, ಘನತೆಯನ್ನು, ಬದುಕಿನ ಜಿಗುಟುತನವನ್ನು ಕಾದಂಬರಿ ಹಿಡಿದಿಟ್ಟಿದೆ.

ಕಥನವು-ಕತೆಯಾಗಿರಬಹುದು, ಕಾದಂಬರಿಯಾಗಿರಬಹುದು-ಸಾಮಾಜಿಕ ಇರುವಿಕೆಯನ್ನು ಮಾತ್ರ ಹೇಳುವುದಿಲ್ಲ. ಅದು ಆಗುವಿಕೆಯ ಕುರಿತೂ ಮಾತನಾಡುತ್ತಿರುತ್ತದೆ. ಇರುವಿಕೆಯಲ್ಲಿ ವರ್ತಮಾನದ ಸಂದಿಗ್ಧತೆಗಳು, ಸಂಕಟಗಳು, ಸಂಕೀರ್ಣತೆಗಳು ಇದ್ದರೆ; ಸಾಮಾಜಿಕ ನೆಲೆಯಲ್ಲಿ ನಡೆಯುವ ಮುಖ್ಯ ಪಲ್ಲಟಗಳ ಮೂಲಕ ಆಗುವಿಕೆಯ ಸಾಧ್ಯತೆಯನ್ನು ಹೇಳುತ್ತಿರುತ್ತದೆ. ಗೌರಿಯರು ಕಾದಂಬರಿಯಲ್ಲಿ ಅಮರೇಶ ನುಗಡೋಣಿ ಅವರು ವರ್ತಮಾನದ ಮಹಿಳೆಯರು ಮತ್ತು ಕೃಷಿ ಭೂಮಿಯು ಎದುರಿಸುತ್ತಿರುವ ಹಲವು ಸಂಕೀರ್ಣ ಸಮಸ್ಯೆಗಳನ್ನು ಎದುರುಗೊಳ್ಳುತ್ತಲೇ ಸಾಮಾಜಿಕ ನೆಲೆಯ ಆಗುವಿಕೆಯನ್ನು ಮುಂಗಾಣುವಿಕೆಯ ಮೂಲಕ ಸುಮಾರು ನೂರಿನ್ನೂರು ವರ್ಷಗಳಲ್ಲಿ ಸಂಭವಿಸಬಹುದಾದ ಕೌಟುಂಬಿಕ ಪಲ್ಲಟದ ಸ್ವರೂಪವನ್ನು ಗ್ರಹಿಸುತ್ತಾರೆ; ಅದು ಅವರ ಸಾಮರ್ಥ್ಯವಲ್ಲದೆ ಬಾಹ್ಯ ನೆಲೆಗಳಲ್ಲಿ ಸಾಮಾಜಿಕ ಪಲ್ಲಟವನ್ನು ಒಪ್ಪಿಕೊಳ್ಳುವ ಬಹುಸಂಖ್ಯಾತರು ಕುಟುಂಬದಲ್ಲಿ ನಡೆಯುವ ಬದಲಾವಣೆಗಳನ್ನು ಒಪ್ಪಿಕೊಳ್ಳುವುದಿಲ್ಲ ಹಾಗೂ ಸಹಿಸುವುದಿಲ್ಲ. ಸ್ತ್ರೀಯರನ್ನು ಕುಟುಂಬದೊಂದಿಗೆ ಸಮೀಕರಿಸಿ ನೋಡುವ ದೃಷ್ಟಿಕೋನವು ಕೌಟುಂಬಿಕ ಜೀವನದ ಸಂದರ್ಭದಲ್ಲಿ ಸಾಂಪ್ರದಾಯಿಕತೆಯನ್ನೇ ಉಳಿಸಿಕೊಳ್ಳಲು ಅಪೇಕ್ಷಿಸುತ್ತದೆ ಮತ್ತು ಒತ್ತಾಯಿಸುತ್ತದೆ. ಕುಟುಂಬ ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಹೆಣ್ಣಿನ ಮೇಲೆಯೇ ವರ್ಗಾಯಿಸುತ್ತದೆ; ಹೆಣ್ಣೊಬ್ಬಳು ಸಾಂಪ್ರದಾಯಿಕತೆಯನ್ನು ನಿರಾಕರಿಸುವುದೆಂದರೆ, ಕುಟುಂಬವನ್ನು ಛಿದ್ರಗೊಳಿಸುವುದೇ ಆಗಿದ್ದರೆ; ಈ ಪ್ರಕ್ರಿಯೆ ಅನೇಕರಲ್ಲಿ ತಲ್ಲಣವನ್ನುಂಟು ಮಾಡುತ್ತದೆ.

ಸುಮಾರು ಮುಂದಿನ ನೂರಿನ್ನೂರು ವರ್ಷಗಳಲ್ಲಿ ಸಂಭವಿಸಬಹುದಾದ ಸಾಮಾಜಿಕ ನೆಲೆಯ ಆಗುವಿಕೆಯು ಕೌಟುಂಬಿಕ ಪಲ್ಲಟದ ಮೂಲಕ ಗ್ರಹಿಸುವ ಅಮರೇಶ ನುಗಡೋಣಿ, ಅವರು **ಗೌರಿಯರು** ಕಾದಂಬರಿಯನ್ನು ವಿಮರ್ಶಕರು ಹಾಗೂ ಓದುವ ವರ್ಗವು ಹೇಗೆ ಗ್ರಹಿಸಿದ್ದಾರೆ ಎನ್ನುವ ಸಣ್ಣ ಕುತೂಹಲದಿಂದ ಗೌರಿಯರು ಕೃತಿಯ ಬಗ್ಗೆ ಬಂದಂತಹ ಲೇಖನಗಳನ್ನು ಒಂದೆಡೆಗೆ ಸಂಪಾದಿಸಿ ಕೊಟ್ಟಿದ್ದೇನೆ. ಇಲ್ಲಿಯ ಹತ್ತು ಲೇಖನಗಳೂ ಭಿನ್ನ ದೃಷ್ಟಿಕೋನವನ್ನು ಒಳಗೊಂಡಿವೆ.

ಗೌರಿಯರು ಕಾದಂಬರಿಗೆ ಮುನ್ನುಡಿ ಬರೆದ ಎಂ.ಎಸ್. ಆಶಾದೇವಿಯವರು ಅಮರೇಶ ನುಗಡೋಣಿ ಅವರು ಸಾಮಾಜಿಕತೆಯನ್ನೇ ಕೃತಿಯೊಂದರ ಆಶಯ ವಾಗಿಸಿದ್ದಾರೆ ಎನ್ನುತ್ತಾರೆ. ಭಾರತದ ಸಾಂಸ್ಕೃತಿಕ ಪರಿಪ್ರೇಕ್ಷ್ಯದಲ್ಲಿ 'ಗೌರಿ' ಸಾಂಪ್ರದಾಯಿಕ ಪ್ರತಿಮೆಯಾಗಿ ಬಳಸಲ್ಪಡುತ್ತದೆ; ಆದರೆ **ಗೌರಿಯರು** ಕಾದಂಬರಿಯಲ್ಲಿನ ಸ್ವ ಅಧಿಕೃತತೆಯನ್ನು ಹೊಂದಿದ ಮಹಿಳೆಯರು ಹಾಗೂ ಹೆಣ್ಣು ಮಕ್ಕಳು, ಹೆಣ್ಣಿನ ಸಾಂಪ್ರದಾಯಿಕ ಪ್ರತಿಮೆಯನ್ನು ನುಚ್ಚುನೂರು ಮಾಡಿ ತಮ್ಮ ಆಯ್ಕೆಯ ಬದುಕನ್ನು

ಬಾಳಿದ್ದಾರೆ ಎನ್ನುವ ಆಶಾದೇವಿ ಅವರು ಕಥಾನಾಯಕಿಯರನ್ನು "ಸ್ವಯಂ ಅನಾವರಣಗೊಂಡ ಹೆಣ್ಣುಗಳು" ಎಂದು ಪ್ರತಿಮೀಕರಿಸಿದ್ದಾರೆ.

ಮೇಟಿ ಮಲ್ಲಿಕಾರ್ಜುನ ಅವರು "ಕತೆಯಾದ ಗೌರಿಯರು" ಎನ್ನುವ ವಿಮರ್ಶಾ ಲೇಖನದಲ್ಲಿ ಗೌರಿ ಹೆಸರಿನ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಚರ್ಚಿಸುತ್ತಾರೆ. ರೂಪಕವೂ ವ್ಯಕ್ತಿ ಸೂಚಕವೂ ಆಗಿರುವ 'ಗೌರಿಯರು' ಎನ್ನುವ ಪರಿಕಲ್ಪನೆಯು ದಾಂಪತ್ಯದ ಹಂಗು ತೊರೆದ ರೂಪಕವಾಗಿದೆ ಎಂದು ಮೇಟಿ ಮಲ್ಲಿಕಾರ್ಜುನ ಅವರು ಹೇಳುತ್ತಾರೆ; ಪ್ರಸ್ತುತ ಕಾದಂಬರಿಯನ್ನು ಸ್ತ್ರೀ ಚಿಂತನೆಯ ಕಥನವಾಗಿ ಪರಿಗಣಿಸಿರುವುದನ್ನು ಆಕ್ಷೇಪಿಸುವ ಇವರು ಭೂ ಮಾಫಿಯಾ, ಭೂ ಮಾಲೀಕತ್ವ, ಭೂಮಿಯೊಂದಿಗಿನ ನೆಂಟಸ್ತಿಕೆಯ ಪ್ರಶ್ನೆ, ಧರ್ಮದ ಪ್ರತಿನಿಧಿಗಳಾದ ಮಠದ ಸ್ವಾಮಿಗಳ ಅಸ್ತಿತ್ವದ ಪ್ರಶ್ನೆ, ಅಣ್ಣ–ತಮ್ಮಂದಿರ ಸಂಬಂಧ ಪ್ರಶ್ನೆಗಳನ್ನು ಕೇಂದ್ರೀಕರಿಸಿ ಕಾದಂಬರಿ ನಿರೂಪಿತವಾಗಿದೆ ಎನ್ನುತ್ತಾರೆ; ಆದರೂ ಮೇಟಿ ಮಲ್ಲಿಕಾರ್ಜುನ ಅವರು ತಾವೇ ಎತ್ತಿದ ಪ್ರಶ್ನೆಗಳನ್ನು ನಿರ್ದಿಷ್ಟಪಡಿಸಿಕೊಂಡು ಕಾದಂಬರಿಯ ಓದನ್ನು ಮಂಡಿಸುವುದಿಲ್ಲ. ಗಂಡು–ಹೆಣ್ಣಿನ ಖಾಸಗಿ ಸಂಬಂಧಗಳನ್ನು ಕೇಂದ್ರೀಕರಿಸಿಕೊಂಡು ಹೆಣ್ಣಿನ ನಡಿಗೆಯಲ್ಲಿ ಕಾದಂಬರಿಯ ಬೆಳವಣಿಗೆಯನ್ನು ಗುರುತಿಸುತ್ತಾರೆ. ಕಥಾನಾಯಕಿಯರು ಕಂಡುಕೊಂಡ ಹಾಗೂ ಸಾಧ್ಯವಾಗಿಸಿದ ಪರ್ಯಾಯ ದಾರಿಗಳನ್ನು ವಿಮರ್ಶೆಯಲ್ಲಿ ಗುರುತಿಸದೇ, ಆಕೆಯು ಅನುಭವಿಸಿದ ಸಂಕಟಗಳನ್ನೇ ಢಾಳಾಗಿ ಕಾಣಿಸುತ್ತಾರೆ.

ಸುಭಾಷ ರಾಜಮಾನೆ ಅವರು "ಗೌರಿಯರು : ಹೆಣ್ಣು ನೋಟದ ದಿಟ್ಟ ಕಥನ" ಎನ್ನುವ ವಿಮರ್ಶಾ ಲೇಖನದಲ್ಲಿ ಕಥಾನಾಯಕಿಯರನ್ನು ಕೇಂದ್ರೀಕರಿಸಿಕೊಂಡು ಪ್ರಧಾನ ಚರ್ಚೆ ಬೆಳೆಸುತ್ತಾರೆ. 'ರೈತರ ಆತ್ಮ(ಸ್ವ) ಹತ್ಯೆಯ ಕಥನವನ್ನು ಆನುಷಂಗಿಕವಾಗಿ ವಿಶ್ಲೇಷಿಸುತ್ತಾರೆ. ಕಾದಂಬರಿಯಲ್ಲಿನ ಹೆಣ್ಣು ಪಾತ್ರಗಳಲ್ಲಿ ಆಂತರಿಕ ಸಂಘರ್ಷ ಕಂಡು ಬರುವುದಿಲ್ಲ ಎನ್ನುವ ತೀರ್ಮಾನಕ್ಕೆ ಬರುವ ಸುಭಾಷ ರಾಜಮಾನೆ ಅವರು "ಶಿವಲೀಲಾ, ಅಕ್ಕಮ್ಮ ಹಾಗೂ ಶ್ರೀದೇವಿಯವರ ನಿರ್ಧಾರಗಳಿಂದಾಗಿ ಕೌಟುಂಬಿಕವಾಗಿ, ಸಾಮಾಜಿಕವಾಗಿ ಕೆಲವು ಪರಿಣಾಮಗಳು ತೋರುತ್ತವೆ; ಈ ಪರಿಣಾಮಗಳ ಬಗ್ಗೆ ಅವರು ತಲೆಕೆಡಿಸಿಕೊಳ್ಳುವುದಿಲ್ಲ" ಎಂದು ಹೇಳುತ್ತಾರೆ; ಆದರೆ ಆ ಕೆಲವು ಪರಿಣಾಮಗಳು ಯಾವುವು ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳುವುದಿಲ್ಲ. ಸಾಮಾಜೀಕರಣದಿಂದ ಸಂಪೂರ್ಣವಾಗಿ ಬಿಡಿಸಿಕೊಂಡು, ಸ್ವಯಂ ಅನಾವರಣ ಗೊಂಡ ಶ್ರೀದೇವಿ ಕಥನ ನಿರೂಪಣೆಯನ್ನು ಸ್ಥಿರವಲ್ಲದ ನಿರ್ಧಾರಗಳಿಂದಾಗಿ ಅಸಹಜ ವರ್ತನೆಯಿಂದ ತೊಳಲುವ ಪಾತ್ರವಾಗಿ ವಿವರಿಸುತ್ತಾರೆ. ಕುಟುಂಬ, ವಿವಾಹ ಎನ್ನುವ ಸಾಂಪ್ರದಾಯಿಕ ಗ್ರಹಿಕೆಯ ಚೌಕಟ್ಟಿನೊಳಗಡೆಯೇ ಹೆಣ್ಣನ್ನು ಸೀಮಿತಗೊಳಿಸಿದಾಗ ಇಂತಹ ನಿರೂಪಣೆಗಳು ಕಾಣಿಸುತ್ತವೆ.

ಸುಧಾಕರ ದೇವಾಡಿಗ ಬಿ. ಅವರು "ಗೌರಿಯರು : ನವ ಬದುಕಿನ ಒಳ ಬೇಗುದಿಗಳ ಅನ್ವೇಷಣೆ" ಎನ್ನುವ ಲೇಖನದಲ್ಲಿ ವರ್ತಮಾನದಲ್ಲಿ ರೂಪುಗೊಳ್ಳುತ್ತಿರುವ ಬದುಕಿನ

ಪ್ರಕ್ರಿಯೆಯಾಗಿ ಪ್ರಸ್ತುತ ಕಾದಂಬರಿಯನ್ನು ಪರಿಭಾವಿಸುತ್ತಾರೆ; ಈ ಕಾದಂಬರಿಯನ್ನು ಸ್ತ್ರೀವಾದಿ ಕಾದಂಬರಿಯೆಂದು ಸರಳೀಕರಿಸಲು ಒಪ್ಪದ ಸುಧಾಕರ ದೇವಾಡಿಗ ಅವರು ಕೃಷಿ ಮತ್ತು ಕೃಷಿಕರ ಜೀವನ ಪಲ್ಲಟಗಳು, ವಿವಾಹವೆಂಬ ಸಾಮಾಜಿಕ ಸಂಸ್ಥೆ, ಆಧುನಿಕ ಮಹಿಳೆಯರ ಬದುಕಿನ ಸ್ಥಿತ್ಯಂತರದ ಸ್ವರೂಪ ನಂಬುಗೆಯ ಜಗತ್ತಿನ ದೈವಿಕ ದೃಷ್ಟಿ ಎನ್ನುವ ಮೂರು ಆಯಾಮಗಳಲ್ಲಿ ಹರಡಿಕೊಂಡಿದೆ ಎಂದು ಹೇಳುತ್ತಾರೆ; ಮತ್ತು ಈ ನೆಲೆಯಲ್ಲಿಯೇ ಕಾದಂಬರಿಯ ಶೋಧ ನಡೆಸುತ್ತಾರೆ. ಸುಧಾಕರ ದೇವಾಡಿಗ ಅವರು ಕಾದಂಬರಿಯಲ್ಲಿನ ಮಹಿಳೆಯರ ಹಾಗೂ ಹೆಣ್ಣುಮಕ್ಕಳ ಜೀವನಕ್ರಮವನ್ನು ಎರಡು ನೆಲೆಗಳಲ್ಲಿ ವಿಂಗಡಿಸಿಕೊಂಡು ನೋಡುತ್ತಾರೆ; ಅವುಗಳೆಂದರೆ ಪಾರಂಪರಿಕ ಜೀವನಕ್ರಮ ಹಾಗೂ ಆಧುನಿಕ ಜೀವನ ಕ್ರಮ. ಕೃಷಿಕ ಹಾಗೂ ಗ್ರಾಮೀಣ ಸಮುದಾಯದ ಮಹಿಳೆಯರನ್ನು ಪಾರಂಪರಿಕ ಜೀವನಕ್ರಮದಡಿಯಲ್ಲಿ ಚರ್ಚಿಸಿದರೆ ಆಧುನಿಕ ಜೀವನ ಕ್ರಮವನ್ನು ಶಿಕ್ಷಣ ಪಡೆದ ಉದ್ಯೋಗಸ್ಥ ಮಹಿಳೆಯರ ಜೀವನನ್ನಾಧರಿಸಿ ಪರಿಶೀಲಿಸುತ್ತಾರೆ. ಸ್ವತಂತ್ರವಾಗಿ, ಏಕಾಂಗಿಯಾಗಿ ಬದುಕನ್ನು ಕಟ್ಟಿಕೊಳ್ಳುವ ಸ್ತ್ರೀಯರ ಹೊಣೆಗಾರಿಕೆಯನ್ನು 'ಗೌರಿಯರು' ಕಥನ ನಿರೂಪಿಸುತ್ತದೆ ಎನ್ನುತ್ತಾರೆ.

ಕೋಡಿಬೆಟ್ಟು ರಾಜಲಕ್ಷ್ಮಿ ಅವರು "ತಾಯಿ ಹೃದಯದ ಕಾದಂಬರಿ" ಎನ್ನುವ ವಿಮರ್ಶಾ ಲೇಖನದಲ್ಲಿ ಗೌರಿಯರು ಕಾದಂಬರಿಯು ಮೂವರು ಕಥಾನಾಯಕಿಯರನ್ನು ಮಾತ್ರ ಕೇಂದ್ರೀಕರಿಸಿಕೊಂಡಿಲ್ಲ; 'ಭೂಮಿತಾಯಮ್ಮ' ಎನ್ನುವ ಗೌರಿಯನ್ನೂ ಒಳಗೊಂಡು ಕಥಾನಿರೂಪಣೆ ಬೆಳೆದಿದೆ ಎನ್ನುತ್ತಾರೆ. ಬಾಲ್ಯದಲ್ಲಿ ತಾವು ಕಂಡ ರೈತರ ಬದುಕನ್ನು ನೆನಪಿಸಿಕೊಂಡು ಕಾದಂಬರಿಯಲ್ಲಿ ನಿರೂಪಿತವಾದ ರೈತರ ಹೈರಾಣುಗಳಿಗೆ ಕಾರಣಗಳನ್ನು ಶೋಧಿಸುತ್ತಾರೆ. ಕೋಡಿಬೆಟ್ಟು ರಾಜಲಕ್ಷ್ಮಿ ಅವರು "ಸ್ವಾತಂತ್ರ್ಯವು ಯಾವಾಗಲೂ ಜವಾಬ್ದಾರಿಯ ಹೊರೆಯೊಂದಿಗೆ ಲಭಿಸುತ್ತದೆ ಎನ್ನುವ ತಾತ್ವಿಕ ಚೌಕಟ್ಟಿನೊಳಗಡೆ ಕಥಾನಾಯಕಿಯರನ್ನು ವಿಶ್ಲೇಷಿಸುತ್ತಾರೆ; ಸದಾಶಿವಪ್ಪನನ್ನೂ 'ಮಹಾಗೌರಿ'ಯೆಂದು ಗುರುತಿಸುವ ವಿಮರ್ಶಕಿ, 'ಅವರವರ ನಡೆಗಳನ್ನು ಗೌರವಿಸುವುದು' ಎನ್ನುವ ಸದಾಶಿವಪ್ಪನ ಸ್ವಭಾವದ ಮೂಲ ಸ್ರೋತ ಇಡೀ ಕಾದಂಬರಿಯು ಅಂತಃಸತ್ವವನ್ನು ರೂಪಿಸಿದೆ ಎನ್ನುತ್ತಾರೆ. ಶ್ರೀದೇವಿ ಪಾತ್ರವನ್ನು ಮಾತ್ರ ಸಾಮಾಜಿಕ ಮೌಲ್ಯಗಳಡಿಯಲ್ಲಿ ವಿವರಿಸಿಕೊಂಡು ಅವಳಲ್ಲಿ ವಿವೇಕದ ಕೊರತೆಯಿದೆ ಎನ್ನುವ ತೀರ್ಮಾನಕ್ಕೆ ಬರುತ್ತಾರೆ.

ರಾಮಲಿಂಗಪ್ಪ ಬೇಗೂರು ಅವರು "ಗೌರಿಯರು : ಕುಟುಂಬ, ದಾಂಪತ್ಯ ಸಂಕಥನ" ಎನ್ನುವ ಲೇಖನದಲ್ಲಿ ಸಮಗ್ರ ಕಾದಂಬರಿಯನ್ನು ಕುಟುಂಬ, ದಾಂಪತ್ಯ ಸಂಕಥನವಾಗಿ ನೋಡುತಾರೆ; ಕೃಷಿ, ವ್ಯಾಪಾರ, ಸರ್ಕಾರಿ ಉದ್ಯೋಗ, ಸಾಂಪ್ರದಾಯಿಕ ಕೃಷಿ ಬದುಕು ಕಥಾಹಂದರದಲ್ಲಿ ಬಂದಿದ್ದರೂ, ಕಥಾನಿರೂಪಣೆಯ ಒತ್ತು ಕುಟುಂಬ ಸಂಕಥನವನ್ನು,

ದಾಂಪತ್ಯ ಸಂಕಥನವನ್ನು ಕಟ್ಟಿಕೊಡುವುದರಲ್ಲಿ ಇದೆ ಎಂದು ಹೇಳುತ್ತಾರೆ. ಕಾದಂಬರಿಯಲ್ಲಿ ನಿರೂಪಣೆಗೊಳ್ಳುವ ದಾಂಪತ್ಯ ವಿಘಟನೆಗೆ ಆರ್ಥಿಕ ಸ್ವಾತಂತ್ರ್ಯವು ಮಾತ್ರ ಕಾರಣವಾಗುವುದಿಲ್ಲ; ಸಂಬಂಧಗಳ ಬಾವುಣಿಕೆಯ ಕೆಲವು ಅಭಾವ, ಸಾಂಗತ್ಯದ ಅಭಾವ ಹಾಗೂ ಪೀಳಿಗೆಗಳ ನಡುವಣ ಬಂಧುತ್ವದ ಸರಿಯಾದ ನಿಭಾವಣೆ ಇಲ್ಲದಿರುವುದೂ ಕಾರಣವಾಗಿದೆ ಎಂದು ವಿಶ್ಲೇಷಿಸುತ್ತಾರೆ. ಒಟ್ಟಾರೆಯಾಗಿ ಬದಲುಗೊಳ್ಳುವ ಕುಟುಂಬ, ದಾಂಪತ್ಯದ ಸಂಕಥನವೆಂದು ಕಾದಂಬರಿಯನ್ನು ತಾತ್ವೀಕರಿಸುತ್ತಾರೆ.

ಜ್ಯೋತಿ ಅವರು "ಜಗತ್ತಿನ ಪಲ್ಲಟಗಳ ಒಂದು ಒಳನೋಟ - ಗೌರಿಯರು" ಎನ್ನುವ ಲೇಖನದಲ್ಲಿ ಕಾದಂಬರಿಯು ರೈತರ ವಿಭಿನ್ನ ಸಂಕಷ್ಟಗಳನ್ನು ವೈವಾಹಿಕ ಸಂಬಂಧಗಳ ವಿವಿಧ ಆಯಾಮಗಳನ್ನು ಕುಟುಂಬ, ವ್ಯವಸ್ಥೆ ಹಾಗೂ ಪೀಳಿಗೆಗಳ ನಡುವಿನ ಅಂತರವನ್ನು ಬಹಳ ಸಂಕೀರ್ಣ ನೆಲೆಯಲ್ಲಿ ಕಟ್ಟಿಕೊಡುತ್ತದೆ ಎನ್ನುತ್ತಾರೆ. "ನಮ್ಮ ಸಮಸ್ಯೆಗಳನ್ನು ನಾವೇ ನಿರ್ವಹಿಸಬೇಕು; ಸುತ್ತಲಿನ ಸಮಾಜದ ಮಾತಿಗೆ ಅಂಜದೇ, ತಮಗೆನಿಸಿದ ಬದುಕನ್ನು ನಿರ್ಭೀತಿಯಿಂದ ಕಟ್ಟಿಕೊಳ್ಳಬೇಕು ಎನ್ನುವ ಆಶಯವನ್ನು ಕಾದಂಬರಿಯು ಅನಾವರಣಗೊಳಿಸುತ್ತದೆ ಎಂದು ಕಾದಂಬರಿಯ ತಾತ್ವಿಕತೆಯನ್ನು ಸ್ಥೂಲವಾಗಿ ಕಟ್ಟಿಕೊಡುತ್ತಾರೆ.

ಸಬಿತಾ ಬನ್ನಾಡಿ ಅವರು "ನವ ಸಾಮಾಜಿಕತೆ ಮತ್ತು ಗೌರಿಯರು" ಎನ್ನುವ ಲೇಖನದಲ್ಲಿ ಹೆಣ್ಣು ಮತ್ತು ಭೂಮಿ ಎರಡೂ ಕೂಡಾ ಅನ್ಯರ ಕೈಯ ದಾಳವಾದ ಒಂದು ಸ್ಥಿತಿ ಮತ್ತು ಅದರ ಬಿಡುಗಡೆಯ ಸಾಧ್ಯತೆಯೆರಡನ್ನೂ ಪ್ರಸ್ತುತ ಕಾದಂಬರಿ ಯೋಚಿಸಿದೆ ಎಂದು ಹೇಳುತ್ತಾರೆ. ಶಿವಲೀಲಾ ಮತ್ತು ಅಕ್ಕಮ್ಮನಿಗಿಂತಲೂ ಮುಂದಿನ ಹಂತದಲ್ಲಿರುವ 'ಹೊಸಹೆಣ್ಣು' ಶ್ರೀದೇವಿ ಎಂದು ಗುರುತಿಸುವ ಸಬಿತಾ ಬನ್ನಾಡಿ ಅವರು 'ಹೊಸ ಹೆಣ್ಣಿ'ನೊಂದಿಗೆ ಎಚ್ಚೆತ್ತ ಸ್ವಪ್ರಜ್ಞೆಯ ಹೊಸ ಗಂಡೂ ಹುಟ್ಟಿಲ್ಲ ಎನ್ನುವ ಸೂಚನೆ ಕಾದಂಬರಿಯಲ್ಲಿ ಕಾಣುತ್ತದೆನ್ನುತ್ತಾರೆ. ಒಟ್ಟಾರೆಯಾಗಿ 'ಭವಿಷ್ಯದ ಸಾಧ್ಯತೆಯನ್ನು ಮುಂಗಾಣುವ ರೂಪ' ಎಂದು ಕಾದಂಬರಿಯನ್ನು ವ್ಯಾಖ್ಯಾನಿಸುತ್ತಾರೆ.

ಸಿ.ಎಸ್. ಭೀಮರಾಯ ಅವರು 'ಗೌರಿಯರು : ವಿಷಮ ದಾಂಪತ್ಯದ ಕಥನ' ಎನ್ನುವ ವಿಮರ್ಶಾ ಲೇಖನದಲ್ಲಿ ವಿವಾಹ ಸಂಬಂಧಿ ವಿಷಯದಲ್ಲಿ ಹೆಣ್ಣೊಬ್ಬಳು ಸ್ವತಂತ್ರವಾಗಿ ತೆಗೆದುಕೊಳ್ಳುವ ನಿರ್ಧಾರಗಳಿಂದಾಗಿ ಯಾವ ಪರಿಣಾಮಗಳುಂಟಾಗುತ್ತವೆ ಎಂಬುವುದನ್ನು ಕಾದಂಬರಿಯ ವಸ್ತು, ಸಮಸ್ಯೀಕರಿಸಿಕೊಂಡು ನೋಡುತ್ತದೆ ಎನ್ನುತ್ತಾರೆ. ಭಾರತೀಯ ಸಮಾಝುದ ಡಾಂಭಿಕತೆಯನ್ನು ಸ್ವಚ್ಛಂದ ಮನಸ್ಸಿನ ಕಥಾನಾಯಕಿಯರ ಮನೋವ್ಯಾಪಾರದ ನಿರೂಪಣೆಯ ಹಂದರದೊಳಗೆ ಕಾದಂಬರಿಕಾರರು ಹೆಣೆದು ಕೊಡುತ್ತಾರೆ. ಹೆಣ್ಣು ಮಕ್ಕಳ ಪ್ರಜ್ಞೆಯ ಬೆಳಕನ್ನು ಸಂಸ್ಕೃತಿಯ ಹಂದರದೊಳಗೆ ಕಾಣಿಸುತ್ತಾರೆ ಎಂದು ಸಿ.ಎಸ್. ಭೀಮರಾಯ ಹೇಳುತ್ತಾರೆ.

“ಉರದಲ್ಲಿ ಮುಳ್ಳುಂಟೆಂದು ಅಪ್ಪಲಾರೆ” ಎನ್ನುವ ಶೈಲಜ ಹಿರೇಮಠ ಅವರು **ಗೌರಿಯರು** ಕಾದಂಬರಿಯು ಮುಖ್ಯವಾಗಿ ಎರಡು ವಿಷಯಗಳಿಗೆ ಪ್ರಧಾನ ಆದ್ಯತೆ ನೀಡುತ್ತದೆ ಎನ್ನುತ್ತಾರೆ; ಅವುಗಳೆಂದರೆ ೧. ಕೃಷಿ ಭೂಮಿಯನ್ನು ಹಾಗೂ ಕೃಷಿಯನ್ನೇ ಜೀವನೋಪಾಯವಾಗಿಸಿಕೊಂಡ ರೈತ ಬದುಕನ್ನು ಸಮಸ್ಯೀಕರಿಸಿಕೊಂಡು ನೋಡುವುದು. ೨. ಕುಟುಂಬ ಹಾಗೂ ಮಹಿಳಾ ಹಕ್ಕುಗಳನ್ನು ಮುಖಾಮುಖಿಯಾಗಿಸಿ ಮಹಿಳಾ ಏಜೆನ್ಸಿಯನ್ನು ಕಂಡುಕೊಳ್ಳುವುದು. ಸಾಮಾಜಿಕ ಬದಲಾವಣೆ ಸಂಭವಿಸುವುದು ಕುಟುಂಬದ ನಿರಚನದಿಂದ ಎನ್ನುವ ತಾತ್ವಿಕತೆಯನ್ನು ಕಾದಂಬರಿಯು ಸ್ಥೂಲವಾಗಿ ಕಟ್ಟಿಕೊಡುತ್ತದೆ ಎನ್ನುತ್ತಾರೆ.

ಗೌರಿಯರು ಕಾದಂಬರಿಯನ್ನು ಕೇಂದ್ರೀಕರಿಸಿಕೊಂಡು ಬಂದ ಲೇಖನಗಳ ಸಂಪಾದನಾ ಕೃತಿಗೆ ದಿಟದ ಹೆಜ್ಜೆಗಳು ಎನ್ನುವ ಶೀರ್ಷಿಕೆ ಹೊಂದುತ್ತದೆ ಎನ್ನುವ ಕಾರಣಕ್ಕಾಗಿ ಇಡಲಾಗಿದೆ. **ಗೌರಿಯರು** ಕೃತಿಯಲ್ಲಿ ಕಥಾನಾಯಕಿಯರು ಸಾಮಾಜೀಕರಣದಿಂದ, ಸಾಂಸ್ಕೃತೀಕರಣದಿಂದ ಭಾಗಶಃ ಬಿಡಿಸಿಕೊಂಡು ಇಲ್ಲವೆ ಸಂಪೂರ್ಣವಾಗಿ ಕಳಚಿಕೊಂಡು ಸ್ವ ಇಚ್ಛೆಯಿಂದ ಹೊಸ ಹಾದಿಯನ್ನು ಕಂಡುಕೊಂಡವರು ಹೊಸ ಹೆಣ್ಣಿನ, ಹೊಸ ದಾರಿಯನ್ನು ಪ್ರಗತಿಪರ ಚಿಂತಕರು, ಇನ್ನೂ ಒತ್ತುಕೊಟ್ಟು ಹೇಳುವುದಾದರೆ ಲೇಖಕ/ಲೇಖಕರಿಬ್ಬರೂ ಹೇಗೆ ಸ್ವೀಕರಿಸಿದ್ದಾರೆ ಎನ್ನುವ ಕುತೂಹಲ ಈ ಕೃತಿ ರೂಪುದಾಳಲು ಕಾರಣವಾಗಿದೆ. **ಗೌರಿಯರು** ಕೃತಿಯನ್ನು ಅನುಲಕ್ಷಿಸಿ ಬರೆದ ಇಲ್ಲಿನ ವಿಭಿನ್ನ ಓದುಗಳು, ಓದುವ ವಿಭಿನ್ನ ದೃಷ್ಟಿಕೋನಗಳನ್ನು ಪರಿಚಯಿಸಿವೆ.

ಪ್ರಸ್ತುತ ಕಾದಂಬರಿಯಲ್ಲಿನ ಶ್ರೀದೇವಿ ಪಾತ್ರವು ಬಹುಸಂಖ್ಯಾತ ವಿಮರ್ಶಕರಿಗೆ ಒಪ್ಪಿಕೊಳ್ಳದಷ್ಟು, ಸಹಿಸದಷ್ಟು ಕಿರಿಕಿರಿಯನ್ನುಂಟು ಮಾಡಿದೆ. ಶಿವಲೀಲಾ ಮತ್ತು ಅಕ್ಕಮ್ಮ ಇವರ ಬದುಕಿನ ಆಯ್ಕೆಗಳನ್ನು ಪ್ರಗತಿಪರ ನಡೆಯೆಂದು ಗುರುತಿಸುವ ಅನೇಕ ವಿಮರ್ಶಕರು, ಓದುಗರು ಶ್ರೀದೇವಿಯ ಜೀವನ ಆಯ್ಕೆಯ ಬಗ್ಗೆ ಮುನಿಸು ತೋರಿಸುತ್ತಾರೆ; ಅಸಹನೆ ವ್ಯಕ್ತಪಡಿಸುತ್ತಾರೆ. ಪುರುಷರು ಸನ್ಯಾಸತ್ವದ ಆಯ್ಕೆಯ ಮೂಲಕ, ವಿವಾಹ ಬಾಹಿರ ಸಂಬಂಧಗಳನ್ನು ಹೊಂದುವ ಮೂಲಕ, ಕುಟುಂಬ, ಮದುವೆ ಮೊದಲಾದ ಸಾಮಾಜಿಕ ಸಂಸ್ಥೆಗಳನ್ನು ಪುರಾತನ ಕಾಲದಿಂದಲೂ ಛಿದ್ರಗೊಳಿಸಿಕೊಂಡು ಬಂದಿದ್ದಾರೆ; ಇದಕ್ಕೆ ಯಾವ ವಿರೋಧವೂ ಆತಂಕವೂ ವ್ಯಕ್ತವಾಗಿಲ್ಲ; ಪುರುಷ ಕುಟುಂಬ ವಿರೋಧಿ ನಡೆಯು ಅಕ್ಷರದಲ್ಲಾಗಲಿ, ಮೌಖಿಕದಲ್ಲಾಗಲಿ ದಾಖಲಾಗಿಲ್ಲ ಹಾಗೂ ಅಭಿವ್ಯಕ್ತಿಗೊಂಡಿಲ್ಲ; ಬದಲಾಗಿ ಅದು ಸಹಜ ಸಾಮಾಜಿಕ ನಡವಳಿಕೆಯಾಗಿ ಸ್ವೀಕೃತವಾಗಿದೆ. ಆದರೆ ಮಹಿಳೆಯರು ಕುಟುಂಬ, ಮದುವೆ ಸಂಸ್ಥೆಯಲ್ಲಿರುವ ಮೌಲ್ಯಗಳನ್ನು ಭಂಜಿಸಿದರೆ, ನಿರಾಕರಿಸಿದರೆ ಜಗತ್ತು ಪ್ರಳಯವಾದಂತೆ ಬಹಳ ಭಾವೋದ್ವೇಗದ ಚರ್ಚೆಗಳು ಹೊರಹೊಮ್ಮುತ್ತವೆ.

ಕಾದಂಬರಿಯೊಳಗಿನ ತೀವ್ರಗಾಮಿ ಮಹಿಳಾ ಪಾತ್ರಗಳನ್ನು ಸಾಮಾಜಿಕ ಮೌಲ್ಯಗಳ ಚೌಕಟ್ಟಿನೊಳಗಡೆ ತೂಗಿದರೆ ಅಸಮಾನತೆಯನ್ನು ಉಳಿಸಿಕೊಂಡಂತೆ ಹಾಗೂ ಸಮರ್ಥಿಸಿದಂತೆ ಆಗುವುದಿಲ್ಲವೆ? ಈ ಮನೋಭಾವ ಪ್ರಗತಿಪರರಲ್ಲಿ ಅಂತರ್ಗತಗೊಂಡ ಕಾರಣಕ್ಕಾಗಿ ಅಮೂಲಾಗ್ರ ಸಾಮಾಜಿಕ ಬದಲಾವಣೆ ಸಾಧ್ಯವಾಗುತ್ತಿಲ್ಲವೇನೋ?

ಡಾ. ಶೈಲಜ ಇಂ. ಹಿರೇಮಠ
ಹಿರಿಯ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

◆◆

ಕೃತಜ್ಞತೆಗಳು

'ದಿಟದ ಹೆಜ್ಜೆಗಳು' ಸಂಪಾದನಾ ಕೃತಿಯು ಹಿರಿಯ ಚಿಂತಕರಾದ ಡಾ. ಅಮರೇಶ ನುಗಡೋಣಿ ಅವರ **ಗೌರಿಯರು** ಕಾದಂಬರಿಯನ್ನು ಕೇಂದ್ರೀಕರಿಸಿಕೊಂಡು ಬಂದ ವಿಮರ್ಶಾ ಲೇಖನಗಳನ್ನು ಒಳಗೊಂಡಿದೆ. ಇಲ್ಲಿ ಒಟ್ಟು ಒಂಭತ್ತು ಲೇಖನಗಳಿವೆ; ಇಲ್ಲಿನ ಕೆಲವು ಲೇಖನಗಳು ಈಗಾಗಲೇ ಕೆಲವು ಪ್ರಮುಖ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಉಳಿದ ಕೆಲವು ಲೇಖನಗಳು ಆತ್ಮೀಯರಿಂದ ನಾನೇ ಕೇಳಿ ಬರೆಯಿಸಿದ್ದು. ಲೇಖನವನ್ನು ಬರೆದುಕೊಟ್ಟ ಎಂ.ಎಸ್. ಆಶಾದೇವಿ, ಮೇಟಿ ಮಲ್ಲಿಕಾರ್ಜುನ, ಸುಭಾಷ ರಾಜಮಾನೆ, ಸುಧಾಕರ ದೇವಾಡಿಗ ಬಿ., ಕೋಡಿಬೆಟ್ಟು ರಾಜಲಕ್ಷ್ಮಿ, ರಾಮಲಿಂಗಪ್ಪ ಟಿ. ಬೇಗೂರು, ಜ್ಯೋತಿ ಎ., ಸಬಿತಾ ಬನ್ನಾಡಿ ಹಾಗೂ ಸಿ.ಎಸ್. ಭೀಮರಾಯ ಈ ಎಲ್ಲರಿಗೂ ನನ್ನ ಕೃತಜ್ಞತೆಗಳು. ಡಿ.ಟಿ.ಪಿ. ಮಾಡಿಕೊಟ್ಟ ಬಸಮ್ಮ ಅವರಿಗೂ, ನನ್ನ ಲೇಖನವನ್ನು ಅಕ್ಷರ ಸಂಯೋಜನೆ ಮಾಡಿ, ಸಮಗ್ರ ಸಂಪಾದನೆಯನ್ನು ನೋಡಿ ಕರಡು ತಿದ್ದಿಕೊಟ್ಟ ವಿದ್ಯಾರ್ಥಿ ಮಿತ್ರರಾದ ಗುರುರಾಜ ಎನ್. ಹಾಗೂ ದೇವಿಂದ್ರಪ್ಪ ಅವರಿಗೆ, ಈ ಕೃತಿಯನ್ನು ಪ್ರಕಟಿಸುತ್ತಿರುವ ವಿಜಯಕಲ್ಯಾಣ ಪ್ರಕಾಶನದ ಡಾ. ನಂದೀಶ್ವರ ದಂಡೆ, ಮುಖಪುಟ ಕಲಾವಿದರಾದ ಶ್ರೀ ರಘು ಅಪಾರ ಈ ಎಲ್ಲರನ್ನು ಪ್ರೀತಿಯಿಂದ ನೆನಪಿಸಿಕೊಳ್ಳುವೆ.

ಡಾ. ಶೈಲಜ ಇಂ. ಹಿರೇಮಠ
ಹಿರಿಯ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬

◆◆

ಪರಿವಿಡಿ

ವಿಮರ್ಶಕರ ಕಣ್ಣಂಚಿನಲ್ಲಿ ಗೌರಿಯರು / 3

ಕೃತಜ್ಞತೆಗಳು / 10

೧. ಮುನ್ನುಡಿ / ೧
ಎಂ.ಎಸ್. ಆಶಾದೇವಿ

೨. ನವ ಸಾಮಾಜಿಕತೆ ಮತ್ತು ಗೌರಿಯರು / ೭
ಡಾ. ಸಬಿತಾ ಬನ್ನಾಡಿ

೩. ಕತೆಯಾದ 'ಗೌರಿಯರು' / ೧೪
ಮೇಟಿ ಮಲ್ಲಿಕಾರ್ಜುನ

೪. ಗೌರಿಯರು ಕುಟುಂಬ-ದಾಂಪತ್ಯ ಸಂಕಥನ / ೨೦
ರಾಮಲಿಂಗಪ್ಪ ಟಿ. ಬೇಗೂರು

೫. ತಾಯಿ ಹೃದಯದ ಕಾದಂಬರಿ / ೨೬
ಕೋಡಿಬೆಟ್ಟು ರಾಜಲಕ್ಷ್ಮಿ

೬. 'ಗೌರಿಯರು' : ಹೆಣ್ಣು ನೋಟದ ದಿಟ್ಟ ಕಥನ / ೩೩
ಸುಭಾಷ್ ರಾಜಮಾನೆ

೭. ಗೌರಿಯರು : ನವ ಬದುಕಿನ ಒಳಬೇಗುದಿಗಳ ಅನ್ವೇಷಣೆ / ೩೯
ಸುಧಾಕರ ದೇವಾಡಿಗ ಬಿ.

೮. ಜಗತ್ತಿನ ಪಲ್ಲಟಗಳ ಒಂದು ಒಳನೋಟ-'ಗೌರಿಯರು' / ೪೬
ಜ್ಯೋತಿ ಎ.

೯. ಗೌರಿಯರು : ವಿಷಮ ದಾಂಪತ್ಯದ ಕಥನ / ೫೩
ಸಿ.ಎಸ್. ಭೀಮರಾಯ

೧೦. ಉರದಲ್ಲಿ ಮುಳ್ಳುಂಟೆಂದು ಅಪ್ಪಲಾರೆ / ೬೩
ಶೈಲಜ ಇಂ. ಹಿರೇಮಠ

ಲೇಖಕರ ವಿಳಾಸ / ೭೪

೧

ಮುನ್ನುಡಿ

ಎಂ.ಎಸ್. ಆಶಾದೇವಿ

ಅಮರೇಶ ನುಗಡೋಣಿಯವರ ಬರವಣಿಗೆಯ ಜೀವಂತಿಕೆಯ ಮೂಲವು ಅವರು ಸದಾ ಹುಡುಕುವ ಮತ್ತು ಪಲ್ಲಟಗಳನ್ನು ಕುರಿತಂತೆ ಹೊಂದಿರುವ ತೆರೆದ ಮನಸ್ಥಿತಿಯಲ್ಲಿ ಇದೆ. ಸಮಕಾಲೀನ ಬಿಕ್ಕಟ್ಟುಗಳು ಹೇಗಿವೆ ಎಂದರೆ, ನಮಗೆ ಗೊತ್ತಿಲ್ಲದೆಯೇ ನಾವು ವಿಘಟನಕಾರಿ ಶಕ್ತಿಗಳನ್ನು ಬೆಂಬಲಿಸುವ ಅನಿವಾರ್ಯ ಮತ್ತು ಅಮೂರ್ತ ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುತ್ತಿರುತ್ತವೆ. ಹೆಣ್ಣು ಮತ್ತು ಜಾತ್ಯಾಧಾರಿತ ವ್ಯವಸ್ಥೆಯನ್ನು ಅಧಿಕೃತಗೊಳಿಸುವ ಪ್ರಯತ್ನಗಳು ಹಿಂದೆಂದಿಗಿಂತಲೂ ಇಂದು ಶಕ್ತಿಶಾಲಿಯಾಗಿವೆ. ಹೆಣ್ಣು ಮತ್ತು ದಲಿತರ ವಿರುದ್ಧ ಇಂದು ಪ್ರಯೋಗಿಸ ಲಾಗುತ್ತಿರುವ ಅಸ್ತ್ರಗಳು ಅವರ ಹೋರಾಟವನ್ನು ದುರ್ಬಲಗೊಳಿಸುತ್ತಿರುವುದು ಮಾತ್ರವಲ್ಲ ಅದರ ಪ್ರಸ್ತುತತೆಯನ್ನೇ ಪ್ರಶ್ನಿಸುವ ವಾತಾವರಣವು ನಿರ್ಮಾಣ ವಾಗುತ್ತಿರುವುದು ಆತಂಕವನ್ನೂ ಹುಟ್ಟಿಸುತ್ತಿದೆ. ಪ್ರಭುತ್ವ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣವು ಈ ಎರಡು ವರ್ಗಗಳ ಪರವಾಗಿದೆ ಎನ್ನುವ ಭ್ರಮೆಯನ್ನು ಹುಟ್ಟಿಸುತ್ತಲೇ ಒಳಗಿನಿಂದ ಅವುಗಳನ್ನು ನಾಶಗೊಳಿಸುವ ಹುನ್ನಾರವು ಇದರಲ್ಲಿ ಅಡಗಿರುವುದನ್ನು ಅರ್ಥಮಾಡಿಕೊಳ್ಳಬೇಕಾದ ಸವಾಲನ್ನು ಈ ಎರಡೂ ಹೋರಾಟಗಳು ಎದುರಿಸುತ್ತಿವೆ.

ಇಂಥ ವಿಷಮ ಸನ್ನಿವೇಶದಲ್ಲಿ ಪುರುಷ ಲೇಖಕರು ಹೆಣ್ಣನ್ನು, ದಲಿತೇತರರು ದಲಿತರನ್ನು ಒಳಗೊಳ್ಳುವ ಬರವಣಿಗೆಯನ್ನು ಮಾಡುವುದು, ಸಾಹಿತ್ಯದ ಸಾಮಾಜಿಕ ಮತ್ತು ರಾಜಕೀಯ ಜವಾಬ್ದಾರಿಯನ್ನು ನಿಭಾಯಿಸುವ ಕ್ರಮವೂ ಹೌದು. ಇದನ್ನು ನಿಭಾಯಿಸುವ ಕೃತಿಗಳನ್ನು ಕಲಾಪಥ್ಯಗಳೆಂದು ನೋಡುವುದರ ಆಯಾಮಕ್ಕಿಂತ ವಿಸ್ತಾರವಾದ ಆಯಾಮದಲ್ಲಿ ನೋಡುವುದು ಅಗತ್ಯವೆಂದು ನಾನು ತಿಳಿದಿದ್ದೇನೆ.

ಸಾಹಿತ್ಯವನ್ನು ಮತ್ತು ಒಟ್ಟಾರೆಯಾಗಿ ಕಲಾಮಾಧ್ಯಮಗಳನ್ನು ಪರಿಭಾವಿಸುವ ಹಾಗೂ ಚರ್ಚಿಸುವ ಮೆಥಡಾಲಜಿಗಳೇ ಬದಲಾಗುತ್ತಿರುವ ಸಮಕಾಲೀನ ಸಂದರ್ಭಗಳಲ್ಲಿ ಅಮರೇಶರ **ಗೌರಿಯರು** ಕಾದಂಬರಿಯನ್ನು ಈ ಬದಲಾದ ಪರಿಪ್ರೇಕ್ಷ್ಯದಲ್ಲಿ ಇಟ್ಟು ನೋಡುವುದು ಅಗತ್ಯ.

ಹೀಗೆ ಬದಲಾದ ಭಿತ್ತಿ ಎನ್ನುತ್ತಿರುವಾಗ ಹಲವು ಸವಾಲುಗಳು ಇರುತ್ತವೆ ಎನ್ನುವುದು ನಿಜ. ಕಲಾಪತ್ಯದ ಮಾನದಂಡಗಳ ಪ್ರಶ್ನೆ ಇಲ್ಲಿ ಸಹಜವಾಗಿಯೇ ಎದುರಾಗುತ್ತದೆ. ಸಾಮಾಜಿಕ ಉತ್ತರದಾಯಿತ್ವವನ್ನು ಕಲಾಮೀಮಾಂಸೆಯ ಭಾಗವಾಗಿಸುವ ಸವಾಲು ಒಂದಾದರೆ, ಇನ್ನೊಂದು ಸಾಮಾಜಿಕತೆಯೇ ಕೃತಿಯೊಂದರ ಆಶಯವಾಗಿ ಬಿಟ್ಟಾಗ, ಅಂದರೆ ಅದೊಂದು ಬರೆಯಿಸಿಕೊಂಡ ಕೃತಿಯಾಗದೆ ಸೋದ್ದಿಶ್ಯವಾಗಿ ಬರೆದ ಕೃತಿಯೇ ಆಗಿ ಬಿಟ್ಟರೆ ಅಂಥ ಕೃತಿಗಳನ್ನು ನಾವು ಹೇಗೆ ಮೌಲ್ಯಮಾಪನ ಮಾಡಬೇಕು ಎನ್ನುವ ಪ್ರಶ್ನೆ. ಏಕೆಂದರೆ ಕಾಲದ ಅಗತ್ಯವಾಗಿರುವ ಕೃತಿಗಳನ್ನು ಒಪ್ಪುವುದು ತೀರಾ ಅನಿವಾರ್ಯ ಎನ್ನುವುದನ್ನು ಎಲ್ಲರೂ ಒಪ್ಪಿಯೇ ಒಪ್ಪುತ್ತೇವೆ. ಆದರೆ ಅದರ ಕಲಾತ್ಮಕತೆಯ ಸೋಲು ಅಥವಾ ತೊಡಕು ಆ ಕೃತಿಯನ್ನು ಪಕ್ಕಕ್ಕಿಡುವಂತೆ ಒತ್ತಾಯಿಸುತ್ತದೆಯೇ ಎನ್ನುವುದು. ತುಸು ಅತಿ ಎನ್ನುವಂತೆ ಕಂಡರೂ ಈ ಪ್ರಶ್ನೆಯನ್ನು ನೇರವಾಗಿಯೇ ಹಾಕಿಕೊಳ್ಳುವುದು ಅಗತ್ಯ. ಒಂದು ಮಹತ್ವದ ಪಲ್ಲಟದ ಪ್ರಕ್ರಿಯೆಯಲ್ಲಿ ಸೋದ್ದಿಶ್ಯವಾಗಿಯಾದರೂ ಪಾಲ್ಗೊಳ್ಳುವ ಕೃತಿಗಳನ್ನು 'ವಿಶೇಷ ಜಾಗ'ದಲ್ಲಿ ಇಟ್ಟು ನೋಡುವುದನ್ನು ನಾನಂತೂ ಪ್ರತಿಪಾದಿಸುತ್ತೇನೆ. ಅದು ಸಹ ಜಾತಿ ಸಹಜವಾಗಿ, ಗಿಡದಲ್ಲಿ ಅರಳಿದ ಹೂವಿನಂತೆ ಬಂದರಂತೂ ಅದು ಸಕಾರಣವಾಗಿಯೇ ಸ್ವಾಗತಾರ್ಹ.

ಅಮರೇಶರ **ಗೌರಿಯರು** ಕಾದಂಬರಿಯು ಈ ಎರಡರಲ್ಲಿ ಎರಡನೆಯ ವರ್ಗಕ್ಕೆ ಸೇರುತ್ತದೆ ಎನ್ನುವುದು ನಿಜಕ್ಕೂ ಸಂತೋಷದ ಸಂಗತಿ. ಕನ್ನಡ ಕಾದಂಬರಿ ಲೋಕಕ್ಕೆ ಇದೊಂದು ಆಹ್ಲಾದಕಾರಿಯಾದ ಸೇರ್ಪಡೆ. ಈ ಕಾದಂಬರಿಯ ಮೊದಲ ಕರಡನ್ನು ನೋಡಿದಾಗ ಇದು ಮೊದಲ ವರ್ಗಕ್ಕೆ ಸೇರುತ್ತದೆ ಎಂದೇ ನನಗನ್ನಿಸಿತ್ತು. ಅಮರೇಶರು ಆಮೇಲೆ ಮಾಡಿದ ಬದಲಾವಣೆಗಳು ಇದನ್ನು ಸಹಜ ಕೃತಿಯಾಗಿಸಿದೆ. ವಸ್ತು ಮತ್ತು ನಿರೂಪಣೆ ಎರಡರಲ್ಲಿಯೂ ಅಮರೇಶರು ಅವರ ಎಂದಿನ ಸರಾಗತೆಯನ್ನು ಮತ್ತು ತಾದಾತ್ಮ್ಯವನ್ನು ಸಾಧಿಸಿದ್ದಾರೆ.

ಗೌರಿ ಎನ್ನುವುದು ಲಕ್ಷಾಂತರ ಭಾರತೀಯ ಹೆಣ್ಣುಮಕ್ಕಳಿಗೆ ಇಡುವ ಹೆಸರು ಮಾತ್ರವಲ್ಲ, ಅದೊಂದು ಸ್ಥಾಪಿತ ಮತ್ತು ಒಪ್ಪಿತ ಸ್ತ್ರೀ ಮಾದರಿಯೂ ಆಗಿದೆ. ಈ ಪ್ರತಿಮೆಯು ಆದರ್ಶ ಮತ್ತು ಅಪೇಕ್ಷಿತ. ಅದು ನಿಸ್ಸಂಶಯವಾಗಿ ಗಂಡಿನ ಅಪೇಕ್ಷಿತ ಮಾದರಿ. ಗರತಿ ಗೌರಮ್ಮನೋ, ಗೌರಮ್ಮನೋ ಈ ಎಲ್ಲವೂ 'ಅನುಕೂಲ ಸತಿ'ಯ ಚಿತ್ರವನ್ನೇ ಮತ್ತೆ ಮತ್ತೆ ಎತ್ತಿಹಿಡಿಯುತ್ತವೆ. ಕ್ವಚಿತ್ತಾಗಿ ಎನ್ನುವಂತೆ ಗೌರಿಯ ಹುಸಿಮುನಿಸೋ, ಅವಳ ಹುಡುಗಾಟಿಕೆಯೋ, ಗಂಡ ಶಿವನ ಜೊತೆ ಅವಳು ಹೂಡುವ

ಪಂದ್ಯಗಳೋ ಊಟದ ಜೊತೆಗಿನ ಉಪ್ಪಿನಕಾಯಿಯಂತೆ ಕಾಣಿಸಿಕೊಳ್ಳುತ್ತವೆ. ಅದು ಬಿಟ್ಟರೆ ಅವಳ ಆದ್ಯತೆ, ಅವಳೇ ಕಟ್ಟಿಕೊಂಡ ಬದುಕು ಈ ಎಲ್ಲವೂ ಕಾಣಿಸಿಕೊಳ್ಳುವುದು ಕಡಿಮೆಯೇ. ವೈದೇಹಿಯವರ 'ಶಿವನ ಮೀಸುವ ಹಾಡು' ಕವಿತೆ ಗೌರಿಯ ಪುರಾಣ ಭಂಜನೆಯನ್ನು ಮಾಡಲು ಹವಣಿಸುವ ಶಕ್ತವಾದ ಕವಿತೆ. ಅವಳ ಆದ್ರಗರ್ವವನ್ನು ಈ ಕವಿತೆ ಘನವಾಗಿ ಎತ್ತಿಹಿಡಿಯುತ್ತದೆ. ಶಿವನ ಮಿತಿ, ದೌರ್ಬಲ್ಯ, ದ್ರೋಹ ಈ ಎಲ್ಲವನ್ನೂ ಅವಳು ಅಸಹಾಯಕತೆಯಿಂದಲ್ಲ ಧೀರತೆಯಿಂದ, ಆತ್ಮವಿಶ್ವಾಸದಿಂದ ಎದುರಿಸುತ್ತಾಳೆ. ದಾಂಪತ್ಯವನ್ನು ತನಗೆ ಬೇಕಾಗಿ ಉಳಿಸಿಕೊಳ್ಳುತ್ತಾಳೆ. ಮಹತ್ವದ ಸಂಗತಿಯೆಂದರೆ ಶಿವನಿಗೆ ಅವನ ವಿವರಗಳೆಲ್ಲ ತನಗೆ ಗೊತ್ತಿದೆ ಎನ್ನುವುದನ್ನು ರೂಪಕಗಳಲ್ಲಿಯೇ ಗೊತ್ತು ಮಾಡುತ್ತಾಳೆ. ಹೀಗೆ ಮಾಡುವ ಮೂಲಕ ಶಿವನೇ ಪಾಪಪ್ರಜ್ಞೆಯಿಂದ ಒದ್ದಾಡುವಂತೆ ಮಾಡುತ್ತಾಳೆ. ಇದರಿಂದ ಅವಳ ಕೈಯೇ ಮೇಲಾಗುತ್ತದೆ.

'ಗೌರಿ' ಎನ್ನುವ ಹೆಸರನ್ನೇ ಆಧರಿಸಿ ಈ ಚರ್ಚೆಯನ್ನು ಮಾಡುತ್ತಿರುವುದನ್ನು ಸೀಮಿತ ಚೌಕಟ್ಟು ಎಂದು ತಿಳಿಯಬೇಕಾಗಿಲ್ಲ. ಶಕುಂತಲೆಯನ್ನು ಕುರಿತಂತೆ ಮಾಸ್ತಿಯವರ, ವೀಣಾ ಶಾಂತೇಶ್ವರ ಹಾಗೂ ವೈದೇಹಿಯವರ ಕತೆಗಳನ್ನು ಒಟ್ಟಿಗೇ ಇಟ್ಟು ನೋಡಿದಾಗ ಬದಲಾದ ಹೆಣ್ಣಿನ ಚಿತ್ರ ಸ್ಫುಟವಾಗುತ್ತದೆ. ಇದನ್ನು ಬದಲಾದ ಹೆಣ್ಣು ಎನ್ನುವುದಕ್ಕಿಂತ ಸ್ವಯಂ ಅನಾವರಣಗೊಂಡ ಹೆಣ್ಣು ಎನ್ನುವುದೇ ಹೆಚ್ಚು ಸರಿ. **ಗೌರಿಯರು** ಕಾದಂಬರಿಯನ್ನೂ ಹೀಗೆ ನೋಡಲು ಸಾಧ್ಯವಿದೆ ಎನ್ನುವುದು ನನ್ನ ಪ್ರಯತ್ನ.

ಗೌರಿಯರು ಕಾದಂಬರಿಯ ನಾಯಕಿಯರಾದ ಶಿವಲೀಲಾ, ಅಕ್ಕಮ್ಮ ಹಾಗೂ ಶ್ರೀದೇವಿಯರು ಸಂಕ್ರಮಣ ಘಟ್ಟದ ಧೀರೆಯರಂತೆ ಕಾಣುತ್ತಲೇ ಅದರ ಸಂಕಟಗಳನ್ನೂ ಎದುರಾಗುತ್ತಾರೆ. ಮೂವರನ್ನು ನಾಯಕಿಯರನ್ನಾಗಿಸಿಕೊಂಡ ತಂತ್ರವೇ ಅಮರೇಶರ ಮಹತ್ವಾಕಾಂಕ್ಷೆಯನ್ನು, ಪಲ್ಲಟಗಳ ಬಹುಮುಖತೆಯನ್ನು ಧ್ವನಿಸುತ್ತದೆ. ಮಹಿಳಾ ಸಂಕಥನದ ರಾಜಕೀಯ ನೆಲೆಯಿಂದ ಇದನ್ನು ನೋಡುವುದಾದರೆ, ಈ ಹೋರಾಟದ ತುರ್ತು ಮತ್ತು ಐತಿಹಾಸಿಕ ಮಹತ್ವವನ್ನು ಅಮರೇಶರು ಗ್ರಹಿಸಿರುವುದನ್ನೂ ಇದು ಹೇಳುತ್ತದೆ.

ಈ ಮೂವರೂ ನಾಯಕಿಯರು ಅಗ್ನಿಕನ್ಯೆಯರಂತೆಯೇ ಕಾಣುತ್ತಾರೆ. ಬದುಕು ಒಡ್ಡುವ ನೂರಾರು ಬಿಕ್ಕಟ್ಟುಗಳನ್ನು ನೋವಿನಲ್ಲೂ ಕುಂದದ, ಮರೆಯಾಗದ ಆತ್ಮವಿಶ್ವಾಸದಲ್ಲಿ ಈ ಹುಡುಗಿಯರು ಎದುರಿಸುತ್ತಾರೆ. ಈ ಮೂವರಲ್ಲಿ ಯಾರದೂ ಸಾಂಪ್ರದಾಯಿಕ ಮನಸ್ಸು ಒಪ್ಪುವ ಯಶಸ್ಸಿನದಲ್ಲ. ಕಾದಂಬರಿಯ ಕೇಂದ್ರ ಇರುವುದೇ ಈ ಹುಡುಗಿಯರ ಬದುಕನ್ನು ಅಪ್ಪ, ಅಮ್ಮ, ಇತರ ಆಪ್ತೇಷ್ಟರು ಒಳಗಾಗಲು ನಡೆಸುವ ಪ್ರಯತ್ನದಲ್ಲಿ ಮತ್ತು ಅದಕ್ಕೆ ಈ ಹುಡುಗಿಯರು ತಮ್ಮನ್ನು ತಾವೇ

ಅನುವಾಗಿಸಿಕೊಳ್ಳಲು ನಡೆಸುವ ಪರಿಯಲ್ಲಿ. ಹೆಣ್ಣು ಬದಲಾಗುತ್ತಿದ್ದಾಳೆ ಎನ್ನುವ ಸತ್ಯವನ್ನು ಸ್ವತಃ ಆ ಹೆಣ್ಣು ಮಕ್ಕಳು ಮತ್ತು ಅವರ ಪರಿಸರ ತುಸು ಬೆರಗಿನಲ್ಲಿ, ತುಸು ಸಂತೋಷದಲ್ಲಿ ಮತ್ತು ಆತಂಕದಲ್ಲಿ ಅರ್ಥ ಮಾಡಿಕೊಳ್ಳುತ್ತಾ ಹೋಗುವುದನ್ನು ಈ ಕಾದಂಬರಿ ಮಾನವೀಯ ನೆಲೆಯಲ್ಲಿ ಕಾಣಿಸುತ್ತಾ ಹೋಗುತ್ತದೆ. ಸಣ್ಣಪುಟ್ಟ ವಿವರಗಳನ್ನೂ ಅಪ್ಪ ಅಮ್ಮನೊಂದಿಗೆ, ಆಪ್ತವಲಯದೊಂದಿಗೆ ಪರೋಕ್ಷವಾಗಿಯಾದರೂ ಹಂಚಿಕೊಳ್ಳುವುದೇ ಅಭ್ಯಾಸವಾಗಿಬಿಟ್ಟ ತಲೆಮಾರುಗಳಿಗೆ ಹೋಲಿಸಿದರೆ ಈ ತೀನ್ ದೇವಿಯಾ ಎನ್ನಬಹುದಾದ ಈ ಹುಡುಗಿಯರು ತಮ್ಮ ತಲೆಗೆ ತಮ್ಮ ಕೈ ಎನ್ನುವುದನ್ನು ಆರಂಭದಿಂದಲೂ ಒಪ್ಪುವ ಹರಸಾಹಸ ಮಾಡುತ್ತಾ ಅದರಲ್ಲಿ ಬಹುಪಾಲು ಗೆಲ್ಲುತ್ತಾರೆ ಕೂಡ. ಅದಕ್ಕೆ ಅವರ ಮನಸ್ಥಿತಿ ಮಾತ್ರ ಕಾರಣವಲ್ಲ, ಬದಲಾಗುತ್ತಿರುವ ಪರಿಸರ, ಅವರೇ ಆರಿಸಿಕೊಂಡ ದಾರಿಗಳಾದ್ದರಿಂದ ಅದಕ್ಕೆ ತಾವೇ ಹೊಣೆ ಎನ್ನುವ ಅರಿವೂ ಕೂಡ ಕಾರಣ. ಅವರು ಪಡೆದ ಶಿಕ್ಷಣ, ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆಗಳ ಪಾತ್ರವನ್ನು ನಾನು ನಿರಾಕರಿಸುತ್ತಿಲ್ಲ. ಆದರೆ ಈ ಎಲ್ಲವೂ ಮಧ್ಯಮವರ್ಗದ ಹೆಣ್ಣುಮಕ್ಕಳನ್ನು ಸಬಲವಾಗಿಸುವಷ್ಟೇ ದುರ್ಬಲಗೊಳಿಸುತ್ತಾ ಬಂದಿರುವ ಅಪ್ರಿಯ ಸತ್ಯವನ್ನೂ ನಾವಿಲ್ಲಿ ಗಮನಿಸಬೇಕು. ಈ ದೃಷ್ಟಿಯಿಂದ ಈ ಹೆಣ್ಣುಮಕ್ಕಳ ಗ್ರಾಮೀಣ ಹಿನ್ನೆಲೆ ಕೂಡ ತುಂಬಾ ಮುಖ್ಯವಾದುದು. ಶಿಕ್ಷಿತ ಮಧ್ಯಮವರ್ಗದ ಹೆಣ್ಣುಮಕ್ಕಳು ಇಂದಿಗೂ ತ್ರಿವೇಣಿಯವರ ಕಾದಂಬರಿಗಳ ನಾಯಕಿಯರ ಅಕ್ಕತಂಗಿಯರಂತೆ ಕಾಣುವ ನೂರಾರು ಉದಾಹರಣೆಗಳನ್ನು ನಾವು ನೋಡಬಹುದು. ಆದ್ದರಿಂದಲೇ ನಾನು ಅನೇಕ ಕಡೆ ಪ್ರಸ್ತಾಪಿಸಿರುವಂತೆ, ಎಂ.ಕೆ. ಇಂದಿರಾ ಮತ್ತು ತ್ರಿವೇಣಿಯವರ ಕಾದಂಬರಿಗಳ ನಾಯಕಿಯರ ನಡುವಿರುವ ವ್ಯತ್ಯಾಸ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳ ವ್ಯತ್ಯಾಸ ಮತ್ತು ವೈರುಧ್ಯವನ್ನು ನಾವು ಇನ್ನೂ ಗಂಭೀರವಾಗಿ ಚರ್ಚಿಸಬೇಕು. ಅನಂತಮೂರ್ತಿ ಮತ್ತು ಲಂಕೇಶರ ನಾಯಕಿಯರನ್ನು ಗಮನಿಸಿದರೂ ಈ ಅಂಶ ಸ್ಪಷ್ಟವಾಗುತ್ತದೆ.

ಶಿವಲೀಲಾ ಗಂಡನಿಂದ ಡೈವೋರ್ಸ್ ಪಡೆಯುವ ನಿರ್ಧಾರವನ್ನು ಕುಟುಂಬದ ಸಲಹೆ, ನಿರ್ದೇಶನ, ಒತ್ತಾಸೆ ಯಾವುದೂ ಇಲ್ಲದೆಯೇ ತೆಗೆದುಕೊಳ್ಳುತ್ತಾಳೆ. ಅದನ್ನು ಸಾಧ್ಯವಾದಷ್ಟು ಸಹಜತೆಯಲ್ಲಿಯೇ ಅಪ್ಪ ಅಮ್ಮನಿಗೆ ಹೇಳುತ್ತಾಳೆ. ಹೀಗೆ ಅವಳು ಹೇಳುವ ಕ್ರಮವೇ ಅವಳು ಅಪ್ಪ ಅಮ್ಮಂದಿರನ್ನು ಓರಿಯೆಂಟ್ ಮಾಡುವ ಬಗೆಯನ್ನು ಹೇಳುತ್ತದೆ. ಅದನ್ನೊಂದು ಗೋಳಾಟ ಮಾಡದೆ, ತಾನು ಮೋಸ ಹೋದ ಬಡಪಾಯಿ ಹೆಣ್ಣು ಎನ್ನುವ ಅತಿರೇಕವಿಲ್ಲದೆ, ಸರಿ ಬರಲಿಲ್ಲ ಆದ್ದರಿಂದ ಬೇರೆಯಾಗಬೇಕಾಯಿತು ಎನ್ನುವುದನ್ನು ಪ್ರಬುದ್ಧವಾಗಿ ಅವಳು ಅಪ್ಪ ಅಮ್ಮಂದಿರಿಗೆ ಮನದಟ್ಟು ಮಾಡುವ ರೀತಿಯು ಅವಳಲ್ಲಿನ ಹೊಸ ಹೆಣ್ಣನ್ನು ನಮಗೆ ಕಾಣಿಸುತ್ತದೆ. ಡೈವೋರ್ಸ್ ಎನ್ನುವುದು ಆಕಾಶ ಕಳಚಿ ಬಿದ್ದ ದುರಂತವಾಗದೆ, ಬದುಕಿನ ಸಣ್ಣ ಹಿನ್ನಡೆಯೋ ಅಥವಾ

ಹೊಂದಾಣಿಕೆಯಿಲ್ಲದ ದಾಂಪತ್ಯದಿಂದ ಹೊರಬಂದದ್ದೇ ನಿಸೂರಾಯಿತು ಎನ್ನುವ ಪರಿಹಾರ ಭಾವದಲ್ಲಿಯೋ ಅಪ್ಪ ಅಮ್ಮ ಅದನ್ನು ಎದುರಾಗಲು ಬೇಕಾದ ಅವಕಾಶವನ್ನು ಶಿವಲೀಲಾ ಸೃಷ್ಟಿಸುತ್ತಾಳೆ.

ಅಕ್ಕಮ್ಮ ಗಂಡನ ದುರಾಸೆ, ಸ್ತ್ರೀಲೋಲುಪತೆಯನ್ನು ಆಘಾತದಿಂದಲೇ ಎದುರಿಸುತ್ತಾಳೆ. ನಂಬಿಕೆಯನ್ನು ಕಳೆದುಕೊಂಡ ಗಂಡನನ್ನು ಇವಳೂ ಶಿವಲೀಲಾಳಷ್ಟೇ ಮಾಗಿದ ಮನಸ್ಥಿತಿಯಲ್ಲಿ, ಅಪ್ರಿಯ ಸತ್ಯವನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆಯಲ್ಲಿ ಸ್ವೀಕರಿಸುತ್ತಾಳೆ. ಈ ಇಬ್ಬರಲ್ಲೂ ನಾವು ಗಮನಿಸಬೇಕಾದ ಒಂದು ಸಾಮಾನ್ಯ ಅಂಶವೆಂದರೆ, ಯಾವ ರಾಜಿ ಮನೋಭಾವ ಆ ದಾಂಪತ್ಯಗಳನ್ನು ಉಳಿಸಬಹುದಾಗಿತ್ತೋ ಆ ರಾಜಿ ಮನೋಭಾವದಿಂದ ಹೊರಬಂದಿರುವುದು. ದಾಂಪತ್ಯವನ್ನು ಉಳಿಸಿಕೊಳ್ಳುವುದೋ, ಆತ್ಮಘನತೆಯನ್ನು ಉಳಿಸಿಕೊಳ್ಳುವುದೋ ಎನ್ನುವ ಎರಡು ಆಯ್ಕೆಗಳಲ್ಲಿ ಇವರಿಬ್ಬರೂ ಎರಡನೆಯದನ್ನೇ ಆರಿಸಿಕೊಳ್ಳುತ್ತಾರೆ. ಜಾಣ ಕುರುಡು ಮತ್ತು ಕಿವುಡುಗಳು ದಾಂಪತ್ಯದ ಸಿದ್ಧಸೂತ್ರಗಳು ಎನ್ನುವುದನ್ನು ಹೆಣ್ಣಿಗೆ ಯಾವಾಗಲೂ ಹೇಳಿಕೊಡಲಾಗುತ್ತದೆ. ಆದರೆ ತಲೆಮಾರುಗಳಿಂದ ಹೆಣ್ಣು ಕಲಿಯುತ್ತಲೇ ಬಂದ ಈ ಪಾಠ(!)ವನ್ನು ಇವರಿಬ್ಬರೂ ಅದು ಪಾಠವಲ್ಲ, ಪಾಪ ಎನ್ನುವ ಸ್ಪಷ್ಟತೆಯಲ್ಲಿ ನಿರಾಕರಿಸುತ್ತಾರೆ. ಅಕ್ಕಮ್ಮನ ಬದುಕಿನಲ್ಲಿ ಇನ್ನೊಬ್ಬ ಗಂಡಿನ ಅಸ್ತಿತ್ವವೂ ಇದೆ. ಮದುವೆಯಾಗಿರುವ ರಾಮಚಂದ್ರನ ಜೊತೆ ತನಗಿರುವ ಸಂಬಂಧವನ್ನು ಯಾವ ಸಂಕೋಚವಿಲ್ಲದೆ ಇವಳು ಸ್ವೀಕರಿಸಿದ್ದಾಳೆ. ಎರಡನೆಯ ಹೆಂಡತಿಯ, ಇಟ್ಟುಕೊಂಡವಳ, ಸಾಮಾಜಿಕ ಸ್ಥಾನಮಾನಗಳ ಕೊರತೆಯಿರುವ ಈ ಸಂಬಂಧದಲ್ಲಿ ಇವಳಿಗೆ ತನಗೆ ಅಂತಿಮವಾಗಿ ಸಿಗುವ ಪ್ರೀತಿ ಮತ್ತು ಗೌರವಗಳೇ ಮುಖ್ಯವಾಗಿ, ಲೋಕವೇ ಗೌಣವಾಗಿ ಬಿಡುತ್ತದೆ. ಇದೇ ಪಲ್ಲಟದ ನಿರ್ಣಾಯಕ ಅಂಶ. ಅತ್ತೆ ಮಾವರಿಗಂಜಿ ಸುತ್ತೇಳು ನೆರೆಗಂಜಿ ಬದುಕುವ ಆವರಣವನ್ನು ಇಲ್ಲಿನ ಮೂವರೂ ವಿಸರ್ಜಿಸಿದ್ದಾರೆ, ಸ್ವ-ಅಧಿಕೃತತೆಯನ್ನು, ಆಯ್ಕೆಯನ್ನು, ಇರುವುದೊಂದೇ ಬದುಕಿನಲ್ಲಿ ತನಗೆ ಬೇಕಾದ್ದನ್ನು ಪಡೆಯುವುದು ತನ್ನ ಹಕ್ಕು ಎನ್ನುವ ಪ್ರಾಕೃತಿಕ ಹಕ್ಕನ್ನು ಇವರು ತೆರೆದ ತೋಳುಗಳಿಂದ ಆಹ್ವಾನಿಸುತ್ತಾರೆ. ಶಿವಲೀಲಾ ತನ್ನ ಮಗ ಶಿವದರ್ಶನನನ್ನು ತಾನು ಗಂಡಿನ ಸಂಸರ್ಗವೇ ಇಲ್ಲದೇ ಪಡೆದೆನೇನೋ ಎನ್ನುವ ಧರ್ತಿಯಲ್ಲಿ ಸಾಕುತ್ತಿದ್ದಾಳೆ. ತಾಯ್ತನವು ತನ್ನಷ್ಟಕ್ಕೆ ತಾನು ಸ್ವಯಂಪೂರ್ಣ ಎನ್ನುವ ಘನತೆ ಅವಳನ್ನು ತುಂಬಿದೆ. ಅಯ್ಯೋ ಅಪ್ಪನೊಲ್ಲದ ಕೂಸು ಎನ್ನುವ ಪಾಪಪ್ರಜ್ಞೆ ಇವಳನ್ನು ಘಳಿಗೆಯ ಮಟ್ಟಿಗೂ ಕಾಡುವುದಿಲ್ಲ. ಇವೆಲ್ಲ ಬಹಳ ಸುಲಭ ಎಂದಲ್ಲ, ಆದರೆ ಯಾವಾಗ ಹೆಣ್ಣಿನಲ್ಲಿ ಸ್ವಪ್ರಜ್ಞೆ ಜಾಗೃತವಾಗುತ್ತದೋ ಆಗ ಅವಳು ಇದನ್ನು ಹಂತಹಂತವಾಗಿ ಸಾಧಿಸುತ್ತಾ ಹೋಗುತ್ತಾಳೆ. ಅವಳ ಮನಸ್ಸಿನಲ್ಲಿ ತುಮುಲ ಯುದ್ಧಗಳು ನಡೆದಿವೆ ಮತ್ತು ನಡೆಯುತ್ತಲೂ ಇರಬಹುದು. ಆದರೆ ಈ ತುಮುಲಗಳು ನಿಧಾನವಾಗಿ ಅವಳನ್ನು ಗಟ್ಟಿಯಾಗಿಸುತ್ತಾ ಹೋಗುತ್ತವೆ.

ಮೂರನೆಯವಳಾದ ಶ್ರೀದೇವಿ ಇಲ್ಲಿಂದ ಇನ್ನೂ ಒಂದು ಹೆಜ್ಜೆ ಮುಂದುಹೋಗುವ ದ್ವಂದ್ವದಲ್ಲಿದ್ದಾಳೆ. ಮದುವೆಯ ಹಂಗಿಲ್ಲದ ಸಖ್ಯವೊಂದಕ್ಕೆ ಹಂಬಲಿಸುತ್ತಿರುವ ಇವಳು ತನ್ನಲ್ಲಿಲ್ಲದ ಸ್ಪಷ್ಟತೆ ಮತ್ತು ಗಟ್ಟಿತನದ ಕಾರಣಕ್ಕಾಗಿ ಸವಾಲುಗಳನ್ನು ಎದುರಿಸುತ್ತಾಳೆ. ಬದುಕನ್ನು ಇನ್ನೂ ಗಂಭೀರವಾಗಿ ತೆಗೆದುಕೊಳ್ಳಲಾಗದ ಹುಡುಗಾಟಿಕೆಯೂ ಸೇರಿ ಅವಳಲ್ಲಿ ಇನ್ನೂ ಸಾಹಸಗಳನ್ನು ಮಾಡುವ ಉತ್ಸಾಹ ಉಳಿದಿದೆ.

ತಂದೆ ತಾಯಿಯರು ಇವರನ್ನು, ಇವರ ಲೋಕಕ್ಕೆ ವಿಚಿತ್ರವಾಗಿ, ತೊಡಕಿನದ್ದಾಗಿ, ತಪ್ಪಾಗಿ ಕಾಣಬಹುದಾದ ಬದುಕಿನ ವಿನ್ಯಾಸಗಳನ್ನು ಕಷ್ಟದಿಂದಲೇ ಎದುರಾಗುತ್ತಿದ್ದಾರೆ. ಆದರೆ ಮಿಕ್ಕ ತಂದೆ-ತಾಯಿಯರಂತೆ ಇವರು ವರ್ತಿಸದೇ ಇರುವುದಕ್ಕೆ ನಾಯಕಿಯರೇ ಕಾರಣ. ಅಪ್ಪ ಅಮ್ಮನಿಗೆ ಭಾರವಾಗದ, ಅವರನ್ನು ಹೊಣೆಯಾಗಿಸದ ಮಾತ್ರವಲ್ಲ ತಮ್ಮ ತಮ್ಮ ಬದುಕಿನಲ್ಲಿ ಅವರು ಸಂತೋಷವಾಗಿರುವ ಸತ್ಯದ ಎದುರಿಗೆ ಅವರನ್ನು ಪ್ರಶ್ನಿಸುವ ಅಥವಾ ಅದು ತಪ್ಪು ಎಂದು ಅಪ್ಪ ಅಮ್ಮಂದಿರ ಅಧಿಕಾರದಲ್ಲಿ ಮಾತನಾಡಲು ಅವರು ಸಂಪೂರ್ಣವಾಗಿ ಹಿಂಜರಿಯುವಷ್ಟು ಈ ಹೆಣ್ಣುಮಕ್ಕಳು ಗಟ್ಟಿಗಿತ್ತಿಯರಾಗಿದ್ದಾರೆ, ತಮಗೆ ಒಪ್ಪಿಗೆಯಾಗದೇ ಇರಬಹುದು, ಆದರೆ ಕೊನೆಗೂ ಇದು ಅವರ ಬದುಕು, ಅದರ ಮೇಲೆ ತಮಗೆ ಯಾವ ಅಧಿಕಾರವೂ ಇಲ್ಲ ಎನ್ನುವುದನ್ನು ಇವರಿಬ್ಬರೂ ಅರ್ಥಮಾಡಿಕೊಂಡವರಂತೆ ಕಾಣುತ್ತಾರೆ. ಎಲ್ಲವೂ ಚಂದಮಾಮದ ಕತೆಯಷ್ಟು ಸರಳ, ಸುಸೂತ್ರ ಎಂದಲ್ಲ. ಆದರೆ ತಲೆಮಾರುಗಳ ಅಂತರವನ್ನು ಪರಸ್ಪರ ಪ್ರೀತಿ ಮತ್ತು ಗೌರವದಲ್ಲಿ ಹೇಗೆ ಎದುರಿಸಬಹುದು ಎನ್ನುವುದನ್ನು ಇಲ್ಲಿನ ಎಲ್ಲರೂ ಪ್ರಯತ್ನಿಸುತ್ತಿರುವಂತೆ ಕಾಣಿಸುತ್ತದೆ.

ಕಾದಂಬರಿಗೆ ಹಲವು ಮಿತಿಗಳಿವೆ ಎನ್ನುವುದು ನಿಜ. ಇನ್ನೂ ಸಂಕೀರ್ಣವಾಗಿರಬಹುದಿತ್ತು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಆರಂಭದಲ್ಲಿ ಹೇಳಿದಂತೆ ಈ ಪ್ರಯೋಗವೇ ಅಮರೇಶರ ಮೇಲಿನ ನನ್ನ ಗೌರವ ಮತ್ತು ನಂಬಿಕೆಯನ್ನು ಹೆಚ್ಚಿಸಿದೆ.

ಈ ಕಾಲವು ಕಾಯುತ್ತಿದ್ದ ಕೃತಿಯನ್ನು ಉತ್ಕಟವಾಗಿ ಕಟ್ಟಿಕೊಟ್ಟ ಅಮರೇಶರಿಗೆ ಪ್ರೀತಿ ಮತ್ತು ಕೃತಜ್ಞತೆ.

೨೩-೩-೨೦೨೧

ಲೋಹಿಯಾ ದಿನ

◆◆

೨

ನವ ಸಾಮಾಜಿಕತೆ ಮತ್ತು ಗೌರಿಯರು

ಸಬಿತಾ ಬನ್ನಾಡಿ

ನವ ಸಾಮಾಜಿಕತೆ ಎಂದು ನಾವು ಯಾವುದನ್ನು ಕರೆಯಬೇಕು? ಅತ್ಯಾಧುನಿಕ ಜೀವನಶೈಲಿಯನ್ನೇ? ಇಲ್ಲಿ ಯಂತ್ರ, ತಂತ್ರಗಳು ಮುಂಚೂಣಿಯಲ್ಲಿವೆ. ವಸ್ತುಗಳು ಮನುಷ್ಯರ ವ್ಯಕ್ತಿತ್ವವನ್ನು ನಿರ್ಧರಿಸುವ ವಿಸ್ತರಿತ ಸಂಗತಿಗಳಾಗಿವೆ. ಜಗತ್ತು ಹತ್ತಿರವಾಗಿದೆ. ಇವೆಲ್ಲದರ ಜೊತೆಗೆ ಸಾಮಾಜಿಕ ಮೌಲ್ಯಗಳು ಬದಲಾಗಿವೆಯೇ? ಒಂದೆಡೆ ಕೌಟುಂಬಿಕ ವಿಘಟನೆಗಳು ಹೆಚ್ಚುತ್ತಿವೆ ಎನ್ನುತ್ತಿರುವಾಗಲೇ ಇನ್ನೊಂದೆಡೆ ಮದುವೆಗಳ ವೈಭವ ಮಿತಿಮೀರುತ್ತಿವೆ. ಮದುವೆಯ ಸ್ವರೂಪವು ಅದೇ ಹಿಂದಿನ ಗಂಡು ಪ್ರಧಾನ ಚೌಕಟ್ಟಿನಲ್ಲೇ ಇದೆ. ಹೆಣ್ಣು ಗಂಡಿಗೆ ಸರಿಸಮಾನವಾಗಿ, ಕೆಲವೊಮ್ಮೆ ಹೆಚ್ಚಾಗಿ ಸಂಬಳ ತರುತ್ತಿದ್ದಾಳೆ ಎಂಬುದು ಸ್ವಲ್ಪ ಮಟ್ಟಿಗೆ ಅವಳ ಸ್ಥಾನವನ್ನು ಕುಟುಂಬದೊಳಗಡೆ ಗಟ್ಟಿಗೊಳಿಸಿದೆ. ಆದರೆ, ಉಳಿದಂತೆ ಗೃಹಿಣಿಯ ಪಾತ್ರದಲ್ಲಿ ಅಂತಹ ಯಾವ ಬದಲಾವಣೆಯೂ ಆಗಿಲ್ಲ. ನಗರದಲ್ಲಾದರೆ, ಆರ್ಡರ್ ಕೊಟ್ಟು ಊಟ ತರಿಸಿಕೊಳ್ಳಬಹುದು ಎಂಬ ಕೆಲವು ಸವಲತ್ತುಗಳು ಅವಳ ಕೈಹಿಡಿದಿರಬಹುದು. ಅದರೆ ಅದರ ಬಗೆಗೂ ಗಿಲ್ಟ್‌ಗೆ ಒಳಗಾಗಬಹುದಾದ ಕಮೆಂಟ್‌ಗಳು ಆಕೆಯೆಡೆಗೇ ಹೆಚ್ಚು ಮುಖ ಮಾಡಿರುತ್ತವೆ. ಈಗೀಗ ಕೆಲವು ಬೆರಳೆಣಿಕೆಯ ಸಂದರ್ಭದಲ್ಲಿ ಹುಡುಗರೂ ತಮ್ಮ ಮಕ್ಕಳ ನ್ಯಾಪಿ ಬದಲಿಸುವುದು, ಕಾಳಜಿ ವಹಿಸುವುದು, ಮನೆಯೊಳಗಿನ ಕೆಲಸಗಳಿಗೆ ಕೈಜೋಡಿಸುವುದು ಇತ್ಯಾದಿ ಇತ್ಯಾತ್ಮಕ ಬದಲಾವಣೆಗಳಾಗುತ್ತಿವೆ. ನವ ಸಾಮಾಜಿಕತೆಯಲ್ಲಿ ಇಂತಹ ಬದಲಾವಣೆಗಳು ಅತ್ಯಂತ ಸಹಜ ಎಂಬಂತೆ ಆಗಬೇಕಾಗಿರುವುದು ಮುಖ್ಯ. ಆದರೆ ಈ ಎಲ್ಲಾ ಸಂದರ್ಭದಲ್ಲೂ ಈ ಬದಲಾವಣೆಗಳು ಆಗುತ್ತಿರುವುದು ಎಲ್ಲಿ? ಎಂದು ಯೋಚಿಸಿದಾಗ ಮುಖ್ಯವಾಗಿ ಮಧ್ಯಮ ವರ್ಗದ ಉನ್ನತ ಶಿಕ್ಷಣ ಮತ್ತು ಉನ್ನತ ಸಂಬಳ ಪಡೆದುಕೊಳ್ಳುತ್ತಿರುವವರ ನಡುವೆ ಎನ್ನುವುದು ಗಮನಾರ್ಹ. ಇದು ಇಡೀ ಸಮಾಜದಲ್ಲಿ ಮಾನ್ಯವಾದ ಮತ್ತು ಎಲ್ಲರೂ ಅನುಸರಿಸಲು ಪೈಪೋಟಿ ಮಾಡುತ್ತಿರುವ

ವಿಚಾರವಾಗಿಯೇನೂ ಮುನ್ನೆಲೆಗೆ ಬಂದಿಲ್ಲ. ಹಾಗೆಯೇ ಸಾರ್ವಜನಿಕ ರಂಗದಲ್ಲಿ ಕೂಡಾ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣು ಅಧಿಕಾರ ಸ್ಥಾನದಲ್ಲಿ, ಆಡಳಿತಾತ್ಮಕ ನಿರ್ಣಾಯಕ ಹೊಣೆಗಾರಿಕೆಗಳಲ್ಲಿ ತನ್ನದೇ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವುದೂ ಕೂಡಾ ಸುಲಭದ ಮಾತಾಗಿಲ್ಲ. ರಾಜಕೀಯ ಕ್ಷೇತ್ರದಲ್ಲಂತೂ, ಹಕ್ಕಿನ ಸ್ಥಾನ ಪಡೆದುಕೊಳ್ಳುವುದಿರಲಿ, ಹೆಣ್ಣು ತಾನೇ ಹಿಂಜರಿಯಲು ಬೇಕಾದ ಎಲ್ಲ ಚಿತಾವಣೆಗಳೂ ನಡೆಯುತ್ತಿರುತ್ತವೆ. ಎಲ್ಲೋ ಕೆಲವರು ತಮಗಿರುವ ಕುಟುಂಬ, ಸಿನಿಮಾ ಇನ್ನಿತರ ಕ್ಷೇತ್ರಗಳ ಸಾಧನೆ ಇತ್ಯಾದಿಗಳ ಬಲದಿಂದ ರಾಜಕೀಯಕ್ಕೆ ಬಂದರೂ ಅವರು ಗಂಡಾಳಿಕೆಯ ಮಾದರಿಗಳನ್ನೇ ಅನುಕರಿಸುತ್ತಿದ್ದಾರೆಯೇ ಹೊರತು ಅವರಲ್ಲಿ ಸ್ತ್ರೀವಿಶಿಷ್ಟ ಪ್ರಜ್ಞೆಯ ಮೂಲಕ ಗಂಡಸರೂ ಅನುಸರಿಸಬಹುದಾದ ಮಾದರಿಗಳನ್ನು ಕೊಡಲು ಸಾಧ್ಯವಾಗಿಲ್ಲ. ಹಾಗೆ ಮಾಡಹೋದರೆ ಅವರಿಗೆ ರಾಜಕೀಯದಲ್ಲಿ ಉಳಿಗಾಲವಿಲ್ಲ. (ಐವತ್ತರ ದಶಕದಲ್ಲಿ ಮಂತ್ರಿಯಾಗಿದ್ದ ಯಶೋಧರಾ ದಾಸಪ್ಪ ಅವರು ಪಾನ ನಿಷೇಧಕ್ಕೆ ಆಗ್ರಹಿಸಿ, ಅದಕ್ಕೆ ಕಾಂಗ್ರೆಸ್ ಸರ್ಕಾರ ಒಪ್ಪದಿದ್ದಾಗ ರಾಜೀನಾಮೆ ಕೊಟ್ಟು ಹೊರಬಂದಿದ್ದರು.) ಈ ಹಿನ್ನೆಲೆಯಲ್ಲಿ ನೋಡುವುದಾದರೆ, ನವ ಸಾಮಾಜಿಕತೆ ಉಂಟಾಗಿದೆಯೇ ಅಂದರೆ ಇಲ್ಲ ಎಂದೇ ನನಗನಿಸುತ್ತೆ. ಸಾಮಾಜಿಕತೆಯ ಬಾಹ್ಯರಚನೆಯಲ್ಲಿ ಬದಲಾವಣೆಗಳಾಗಿವೆ. ಆಂತರಿಕ ರಚನೆಯಲ್ಲಿ ಬದಲಾವಣೆಗಳಾಗಿಲ್ಲ.

ಅಮರೇಶ ನುಗಡೋಣಿ ಅವರ **ಗೌರಿಯರು** ಕಾದಂಬರಿಯು ಹೆಣ್ಣು ಮತ್ತು ಭೂಮಿ ಎರಡೂ ಕೂಡಾ ಅನ್ಯರ ಕೈಯ ದಾಳವಾದ ಒಂದು ಸ್ಥಿತಿ ಮತ್ತು ಅದರ ಬಿಡುಗಡೆಯ ಸಾಧ್ಯತೆ ಎರಡನ್ನೂ ಕುರಿತು ಯೋಚಿಸುತ್ತದೆ. ಇಲ್ಲಿ ಎರಡೂ ಒಟ್ಟೊಟ್ಟಿಗೇ ಸಾಗುತ್ತದಾದರೂ ನಮ್ಮ ಗಮನ ಗೌರಿಯರ ಕಡೆಗೇ ಹೆಚ್ಚು ಹೋಗುತ್ತೆ. ಕಾದಂಬರಿ ಸಮ ಸಮವಾಗಿ ಭೂಮಿಯನ್ನು ಮತ್ತು ಹೆಣ್ಣನ್ನು ಹೇಗೆ ನಿರೂಪಿಸಲಾಗುತ್ತಿದೆ ಎನ್ನುವುದನ್ನು ಕುರಿತು ಧ್ಯಾನಿಸುತ್ತದೆ. ಮುಖ್ಯವಾಗಿ ತೊಂಬತ್ತರ ದಶಕದಲ್ಲಿ ಜಾಗತೀಕರಣದ ಕಾರಣದಿಂದಾದ ಪಲ್ಲಟ ಇದೆಯಲ್ಲ, ಆ ಪಲ್ಲಟದ ಫಲ ಅಥವಾ ಅದರ ಪರಿಣಾಮವನ್ನು ಕಾಣುತ್ತಿರುವುದು ಈಚಿನ ಹದಿನೈದು ವರ್ಷಗಳಲ್ಲಿ. ವ್ಯಾಪಾರೀಕರಣದ ಮನಸ್ಥಿತಿಯಲ್ಲಿ ನಾವೀಗ ಬಹಳ ಮುಂದೆ ಬಂದು ಬಿಟ್ಟಿದೀವಿ. ಅಂದರೆ ಹೆಣ್ಣು ಮತ್ತು ಭೂಮಿ ಎರಡೂ ಕೂಡಾ ಈ ಕ್ಷಣಕ್ಕೂ ತೋರಿ ಉಂಬುವ ಲಾಭವೇ ಆಗಿವೆ. ಆದರೆ ತೋರಿಕೆಯಲ್ಲಿ ಮಾತ್ರ ಇದು ಹೊಸ ರೂಪ ಧರಿಸಿದೆ. ಅಭಿವೃದ್ಧಿ ಎಂಬ ಪದವನ್ನು ಅಡ್ಡಾದಿಡ್ಡಿಯಾಗಿ ಬಳಸುತ್ತಾ ಹಿಮ್ಮುಖವಾಗಿ ಚಲಿಸುವ ಮನಸ್ಸುಗಳನ್ನು ಸೃಷ್ಟಿಸಲಾಗುತ್ತಿದೆ. ಆಧುನಿಕತೆ ಅನ್ನುವುದು ಒಂದು ಕಾಲಕ್ಕೆ ಮೌಲ್ಯ ಆಗಿತ್ತು. ವ್ಯಾಪಕ ಅರ್ಥದಲ್ಲಿ ಬಳಕೆಯಾಗುತ್ತಾ, ಶೋಷಿತರ ಬಿಡುಗಡೆಯ ಸಾಧನ ಎಂದು ಭಾವಿಸಲಾಗಿತ್ತು. ಆದರೆ ಈಗ ಅದನ್ನು ಬಾಹ್ಯ ಆಡಂಬರ ಎಂಬರ್ಥಕ್ಕೆ ಸೀಮಿತಗೊಳಿಸಲಾಗಿದೆ. ಅರವತ್ತು, ಎಪ್ಪತ್ತು ವಯಸ್ಸು ದಾಟಿದ ನಮ್ಮ ಹಿರಿಯರೂ

ಕೂಡಾ ಈ ಬಾಹ್ಯ ಬದಲಾವಣೆಗೆ ಮರುಳಾಗಿದ್ದಾರೆ. ಬಹಳ ಬೇಗ ಅವರದನ್ನು ಒಪ್ಪಿಕೊಳ್ಳುತ್ತಾರೆ ಮಾತ್ರವಲ್ಲ ಆ ಬಗೆಗೆ ಅವರಿಗೊಂದು ಹಪಹಪಿ ಇದೆ. ಆಧುನಿಕ ವಸ್ತು ನಮ್ಮ ಮನೆ ಬಾಗಿಲಿಗೆ, ನಮ್ಮ ಮನೆಯೊಳಗೆ ಬರಬೇಕು, ಇರಬೇಕು ಎಂಬೆಡೆಗೆ ಇರುವ ಗಮನ, ತರತಮ ರಹಿತ ಆರೋಗ್ಯಕರ ಸಂಬಂಧಗಳನ್ನು ಕಟ್ಟಿ ಬೆಳೆಸುವೆಡೆಗೆ ಕಾಣುತ್ತಿಲ್ಲ. ಕೌಟುಂಬಿಕವಾಗಿ ಹೆಣ್ಣಿನ ಇರುವಿಕೆ ಏನು? ಹೇಗೆ? ಯಾಕೆ? ಎಂಬುದು ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿಲ್ಲ. ಹಿಂದಿನ ತಲೆಮಾರಿನ ಹೆಂಗಸರು ದುಡಿಮೆಯ ಫಲವನ್ನು ಕಣ್ಣಲ್ಲಿ ಕಾಣುತ್ತಿರಲಿಲ್ಲ. ನಾವಿಂದು ಅದನ್ನು ಕಾಣುತ್ತಿದ್ದೇವಾದರೂ, ಅದರ ಮೇಲೆ ಒಡೆತನ ಬಯಸದೇ ತ್ಯಾಗಮಯಿಯಾಗಿರಬೇಕು ಎಂಬ ನಿರೀಕ್ಷೆಯ ಮೂಲಕ ಭಾವನಾತ್ಮಕವಾಗಿ ಬಂಧಿಯಾಗಿಸಲಾಗುತ್ತದೆ. (ಇದಕ್ಕಾಗಿ ಟಿ.ವಿ ಧಾರಾವಾಹಿಗಳಿಂದ ಹಿಡಿದು ಯೂಟ್ಯೂಬ್ ಭಾಷಣಗಳ ತನಕ ಹಲವು ಅಂಗಗಳು ಹಗಲು ರಾತ್ರಿ ದುಡಿಯುತ್ತಿವೆ) ಕಿರಿಯರನ್ನೂ, ಹಿರಿಯರನ್ನೂ ಸಂಭಾಳಿಸಿ, ಅವರ ಹಿತಚಿಂತನೆ ಮಾಡುತ್ತಾ ಜೊತೆಗೆ ಸಾಮಾಜಿಕ ಮರ್ಯಾದೆಯ ಬಗ್ಗೆಯೂ ಯೋಚನೆ ಮಾಡಬೇಕಾದ ಇಕ್ಕಟ್ಟಿನಲ್ಲಿ ಕಟ್ಟಿಹಾಕುತ್ತಿರುವ ಈ ಸನ್ನಿವೇಶದಲ್ಲಿ, ಈ ಕಾದಂಬರಿ, ಇದರ ನಂತರದ ಹೊರಳುವಿಕೆ ಏನು? ಎಂಬ ಹಂತದೆಡೆಗೆ ಮುಖಾಮುಖಿಯಾಗುತ್ತದೆ.

ಅಮರೇಶ ನುಗಡೋಣಿ ಅವರ ಈ ಕಾದಂಬರಿಯಲ್ಲಿ ಮೂರು ಜನ ಅಕ್ಕತಂಗಿಯರಾದ ಶಿವಲೀಲಾ, ಅಕ್ಕಮ್ಮ, ಶ್ರೀದೇವಿಯರು ತಂದೆ ತಾಯಿಯರನ್ನು ಭೇಟಿ ಆಗುತ್ತಿರುವುದು ಮತ್ತು ಅವರಿಗೆ ತಮ್ಮ ವೈಯಕ್ತಿಕ ವಿಷಯಗಳನ್ನು ದಾಟಿಸುತ್ತಿರುವುದು– ಎಲ್ಲವೂ ಒಂದು ಕಾಲದ ಅಂತರದಲ್ಲಿ. ಇದು ಕಾದಂಬರಿಯ ತಂತ್ರವೂ ಆಗಿರಬಹುದು. ಇದೊಂದು ಸ್ಥಾಪಿಸಿಕೊಳ್ಳಬೇಕಾದ ಅಗತ್ಯ ಎಂಬುದರ ಸೂಚನೆ ಇಲ್ಲಿ ಕಾಣುತ್ತಿದೆ. ಯಾಕೆಂದರೆ, ಸಾಫ್ಟ್ ಇಮೋಷನಲ್ ಬ್ಲಾಕ್‌ಮೇಲ್‌ನಿಂದ ಹೆಣ್ಣು ಪಾರಾಗುವುದು ಕಠಿಣವಾದ ಸಂಗತಿಯಾಗಿದ್ದು, ಇಲ್ಲಿ ಈ ಅಕ್ಕ–ತಂಗಿಯರು ತಮ್ಮ ಬದುಕಿನ ನಿರ್ಣಾಯಕ ಘಟನೆಗಳನ್ನು ತಾವೇ ಎದುರಿಸಿ, ಅದರಿಂದ ಹೊರಬಂದಿರುವುದರಿಂದ ಈಗ ಅವರು ಭಾವನಾತ್ಮಕ ಒತ್ತಡಗಳಿಗೆ ಒಳಗಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ಇಕ್ಕಟ್ಟಿನಿಂದ ಪಾರಾಗಿದ್ದಾರೆ. ಒಂದು ರೀತಿಯಲ್ಲಿ ಜೈವಿಕವಾಗಿಯೇ ಹೆಣ್ಣು ಒಳಗೊಳ್ಳುವವಳು, ಗಂಡು ಹೊರಗೆ ನಡೆಯುವವನು. ಇದನ್ನು ಸಾಮಾಜಿಕ ಮೌಲ್ಯವಾಗಿ ಸ್ಥಾಪಿಸಲಾಗಿರುವ ಪರಿಸರದಲ್ಲಿ ಅವನು ಬೆಳೆಯುತ್ತಿದ್ದಾನೆ ಮತ್ತು ಆವಾಹಿಸಿಕೊಂಡಿದ್ದಾನೆ. ಹೆಣ್ಣು ಅದನ್ನು ಒಪ್ಪಿಕೊಂಡಿದ್ದಾಳೆ. ಈಗ ಬದಲಾದ ಸಂದರ್ಭದಲ್ಲಿ ಈ ಸ್ಥಾಪಿತ ಮೌಲ್ಯ ಬದಲಾಗಿದೆಯೇ? ಖಂಡಿತಾ ಇಲ್ಲ. ನಮ್ಮ ನವ ತಾಂತ್ರಿಕತೆಯಾಗಲೀ, ನಮ್ಮ ನವ ಮಾಧ್ಯಮಗಳಾಗಲೀ ಯಾವುದೂ ಕೂಡಾ ಬದಲಾಗಿಲ್ಲ. ಹಳೆಯ ಮೌಲ್ಯಗಳನ್ನೇ ಹೊಸ ಬಣ್ಣಗಳಲ್ಲಿ ಕಟ್ಟಿಕೊಡುತ್ತಿದ್ದಾರೆ ಅಷ್ಟೇ. ಗಂಡಿಗೆ ಒಬ್ಬ ಕುಟುಂಬಿಯಾಗಲು ಬೇಕಾದ ಶಿಕ್ಷಣವೇ ಸರಿಯಾಗಿ ಸಿಕ್ಕಿಲ್ಲ. ಹೆಣ್ಣಿಗೆ

ಕೊಟ್ಟಿರುವ ತರಬೇತಿಯಲ್ಲಿ 'ಎಲ್ಲವನ್ನು ತ್ಯಾಗಮಾಡು, ಮೌನಿಯಾಗಿರು, ಒಪ್ಪಿಕೊಳ್ಳು' ಎಂದು ಹೇಳಲಾಗಿದೆ. ಗಂಡಿಗೆ ಏನು ಹೇಳಲಾಗಿದೆ ಎಂದರೆ, 'ನೀನೀಗ ಇರುವುದು ಸರಿಯಾಗಿದೆ. ನೀನು ಹಕ್ಕು ಸ್ಥಾಪಿಸುವವನು ಅಷ್ಟೇ' ಎನ್ನುತ್ತಾ, ಆತನಿಗೆ ತರಬೇತಿಯ ಅಗತ್ಯವೇ ಇಲ್ಲ ಎಂದು ಸಮಾಜ ಭಾವಿಸಿದೆ. ಅಂದರೆ ನಮ್ಮ ಕೌಟುಂಬಿ ಕ ರಚನೆಯೊಳಗೇ ಇರುವ ತೊಡಕುಗಳನ್ನು ನಾವು ಪರಿಶೀಲಿಸುತ್ತಿಲ್ಲ, ಇದು ತುರ್ತು ಎಂದು ನಾವು ಅಂದುಕೊಳ್ಳುತ್ತಿಲ್ಲ. ಇದು ನಮಗೆ ಅರಿವಾಗುತ್ತಿಲ್ಲವೋ ಅಥವಾ ಅರಿವಿನ ಅವಶ್ಯಕತೆ ಇಲ್ಲ ಎಂದು ತಿಳಿದುಕೊಳ್ಳಲಾಗಿದೆಯೋ ಎಂಬುದನ್ನು ನೋಡಬೇಕಾಗಿದೆ. ಈ ಕಾದಂಬರಿ ಪ್ರಕಟವಾದ ಕಾಲಘಟ್ಟದಲ್ಲೇ ಹೊರಬಿದ್ದ ಆರೋಗ್ಯ ಸಚಿವರ ಮಾತುಗಳನ್ನು ನೆನಪಿಸಿಕೊಳ್ಳೋಣ: "ಉದಾತ್ತವಾದ ಭಾರತದ ಕುಟುಂಬದಲ್ಲಿ ಒಂದು ಶಮನಕಾರಕ ಗುಣಲಕ್ಷಣ ಇತ್ತು. ಆದರೆ ಆಧುನಿಕ ಭಾರತದ ಮಹಿಳೆಯರು ಈಗ ವಿವಾಹವನ್ನೇ ನಿರಾಕರಿಸುತ್ತಿದ್ದಾರೆ, ಮಕ್ಕಳನ್ನು ಹೇರುವುದನ್ನು ನಿರಾಕರಿಸುತ್ತಿದ್ದಾರೆ ಅಥವಾ ಬಾಡಿಗೆ ತಾಯಂದಿರಾಗುತ್ತಿದ್ದಾರೆ. ಇದೆಲ್ಲ ತುಂಬ ದುರಂತದ ಸಂಗತಿ" ಎಂದರು. ಈ ಕುರಿತು ಪ್ರೊ. ಜಾನಕಿ ನಾಯರ್ ಅವರು 'ಹಿಂದು' ಪತ್ರಿಕೆಯಲ್ಲಿ ಬರೆಯುತ್ತಾ, "ಈ ಹೇಳಿಕೆಯನ್ನು ಯಾವ ಆಧಾರದ ಮೇಲೆ ಸಚಿವರು ಕೊಡುತ್ತಿದ್ದಾರೆ? ಇವರು ಯಾವುದಾದರೂ ಸಮೀಕ್ಷೆಗಳನ್ನು ಆಧರಿಸಿ ಹೇಳುತ್ತಿದ್ದಾರಾ? ಕುಟುಂಬ ಆರೋಗ್ಯ ಸಮೀಕ್ಷೆ ನೋಡಿದ್ದಾರಾ? – ಯಾವುದೂ ಇಲ್ಲ." ಸಾರಾಸಗಟಾಗಿ ಹೇಳುತ್ತಾ ಹೆಂಗಸರನ್ನು ಗುರಿ ಮಾಡಲಾಗಿದೆ. ಇವರಂತೆಯೇ ಇನ್ನೊಬ್ಬರು ಸಚಿವರೂ, "ಆಧುನಿಕ ಮಹಿಳೆಯರು ವಿದೇಶಿಯರ ಅನುಕರಣೆ ಮಾಡುತ್ತಿದ್ದಾರೆ. ಆದರೆ ಎಲ್ಲರೂ ಅಲ್ಲ" ಎನ್ನುತ್ತಾರೆ. ಇವರು ಹೇಳುವ ಈ 'ಆಧುನಿಕ ಮಹಿಳೆ' ಎಂದರೆ ಯಾರು? ಈ ಬಗ್ಗೆ ಇವರುಗಳಿಗೆ ಸ್ಪಷ್ಟತೆ ಇದ್ದಂತೆ ಕಾಣುವುದಿಲ್ಲ. ಜಾನಕಿ ನಾಯರ್ ಅವರೇ ಹೇಳುವಂತೆ, ಸಹಸ್ರಮಾನದ ಸಿ.ಪಿ.ಆರ್. ರಿಪೋರ್ಟಿನ ಪ್ರಕಾರ, ಮದುವೆ ಬೇಡ, ಮಕ್ಕಳು ಬೇಡ ಎಂದು ಹೇಳುವ ಪ್ರವೃತ್ತಿಯಲ್ಲಿ ಲಿಂಗಭೇದ ಇಲ್ಲ. ಅಂದರೆ ಕೇವಲ ಹೆಣ್ಣುಮಕ್ಕಳು ಈ ನಿರ್ಧಾರಕ್ಕೆ ಬರುತ್ತಿರುವುದಲ್ಲ. ಮುಖ್ಯವಾಗಿ ನಾವು ಗಮನಿಸಬೇಕಾಗಿರುವುದು ಏನೆಂದರೆ, ಕೌಟುಂಬಿಕ ಚೌಕಟ್ಟುಗಳ ನಿರಾಕರಣೆಯ ಪ್ರವೃತ್ತಿಯು ಈಗಾಗಲೇ ಆರಂಭವಾಗಿದೆ. ಹಾಗಾದರೆ ಇದು ಯಾಕೆ ಹೀಗಾಗಿದೆ? ಇದು ಸರಿಯೋ ತಪ್ಪೋ ಎಂಬುದಕ್ಕಿಂತಲೂ, ಇದೊಂದು ಆಯ್ಕೆ ಆಗುತ್ತಿದೆ ಎಂದಾದರೆ ಇದರ ಹಿಂದಿರುವ ಕಾರಣ ಏನು ಎಂಬುದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇಡೀ ಕುಟುಂಬ ಎಂಬ ರಚನೆಯ ಒಳಗಡೆ ಬಿಕ್ಕಟ್ಟು ಇಲ್ಲದೇ ಹೋಗಿದ್ದಲ್ಲಿ ಈ ತಲೆಮಾರು ಈ ಆಯ್ಕೆಯ ಕಡೆಗೆ ಚಲಿಸುತ್ತಿತ್ತೇ? ಇದನ್ನು ಬಿಟ್ಟು ಹೆಣ್ಣಿಗೆ ಪುನಃ ವಾಪಾಸು ಬಾ ಎಂದು ಹೇಳಹೊರಡುತ್ತಿರುವುದೇಕೆ? ಅದರರ್ಥ ಗಂಡಿನ ಇದುವರೆಗಿನ ನಿರೂಪಣೆಗಳನ್ನು ಬದಲಿಸಲು 'ಸಮಾಜ' ಬಯಸುತ್ತಿಲ್ಲ. ಹೆಣ್ಣು ಮೊದಲು

ಸುಖವಾಗಿದ್ದಳು, ಈಗಿನ ಬದಲಾವಣೆಯಿಂದ ಅವಳು ಸುಖ ಕಳೆದುಕೊಳ್ಳುತ್ತಿದ್ದಾಳೆ ಎಂದು ಆತುರದಿಂದ ಹೇಳುವ ಇಂತಹ ಹೇಳಿಕೆಗಳು ಹೆಣ್ಣು ಒಂದು ವೇಳೆ ಸುಖವಾಗಿದ್ದೇ ಆಗಿದ್ದರೆ ಅವಳು ಬದಲಾವಣೆ ಬಯಸುತ್ತಿದ್ದಳೇ? ಎಂಬುದನ್ನು ಕೇಳಿಕೊಳ್ಳುತ್ತಿಲ್ಲ.

ಅಮರೇಶ ನುಗಡೋಣಿ ಅವರ **ಗೌರಿಯರು** ಈ ಕಾದಂಬರಿಯುದ್ದಕ್ಕೂ ಕಾಣಿಸುವ ಗಮನಾರ್ಹ ಸಂಗತಿಯೊಂದಿದೆ. ಅದು 'ಬಿಟ್ಟಿ ಚಾಕರಿ'. ಹೆಣ್ಣು ಚಾಕರಿ ಮಾಡುತ್ತಲೇ ಇರಬೇಕು. ಈ ಕಾದಂಬರಿಯಲ್ಲಿ ಪಾರ್ವತಿ ದುಡಿಯುತ್ತಲೇ ಇರ್ತಾಳೆ. ಅದರ ಅರಿವು ಅವಳ ಗಂಡ ಸದಾಶಿವಪ್ಪನಿಗೆ ಇದೆ. ಆದರೆ ಸ್ವತಃ ಪಾರ್ವತಿಗೇ ಅದರ ಅರಿವಿಲ್ಲ. ಅದು ಆಕೆಗೆ ಸಹಜ ಎನ್ನಿಸುತ್ತದೆ. ಉಳಿದವರಿಗೂ ಹಾಗೇ ಅನ್ನಿಸುತ್ತದೆ. ಆದರೆ ಹೊಸ ತಲೆಮಾರಿನ ಆಕೆಯ ಮಕ್ಕಳು 'ಸ್ವಪ್ರಜ್ಞೆ' ಇರುವವರು. ತನ್ನ ದುಡಿತದ ಮೇಲೆ ಸಂಪೂರ್ಣವಾಗಿ ಹಕ್ಕು ಸಾಧಿಸುವುದು ಮಾತ್ರವಲ್ಲ, ಆ ಕುರಿತು ನಿರ್ಭಾವುಕವಾಗಿ ವರ್ತಿಸುವ ಗಂಡನ ಕುರಿತು ಶಿವಲೀಲಾಗೆ ಅರಿವಿದೆ. ಈ ಅರಿವೇ ಪ್ರಶ್ನೆಯ ಮೂಲ. ಅದು ತಪ್ಪು ಎಂದು ಅನ್ನಿಸಿದ್ದರಿಂದ ಅವಳು ಹೊರಗೆ ಬರುತ್ತಾಳೆ. ಆದರೆ ಅವಳ ಈ ಅರಿವು ಇಡೀ ಸಮುದಾಯಕ್ಕೆ ಇನ್ನೂ ಬಂದಿಲ್ಲ.

ಅಕ್ಕಮ್ಮನಿಗೆ ಇನ್ನೊಂದು ಸವಾಲು ಎದುರಾಗುತ್ತದೆ. 'ಗಂಡು ಎಷ್ಟಾದರೂ ಸಂಬಂಧ ಹೊಂದುತ್ತಾನೆ ಬಿಡು, ಅದನ್ನು ನೀನು ಕಂಡೂ ಕಾಣದಂತಿರಬೇಕು' ಎಂಬ ಹಳೆಯ ಸಾಮಾಜಿಕ ಮಾದರಿಯಲ್ಲಿ ಒಪ್ಪಿತವಾಗಿರುವ ಪಾಠವನ್ನು ಅವಳು ಧಿಕ್ಕರಿಸುತ್ತಾಳೆ. ಮಾತ್ರವಲ್ಲ, ತನ್ನ ಮನ ಮೆಚ್ಚಿದವನೊಂದಿಗೆ ಸಹಜೀವನ ನಡೆಸುತ್ತಾ ಮಗುವನ್ನೂ ಪಡೆದಿದ್ದಾಳೆ. ಶ್ರೀದೇವಿ ಇವರಿಬ್ಬರಿಗಿಂತಲೂ ಮುಂದಿನ ಹಂತದಲ್ಲಿರುವ 'ಹೊಸ ಹೆಣ್ಣು'. ಅವಳು ಸಮಾಜಕ್ಕೆ ಸೊಪ್ಪೇ ಹಾಕುವುದಿಲ್ಲ. ಇವಳ ಸಂಗಾತಿ ಅರುಣನಿಗೆ ಆರಂಭದಲ್ಲಿ ಅವಳ ರೀತಿ-ನೀತಿಯ ಬಗೆಗೆ ಏನೂ ತಕರಾರುಗಳಿರಲಿಲ್ಲ. ಸಹಜೀವನದ ಹಂತದಲ್ಲಿ ಇಲ್ಲದ ಸಮಸ್ಯೆ ಯಾವಾಗ ಮದುವೆ ಆಗುತ್ತೋ ಆಗ ಶುರುವಾಗುತ್ತದೆ. ಆಗ ಅವನಿಗೆ ಮರೆತು ಹೋಗಿರುವ ಸಾಮಾಜಿಕ ನೀತಿ ನಿಯಮ, ತಂದೆ ತಾಯಿ ಎಲ್ಲಾ ನೆನಪಾಗ್ತಾರೆ. ಸ್ಥಾಪಿತ ಮೌಲ್ಯದ ಸೆಳೆತಕ್ಕೆ ವಾಪಾಸು ಅವನು ಜಾರುತ್ತಾನೆ. ಒಂದು ಹಂತದ ತನಕ ಇವನನ್ನು 'ಹೊಸ ಗಂಡು' ಎನ್ನಬಹುದೇನೋ ಅನ್ನಿಸಿದರೂ ಅವನು ಅದಲ್ಲ ಎಂಬುದು ತೆರೆದುಕೊಳ್ಳುತ್ತದೆ. ಕೇವಲ ಹೊಸ ಹೆಣ್ಣು ಇದ್ದರೆ ಸಾಕಾಗುವುದಿಲ್ಲ. ಹೊಸ ಗಂಡೂ ಇರಲೇಬೇಕು. ಅಂದರೆ ಎಚ್ಚೆತ್ತ ಸ್ವಪ್ರಜ್ಞೆಯ ಹೊಸಗಂಡು. ಆದರೆ ಆತ ಇನ್ನೂ ಹುಟ್ಟಿಲ್ಲ ಎಂಬ ಸೂಚನೆಯೂ ಈ ಕಾದಂಬರಿಯಲ್ಲಿ ಕಾಣುತ್ತಿದೆ. ನವ ಸಾಮಾಜಿಕದ ಬಾಹ್ಯ ಆಡಂಬರ, ತೋರಿಕೆಯ ಸಮಾನತೆಗಳ ಫೋಸ್ ಮಾತ್ರಾ ಕೊಡುತ್ತಾ ಇರುವ ಗಂಡು ಇದ್ದಾನೆ. ಗಂಡು ಹೆಣ್ಣಿನ ಸಂಬಂಧದ ಹೊಸ ವಿಸ್ತರಿತ ಸಮಾನ ಆಯಾಮ ಮತ್ತು ಅದರ ಕಾರಣದಿಂದ ಸಿಗಬಲ್ಲ ಸಮಾನ

ಸಂತಸದ ಅರಿವನ್ನು ಗಂಡಿಗೆ ನೀಡಲು ಇನ್ನೂ ಸಾಧ್ಯವಾಗಿಲ್ಲ. ಸಂತಸ ಎಂಬುದು ಇಬ್ಬರಿಗೂ ಬೇಕಿರುವುದು. ಸದಾ ತನ್ನ ಕೇಂದ್ರದ ಮೂಲಕ ಇನ್ನೊಬ್ಬರನ್ನು ನೋಡುವಾಗ ತಾನೂ ಸಂತಸವಾಗಿಲ್ಲದೇ, ಇನ್ನೊಬ್ಬರ ಸಂತಸವನ್ನೂ ಹಾಳುಮಾಡುವ ರಚನೆಯಿಂದ ಹೊರಬರಬೇಕಾಗಿದೆ. ಇದು ಹೆಣ್ಣಿಗೂ ಅನ್ವಯಿಸುತ್ತದೆ. ಹೀಗಾಗಿ ಶ್ರೀದೇವಿ ಈ ನೆಲೆಯಲ್ಲಿ ಯೋಚಿಸಬೇಕಾದ, ಚರ್ಚಿಸಬೇಕಾದ ಅವಶ್ಯಕತೆಯೂ ಇದೆ. ಆ ಸಾಧ್ಯತೆಯನ್ನು ಕಾದಂಬರಿ ತೆರೆದಿಟ್ಟಿದೆ.

ತನ್ನ ದೇಹ ಮನಸ್ಸುಗಳೇನು ಎಂಬ ಕುರಿತಾಗಿ ಗಂಡು ತಾನೇ ಒಂದು ಸ್ವಪ್ರಜ್ಞೆ ರೂಪಿಸಿಕೊಂಡಿದ್ದಾನಾ ಎಂಬ ಬಗ್ಗೆ ನನಗೆ ತುಂಬಾ ಸಂಶಯಗಳಿವೆ. ಗಂಡು ತನಗೆ ನಿರೂಪಿಸಿಕೊಟ್ಟಿರುವಂತಹ ಪ್ರಜ್ಞೆಯೊಳಗಡೆ ತನ್ನನ್ನು ತಾನು ಅಡಕಗೊಳಿಸಿ ಕೊಂಡು, ನಂಬಿಕೊಂಡು ಒದ್ದಾಡುತ್ತಿದ್ದಾನೆ. ಅದರಿಂದ ಹೊರಗೆ ಬರುವುದು ಬಹಳ ಮುಖ್ಯ. ಈ ಅರಿವು ಇಲ್ಲದಿದ್ದರೆ ಕುಟುಂಬದೊಳಗಡೆ ಸಮ ಸಂಬಂಧ ಇರುವುದಕ್ಕೆ ಸಾಧ್ಯವೇ ಇಲ್ಲ. ಅದು ಅಸಮ ಸಂಬಂಧವೇ ಆಗಿರುತ್ತದೆ. ಅದು ಕುದಿಯಾಗಿಯೇ ಇರುತ್ತದೆ. ಅಂದರೆ ವ್ಯಕ್ತಿಗಳು ಸಮುದಾಯಗಳಾಗಬೇಕೆಂದು ಬಯಸಿದರೂ ಕೂಡಾ ಸಮುದಾಯಗಳಾಗದೇ ದ್ವೀಪಗಳಾಗುವ ದುರಂತ ತಪ್ಪುವುದಿಲ್ಲ.

ಗೌರಿ ನೋಪಿ ಸಾಮೂಹಿಕ ಆಚರಣೆ. ಈ ಆಚರಣೆಯನ್ನು ನಾವ್ಯಾಕೆ ಮಾಡುತ್ತಿದ್ದೇವೆ ಎಂಬ ಎಚ್ಚರವಾದರೂ ನಮ್ಮಲ್ಲಿದೆಯೇ? ಅಥವಾ ಇದು ಕೇವಲ ತೋರಿಕೆಯದೋ? ಇದು ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳನ್ನು ಬೆಸೆಯುತ್ತಿದೆಯೇ? ಅದನ್ನು ಒಂದು ಸಂಭ್ರಮವಾಗಿ, ವೈಭವವಾಗಿ ಬಿಂಬಿಸುತ್ತಾ, ಇದು ನಮ್ಮ ಸಂಪ್ರದಾಯ, ನಾವು ಸಂಪ್ರದಾಯದೊಂದಿಗೆ ಬೆಸೆದುಕೊಂಡಿದ್ದೇವೆ, ಮುಂದುವರಿಸುತ್ತಿದ್ದೇವೆ ಎಂದು ತೋರುವ ಹುಸಿತನದೊಳಗೆ ಬದುಕುತ್ತಾ, ಒಂದು ರೀತಿಯ ಯಾಂತ್ರಿಕವಾದ–ಆತ್ಮವಿಲ್ಲದ ಚಹರೆ– ಆಗುವ ಸ್ಥಿತಿಯಿದೆಯಲ್ಲಾ, ಅದರಿಂದ ಹೊರಬರಲೇಬೇಕಾಗಿದೆ. ಇವತ್ತಿನ ನಮ್ಮ ಸುತ್ತಲಿನ ಬದುಕೆಲ್ಲವೂ ಇಂತಹ ಒಂದು ಸ್ಥಿತಿಯಲ್ಲಿ ಇದೆ. ತೋರಿಕೆಯ ನಡೆ, ನುಡಿಗಳು–ಭೋಗಕ್ಕಾಗಿ ಭೂಮಿಯನ್ನು ಹಾಳು ಮಾಡಿದಂತೆಯೇ–ಮನುಷ್ಯರ ಚೈತನ್ಯವನ್ನು ಹಾಳು ಮಾಡುತ್ತಿದೆ. ಈ ತಿಳಿವು ಬಂದೀತೇ? ಈ ಕಾದಂಬರಿಯ ಗೌರಿಯರು ಈ ಹೆಜ್ಜೆಯನ್ನು ಇಟ್ಟಿದ್ದಾರೆ. ಅವರ ಈ ಹೆಜ್ಜೆಯನ್ನು ಅರ್ಥಮಾಡಿಕೊಳ್ಳಬೇಕೆಂದರೆ ನೋಡುವ ಕಣ್ಣುಗಳೂ ಕೂಡಾ ಬದಲಾಗಲೇಬೇಕು. ಇಲ್ಲದೇ ಹೋದಲ್ಲಿ ಅವರ ನಡೆಗಳೆಲ್ಲವೂ ತಪ್ಪಾಗಿ ಕಾಣಬಹುದು. ಅವರ ಹುಡುಕಾಟಗಳು ಇರುವುದು, ಮದುವೆಯ ಬದುಕಿನ ಆರೋಗ್ಯಕರ ಸಂಬಂಧಗಳಿಗಾಗಿಯೇ ಹೊರತು ವಿಚ್ಛೇದನಗಳಿಗಾಗಿಯಲ್ಲ. ಸ್ನೇಹ, ಬಾಂಧವ್ಯ, ಪರಸ್ಪರತೆ, ಸಮಾನತೆ, ಗೌರವಗಳು ಯಾಕೆ ಮದುವೆಯ ನಂತರ ಮುಂದುವರಿ ಯುವುದಿಲ್ಲ? ಮದುವೆಯ ನಂತರವೂ ಹೆಣ್ಣು ಇದನ್ನು ಬಯಸುವಂಥದ್ದು ತುಂಬಾ

ಗಹನವಾದ ಸಂಗತಿಯಲ್ಲವೇ? ಎಚ್ಚೆತ್ತುಕೊಳ್ಳಬೇಕಾದ ಸಂಗತಿಯಲ್ಲವೇ? ಈ ಸೂಕ್ಷ್ಮತೆಯನ್ನು ನಾವು ಯಾವಾಗ ಪಡದುಕೊಳ್ಳಬೇಕು? ಅನ್ನುವ ಒಂದು ಹೆಜ್ಜೆ ಈ ಕಾದಂಬರಿಯಲ್ಲಿದೆ.

ಆಧುನಿಕ ಗೌರಿಯರ ಕತೆ ಹೇಳುವಾಗ ಕಾದಂಬರಿ ಕೇವಲ ಒಂದು ಮುಖದಲ್ಲಷ್ಟೇ ನೋಡಿಲ್ಲ. ಇಲ್ಲಿ ಸದಾಶಿವಪ್ಪ–ಪಾರ್ವತಿ, ಶರಣ–ಚಂದ್ರಕಲಾರ ಸೊಗಸಾದ ದಾಂಪತ್ಯದ ಚಿತ್ರವೂ ಇದೆ. ಈ ಕಾದಂಬರಿ ಓದುವಾಗ ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ' ಪ್ರಾಸಂಗಿಕವಾಗಿ ನೆನಪಾಯಿತು. ನಲವತ್ತರ ದಶಕದಲ್ಲೇ ಕಾರಂತರು ಹೆಣ್ಣು ಕಣ್ಣೋಟದಿಂದ ದಾಂಪತ್ಯವನ್ನು ನೋಡುವ ಪ್ರಯತ್ನ ಮಾಡುವಾಗ ಆ ಕಾಲಕ್ಕೆ ಅತ್ಯಾಧುನಿಕವಾಗಿ ಯೋಚಿಸುವ ಸುನಾಲಿನಿ, ಭಾಗೀರಥಿಯರು ಎಲ್ಲಿ ತಮ್ಮತನಕ್ಕೆ ಬೆಲೆ ಇಲ್ಲವೋ ಅಲ್ಲಿ ಉಳಿಯದೇ ತಮ್ಮ ಬದುಕಿನ ದಾರಿಯನ್ನು ತಾವೇ ನೋಡಿಕೊಳ್ಳುವ ದಿಟ್ಟ ಹೆಜ್ಜೆ ಇಡುತ್ತಾರೆ. ಗಂಡು ಸಂಗಾತಿಯಾಗಿರಬೇಕು ಎಂಬ ಸಾಂಗತ್ಯದ ಹುಡುಕಾಟ ನಡೆಸುತ್ತಾರೆ. ಹಾಗೆ ನಡೆಸದೇ ಹೋದವರು ದುರಂತಕ್ಕೆ ಒಳಗಾದುದನ್ನೂ ಕಾದಂಬರಿ ಹೇಳುತ್ತದೆ. ಅಲ್ಲಿಂದಾಚೆಗೆ, ಶಾಂತಿನಾಥ ದೇಸಾಯಿ, ಪಿ. ಲಂಕೇಶ್ ಭಿನ್ನ ಹೆಣ್ಣಿನ ಹುಡುಕಾಟ ನಡೆಸಿದ್ದಾರೆ. ಮುಂದೆ ಈ ಹೊಣೆಗಾರಿಕೆಗಳನ್ನೆಲ್ಲಾ ಹೆಚ್ಚಾಗಿ ಲೇಖಕಿಯರೇ ಹೊತ್ತರು. ಇದು ಮುಂದುವರಿಯುತ್ತಲೇ ಇರುವಾಗ ಅಮರೇಶ ಭವಿಷ್ಯದ ಸಾಧ್ಯತೆಯೊಂದನ್ನು ಮುಂಗಾಣುವ ರೂಪದಲ್ಲಿ ಈ ಕಾದಂಬರಿ ಬರೆದಿದ್ದಾರೆ. ನಿಜ, ಈ ಕಾದಂಬರಿಯಲ್ಲಿ ಈ ದಿಟ್ಟ ಹೆಜ್ಜೆ ಇಡುತ್ತಿರುವ ಗೌರಿಯರು ತಾವು ಮಾಗಿರುವುದಲ್ಲದೇ, ಸಾಮಾಜಿಕ, ಆರ್ಥಿಕ ಬಲ ಮತ್ತು ತವರಿನ ಆಸರೆ ಇರುವವರು. ಜೊತೆಗೆ ಸಹನೆ ಮತ್ತು ವಿವೇಕ ಇರುವ ಹಿರಿಯರನ್ನು ಪಡೆದ ಅದೃಷ್ಟವಂತರು. ಈ ಕಾರಣದಿಂದ ಅವರು ನೋಪಿ ಪೂಜೆಯ ಸಂದರ್ಭದಲ್ಲಿ ಇದಿರಾದ ಅಪಮಾನಗಳನ್ನು ಸವಾಲುಗಳನ್ನಾಗಿ ಸ್ವೀಕರಿಸಿ ನಿರಾಳವಾಗಿ ಮುಂದಕ್ಕೆ ಹೋಗಲು ಸಾಧ್ಯವಾಗುತ್ತದೆ. ಇದಿಲ್ಲದವರಿಗೆ ಈ ಹೆಜ್ಜೆ ಇನ್ನೂ ಕಠಿಣವಾದುದು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇದು ಅಸಹನೀಯವಾದ, ಮರಣಸದೃಶ ಬದುಕುಗಳಿಂದ ಬಿಡಿಸಿಕೊಳ್ಳಬೇಕೆಂಬವರಿಗೆ ಕಿರುದಾರಿಯನ್ನಾದರೂ ತೋರಿಸುತ್ತದೆ ಎಂಬುದರಲ್ಲೂ ಸಂಶಯವಿಲ್ಲ. ಹೀಗೆ ಹೋದಾಗ ಹುಟ್ಟಿಕೊಳ್ಳುವುದೇ ನವ ಸಾಮಾಜಿಕತೆಗೆ ಪೂರಕವಾದ ಸಾಮಾಜಿಕ ನೆಲ. ಆ ನವ ಸಾಮಾಜಿಕತೆಗೆ ತೋರು ಬೆರಳುಗಳಂತೆ ಸ್ವಪ್ರಜ್ಞೆಯ ಗೌರಿಯರಿದ್ದಾರೆ. ತುಂಬಾ ಸಾವಧಾನದ ಕಥನ ತಂತ್ರವನ್ನು ಒಳಗೊಂಡಿರುವುದು ಈ ಕಾದಂಬರಿಯನ್ನು ತಕ್ಷಣಕ್ಕೆ ಸೆಳೆಯದಂತೆ ಮಾಡುವ ಸಂಭಾವ್ಯತೆ ಇರುವಂತೆಯೇ ಇದು ತೋರುವ ಬದುಕಿನ ಸಾಧ್ಯತೆಗಳಿಗೂ ಅಪಾರವಾದ ಸಾವಧಾನದ ಅವಶ್ಯಕತೆ ಇದೆ.

◆◆

೩

ಕತೆಯಾದ 'ಗೌರಿಯರು'

ಮೇಟಿ ಮಲ್ಲಿಕಾರ್ಜುನ

ಅಮರೇಶ ನುಗಡೋಣಿ ಅವರು ಈಚೆಗೆ ಹೊರತಂದಿರುವ ಕಾದಂಬರಿಯ ಹೆಸರು **ಗೌರಿಯರು**. ಕನ್ನಡದ ಮಹತ್ವದ ಕಾದಂಬರಿಗಳ ಸಾಲಿಗೆ ಸೇರ್ಪಡೆಯಾದ ಮತ್ತೊಂದು ಕಾದಂಬರಿಯೇ ಈ ಗೌರಿಯರು. ಕೆಲವೊಮ್ಮೆ ಕಥೆ ಮತ್ತು ಕಾದಂಬರಿಗಳಿಗೆ ಕೊಡುವ ಶೀರ್ಷಿಕೆಗಳೇ ವಿಶೇಷವಾಗಿರುತ್ತವೆ. ಈ ಪ್ರಸ್ತುತ ಕಾದಂಬರಿಯ ತಲೆಬರಹವೂ ಅಂತಹದೊಂದು ವಿಶೇಷ ಶೀರ್ಷಿಕೆಯಾಗಿದೆ. ಹೌದು ಗೌರಿ ಎನ್ನುವ ಹೆಸರೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಹಲವು ಬಗೆಯ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಪಡೆದ ಹೆಸರಾಗಿದೆ. ಇದೊಂದು ರೂಪಕವೂ ಹೌದು ಮತ್ತು ವ್ಯಕ್ತಿಸೂಚಕ ಹೆಸರೂ ಹೌದು. ನೋಡಿ ದಾಂಪತ್ಯದ ಸಾಂಗತ್ಯವನ್ನು ನಿರ್ದೇಶಿಸುವ ಸೂಚಕವಾಗಿ ಒಂದುಕಡೆ ಕಂಡುಬಂದರೆ, ಇದೇ ದಾಂಪತ್ಯದ ಹಂಗುತೊರೆದು, ಗಂಡಿನ ಬಿಡೆಯಿಲ್ಲದೇ ಬದುಕುವ ಹೆಣ್ಣಿನ ರೂಪಕವೂ ಇದಾಗಿದೆ. ಮತ್ತು ಈ ಕಾದಂಬರಿಯಲ್ಲಿ ಪ್ರಮುಖ ಪಾತ್ರಗಳನ್ನಾಗಿ ನಿರೂಪಿಸಲಾದ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿ ಇವರನ್ನು ಗೌರಿಯರು ಎಂದು ಒಟ್ಟಾಗಿ ಕರೆಯಲಾಗಿದೆ.

ಈ ಗೌರಿಯರ ಆತ್ಮಕಥನವೇ ಆಗಿ ಬಿಂಬಿತವಾಗಿರುವ ಈ ಕಾದಂಬರಿಯನ್ನು ಈಗಾಗಲೇ ಹಲವಾರು ವಿಮರ್ಶಕರು ಸ್ತ್ರೀಚಿಂತನೆಯ ಕಥನವನ್ನಾಗಿ ಪರಿಗಣಿಸಿದ್ದಾರೆ. ಆದರೆ ಕಾದಂಬರಿಯೊಳಗೆ ಅನಾವರಣಗೊಂಡಿರುವ ಬದುಕಿನ ಅತ್ಯಂತ ಸಂಕೀರ್ಣ ಸನ್ನಿವೇಶಗಳನ್ನು ಸಾರಸಗಟಾಗಿ ಒಂದು ನಿರ್ದಿಷ್ಟ ದೃಷ್ಟಿಕೋನಕ್ಕೆ ಮಾತ್ರ ಆರೋಪಿಸುವುದು ಎಷ್ಟೊಂದು ಸರಿ ಎನ್ನುವ ಪ್ರಶ್ನೆಯಂತು ನಮ್ಮಲ್ಲಿ ಒಡಮೂಡುತ್ತದೆ. ಏಕೆಂದರೆ ಈ ಕಥನವು ಭೂ ಮಾಫಿಯ, ಭೂ ಮಾಲಿಕತ್ವ, ಭೂಮಿಯೊಂದಿಗಿನ ನಂಟಸ್ತಿಕೆಯ ಪ್ರಶ್ನೆ, ಧರ್ಮದ ಪ್ರತಿನಿಧಿಗಳಾದ ಮಠದ ಸ್ವಾಮಿಗಳ ಅಸ್ತಿತ್ವದ ಪ್ರಶ್ನೆ, ಅಣ್ಣ ತಮ್ಮಂದಿರ ಸಂಬಂಧ, ಹೆಣ್ಣಿನ ಅಸ್ತಿತ್ವ, ಪ್ರತಿನಿಧಿಕರಣ, ಬದುಕಿನ ಸ್ವಾಯತ್ತತೆಯ

ಪ್ರಶ್ನೆ ಹಾಗೂ ಕೌಟುಂಬಿಕ ಸಂಬಂಧದ ಪ್ರಶ್ನೆಗಳೂ ಇಲ್ಲಿ ಮುಖ್ಯವಾಗಿವೆ. ಇವುಗಳ ಜೊತೆಗೆ ಜಾಗತೀಕರಣ, ಆಧುನಿಕತೆಯ ಪ್ರಭಾವ ಮತ್ತು ಪರಿಣಾಮಗಳು ಹೇಗೆ ನಮ್ಮ ದೈನಂದಿನ ಬದುಕಿನ ಲಯಗಳನ್ನು ಪಲ್ಲಟಗೊಳಿಸುವ ತುಡಿತವನ್ನು ಹೊಂದಿರುತ್ತವೆ ಎನ್ನುವ ವಿನ್ಯಾಸವು ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ನಿರೂಪಿತವಾಗಿದೆ.

ಇಡೀ ಕಾದಂಬರಿಯ ಕಥನದ ತೀವ್ರತೆಯನ್ನು ಇಮ್ಮಡಿಗೊಳಿಸುವಲ್ಲಿ ಈ ಜಾಗತೀಕರಣ ಮತ್ತು ಆಧುನಿಕತೆಯಂತಹ ವಿದ್ಯಮಾನಗಳು ಹಾಗೂ ಬದುಕಿನ ಹೊಸಶೈಲಿಗಳು ಪ್ರಮುಖ ಪಾತ್ರ ವಹಿಸಿರುತ್ತವೆ. ಅಂದರೆ ನಮ್ಮ ಬದುಕಿನ ದೃಷ್ಟಿಕೋನಗಳನ್ನು ಮರುವಿನ್ಯಾಸಗೊಳಿಸುವಲ್ಲಿ ಇವು ಯಾವೆಲ್ಲ ಬಗೆಯಲ್ಲಿ ಮಧ್ಯಪ್ರವೇಶವನ್ನು ಮಾಡಿರುತ್ತವೆ ಎಂಬ ವಾಸ್ತವವನ್ನು ಈ ಕಥನದ ಮೂಲಕ ನಾವು ಗ್ರಹಿಸಬಹುದು. ಈ ಕಥನದೊಳಗಿಂದಲೇ ಹೊರಹೊಮ್ಮುವ ಮತ್ತೊಂದು ಬಹುಮುಖ್ಯವಾದ ನಿಲುವು ಏನೆಂದರೆ, ಬದುಕಿನಲ್ಲಿ ರಾಜಿ ಮಾಡಿಕೊಳ್ಳಬೇಕಾದವರು ಯಾರು? ಗಂಡೋ? ಹೆಣ್ಣೋ? ಅಥವಾ ಇವರಿಬ್ಬರೋ? ಹಾಗೂ ಬದುಕಿನ ಲಯಗಳು ಹಾದಿ ತಪ್ಪುವುದಕ್ಕೆ ಯಾವೆಲ್ಲ ಪ್ರಭಾವ ಮತ್ತು ಪರಿಣಾಮಗಳು ಎದುರಾಗುತ್ತವೆ? ಎಂಬೆಲ್ಲ ಪ್ರಶ್ನೆಗಳು ಈ ಕಾದಂಬರಿಯ ವಿವರಗಳಿಂದಲೇ ಹೊರಹೊಮ್ಮುತ್ತವೆ. ಆಧುನಿಕತೆಯೊಂದಿಗಿನ ಮುಖಾಮುಖಿ–ಅನುಸಂಧಾನದ ವಿನ್ಯಾಸಗಳನ್ನು ಗ್ರಹಿಸಲೇಬೇಕಾದ ಒತ್ತಾಯಗಳು ಈ ಕಾದಂಬರಿಯ ಕಥನದೊಳಗೆಯೇ ಮೈದಾಳಿವೆ. ಇವುಗಳು ಹೇಗೆ ಅನಾವರಣಗೊಳ್ಳುತ್ತವೆ ಎಂಬುದನ್ನು ಸೂಚಿಸುವ ಸಾಕಷ್ಟು ವಿವರಗಳನ್ನು ಇಲ್ಲಿ ನಿರೂಪಿಸಲಾಗಿದೆ. ಆದರೆ ಬಹುತೇಕ ಸನ್ನಿವೇಶದಲ್ಲಿ, ಕಾದಂಬರಿಯು ಮಂಡಿಸುವ ಈ ವಿವರಗಳನ್ನು ಅನಗತ್ಯವೆಂದೇ ಭಾವಿಸುತ್ತೇವೆ. ಹಾಗಾಗಿಯೇ ಇಡೀ ಕಾದಂಬರಿಯ ದೃಷ್ಟಿಕೋನವನ್ನು, ಯಾವುದೇ ಒಂದು ತಾತ್ವಿಕತೆಗೆ ಸೀಮಿತಗೊಳಿಸುವುದಷ್ಟೆಯಲ್ಲ ಬದಲಾಗಿ ಕಥನದೊಳಗೆ ಅಡಕವಾಗಿರುವ ಬದುಕಿನ ಅನುಭವದ ಬಾಹುಳ್ಯತೆಯನ್ನೂ ನಿರ್ದಿಷ್ಟಗೊಳಿಸಲಾಗುತ್ತದೆ. ವರ್ತಮಾನದ ಬಿಕ್ಕಟ್ಟುಗಳನ್ನು ಕುರಿತ ಕಥೆ, ಕಾದಂಬರಿಗಳನ್ನು ಹಲವರು ನಿಡುಗಾಲದಿಂದಲೂ ಬರೆಯುತ್ತಿದ್ದಾರೆ. ಆದರೆ ಅವುಗಳಲ್ಲಿ ನಮ್ಮ ಬದುಕಿನ ಸಂಕಥನವಾಗಿ ನಮಗೆ ಮರುಪಾಠ ಹೇಳುವ ಎದೆಗಾರಿಕೆಯನ್ನು ತೋರಿದಂತಹ ಕಥನಗಳು ಅತ್ಯಂತ ಕಡಿಮೆ. ಇಂತಹ ಕಥನಗಳಲ್ಲಿ ಅಮರೇಶ ನುಗಡೋಣಿಯವರ ಈ ಪ್ರಸ್ತುತ ಕಾದಂಬರಿಯೂ ಜಾಗಪಡೆದಿದೆ. ಗೌರಿಯರು ಕಾದಂಬರಿಯ ಕಥನ ಕ್ರಿಯೆ (ಸ್ಟೋರಿ ಆಕ್ಟ್ಸ್) ಮತ್ತು ನಿರೂಪಣೆ (ಡಿಸ್ಕೋರ್ಸ್) ಇವೆರಡೂ ನಮ್ಮ ಅಸ್ತಿತ್ವದ ನೆಲೆಗಳನ್ನು ಮರುಪರಿಶೀಲಿಸುವ ಒತ್ತಾಯವನ್ನು ಮಾಡುತ್ತವೆ. ಯಾವುದೇ ಒಂದು ಕಥನ ಕ್ರಿಯೆಯಲ್ಲಿ ಈ ಆಯಾಮವು ಮೈಪಡೆಯುವುದು ವಸ್ತುವನ್ನು ಆಯ್ಕೆ ಮಾಡಿಕೊಳ್ಳುವ ವಿಧಾನದಿಂದ. ಎಷ್ಟೋ ಸನ್ನಿವೇಶದಲ್ಲಿ ಇಂತಹ ಆಯ್ಕೆಗಳು ನಮ್ಮನ್ನು ಮುಟ್ಟಿ ನೋಡಿಕೊಳ್ಳುವ ವಿಧಾನವಾಗಿ

ನಮಗೆ ದೊರೆಯುತ್ತವೆ. ದೇವನೂರು, ಲಂಕೇಶ್ ಮತ್ತು ಚಿತ್ತಾಲರ ಕಥನಗಳಲ್ಲಿ ಈ ವಿನ್ಯಾಸಗಳು ಎದ್ದು ಕಾಣುತ್ತವೆ. ಆದರೆ ಅಮರೇಶ ಅವರ ಕಥನಗಳಲ್ಲಿ ಈ ಆಯಾಮಗಳು ನೆಲೆಗೊಂಡಿದ್ದರೂ, ಇವರು ಕೇವಲ ಇಂತಹ ವಿನ್ಯಾಸಗಳಿಗೆ ಅಂಟಿಕೊಳ್ಳದೇ, ತಾವು ಸೃಜಿಸುವ ಕಥನದೊಳಗೆಯೇ ಬದುಕಿನ ಒಂದು ಕ್ರಿಯಾವರ್ತುಲವನ್ನು ಸೃಷ್ಟಿ ಮಾಡುತ್ತಾರೆ. ಇದು ಕುವೆಂಪು ಅವರ ಕಥನಗಳ ಸ್ವರೂಪವೂ ಆಗಿರುತ್ತದೆ ಎನ್ನುವುದು ವಿಶೇಷ.

ಕನ್ನಡ ಸಾಹಿತ್ಯದಲ್ಲಿ ಆಧುನಿಕತೆಯನ್ನು ಪ್ರಶ್ನಿಸುವ, ಅನುಸಂಧಾನ ಮಾಡುವ, ಮುಖಾಮುಖಿಯಾಗುವ ಮತ್ತು ಅದನ್ನೊಂದು 'ಅನಿಷ್ಠ'ವೆಂದು ಪರಿಭಾವಿಸಿದ ಸಾಕಷ್ಟು ಕಥನಗಳು ಈಗಾಗಲೇ ಬಂದಿವೆ. ಅಮರೇಶ ಅವರು ಈ ಬಗೆಯ ಕಥನ ಮಾದರಿ ಹಾಗೂ ಕ್ರಿಯೆಯಿಂದ ಹೇಗೆ ಭಿನ್ನವಾಗಿ ಕಾಣುತ್ತಾರೆಂದರೆ, ಆಧುನಿಕತೆ ಮತ್ತು ಜಾಗತೀಕರಣದಂತಹ ವಿದ್ಯಮಾನಗಳು, ನಮ್ಮ ಬದುಕಿನ ಸಾಗರದಲ್ಲಿ ಅಪಾಯದ ಸುಳಿಗಳನ್ನು ಸೃಷ್ಟಿಸುವುದಕ್ಕೆ ಹೇಗೆ ಕಾರಣವಾಗುತ್ತವೆ ಅನ್ನುವುದನ್ನು ಒಂದು ಅನುಭವವನ್ನಾಗಿ ರೂಪಿಸುತ್ತಾರೆ. ನೋಡಿ ಈ ಕಾದಂಬರಿಯ ಕಥನದ ಹರವು ಮತ್ತು ವ್ಯಾಪ್ತಿ ಅತ್ಯಂತ ಕಡಿಮೆ ಹಾಗೂ ಕೆಲವೇ ಕುಟುಂಬಗಳ ನಡುವೆ ಪ್ರಸ್ತುತ ಕಾದಂಬರಿಯ ಲೋಕವು ಅನಾವರಣಗೊಳ್ಳುತ್ತದೆ. ಆದರೆ 'ಕಥಾ ಜಗತ್ತು' ನೆಲೆ ಪಡೆಯುವುದು ತಲೆಮಾರುಗಳ ನಡುವೆ. ಹಾಗಾಗಿ ಬದುಕಿನ ಪೂರ್ವಾಪರಗಳು ನಮಗಿಲ್ಲಿ ನಿಚ್ಚಳವಾಗಿ ಕಾಣುತ್ತವೆ. ಪರಿಣಾಮವಾಗಿ ನೆನಪಿನ ಪರಂಪರೆಯೊಂದು ಯಥೇಚ್ಛವಾಗಿ ತೆರೆದುಕೊಳ್ಳುತ್ತದೆ. ಅವರವರ ಬದುಕಿನ ಹೊಣೆಗಾರಿಕೆಯ ಪ್ರಶ್ನೆಯನ್ನೂ ಇಲ್ಲಿ ಮುನ್ನೆಲೆಗೆ ತರುವ ವಿಶಿಷ್ಟ ಬಗೆಗಳನ್ನೂ ನಾವು ಕಾಣುತ್ತೇವೆ. ಚಂದ್ರಶೇಖರ ಮತ್ತು ರಾಮಚಂದ್ರ ಅವರಂತಹ ಪಾತ್ರಗಳು ಹೊಣೆಗೇಡಿತನಕ್ಕೆ ನಿದರ್ಶನವಾದರೆ, ಸದಾಶಿವಪ್ಪ ಮತ್ತು ಶಿವಲಿಂಗಪ್ಪನಂತಹ ಪಾತ್ರಗಳು ಬದುಕಿನ ಕಾಳಜಿ ಮತ್ತು ಹೊಣೆಗಾರಿಕೆಗೆ ಉದಾತ್ತ ಮಾದರಿಗಳಾಗಿವೆ. ಆದರೆ ಪಾರ್ವತಿ ಮತ್ತು ಚನ್ನಮ್ಮ ಇವರಿಬ್ಬರ ನಡುವಣ ವೈದೃಶ್ಯಗಳು ಅವರವರ ವ್ಯಕ್ತಿತ್ವದಲ್ಲಿ ಕಾಣುತ್ತವೆ. ಯಾವುದೇ ಪಾತ್ರವನ್ನೂ ಕಪ್ಪು ಬಿಳುಪಿನ ನೆಲೆಯಲ್ಲಿ ಗುರುತಿಸಲು ಸಾಧ್ಯವಿಲ್ಲ. ಹಾಗಾಗಿ ದಾಂಪತ್ಯದಲ್ಲಿ ನಿಷ್ಠೆ ಮತ್ತು ಅಧೀನತೆಯ ಪ್ರಶ್ನೆಗಳು ಅತ್ಯಂತ ವಿಭಿನ್ನ ಮತ್ತು ಸಂಕೀರ್ಣ ಸ್ಥಿತಿಯಲ್ಲಿ ಈ ಕಾದಂಬರಿಯಲ್ಲಿ ಮೈದಾಳಿವೆ. ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿ ಮೂವರು ತಮ್ಮ ಕೌಟುಂಬಿಕ ಬದುಕಿನ ಧಾರುಣತೆಯನ್ನು ಬೇರೆ ಬೇರೆ ನೆಲೆಯಲ್ಲಿ ಅನುಭವಿಸುತ್ತಾರೆ. ನೈತಿಕ ಮತ್ತು ಅನೈತಿಕತೆಯ ಪ್ರಶ್ನೆಗಳು ಹೇಗೆ ಕುಟುಂಬಗಳನ್ನು ಬಾಧಿಸುತ್ತವೆ ಎನ್ನುವ ಬದುಕಿನ ಸೂಕ್ಷ್ಮತೆ ಇಲ್ಲಿ ಮುಖ್ಯವಾಗಿದೆ.

ಉದ್ಯೋಗ, ಶಿಕ್ಷಣ, ಆರ್ಥಿಕತೆ, ಭೂಮಿಯ ಒಡೆತನ ಮೊದಲಾದವು ಬದುಕಿಗೆ ಘನತೆಯನ್ನು ತಂದುಕೊಡುವ ಹಾಗೂ ನೆಮ್ಮದಿಯ ಬದುಕನ್ನು ಕೊಂಡುತರುವ

ವಿನ್ಯಾಸಗಳನ್ನಾಗಿ ಪರಿಗಣಿಸಲಾಗಿದೆ. ಅಷ್ಟೆಯಲ್ಲದೆ, ಇವುಗಳ ಬೆನ್ನುಹತ್ತುವುದೇ ನಮ್ಮ ಜೀವನದ ಆತ್ಯಂತಿಕ ಗುರಿಯಾಗಿದೆ. ಆದರೆ ಈ ಸೌಲಭ್ಯಗಳೇ ಹೇಗೆ ನಮ್ಮನ್ನು ಇಕ್ಕಟ್ಟಿಗೆ ನೂಕುವ ಅಸ್ತ್ರಗಳಾಗಿ ರೂಪುಗೊಳ್ಳುತ್ತವೆ ಎಂಬ ವಾಸ್ತವವು ಈ ಕಾದಂಬರಿಯಲ್ಲಿ ಒಂದು ಸಾಮಾಜಿಕ ವಿವೇಕವಾಗಿ ನಮಗೆ ಓದುಗರಿಗೆ ದಕ್ಕುತ್ತದೆ ಹೊರತು ಪಾತ್ರಗಳಿಗೆ ಇದು ಯಾವುದೇ ಬಗೆಯಲ್ಲಿ ಮನವರಿಕೆಯಾಗುವುದಿಲ್ಲ. ಬದುಕಿನ ಶೈಲಿಗಳು ಬದಲಾಗಿದ್ದರೂ, ಹೆಣ್ಣು-ಗಂಡು ಇವರಿಬ್ಬರೂ ಶೈಕ್ಷಣಿಕ ಅವಕಾಶಗಳನ್ನು ಪಡೆದು, ಉದ್ಯೋಗಿಗಳಾಗಿ ಸ್ವಾಯತ್ತ ಬದುಕನ್ನು ಮುನ್ನೆಡಸಲು ಸಾಧ್ಯವಾಗುವುದು ದುಸ್ತರವಾಗಿದೆ. ಆದರೆ ಗಂಡು ಹೆಣ್ಣಿನ ಮೇಲೆ ತಾನು ನಡೆಸುವ ಶೋಷಣೆ, ಹಿಂಸೆ ಮತ್ತು ದೌರ್ಜನ್ಯ ಮಾತ್ರ ಮುಂದುವರೆದಿದೆ. ಅಷ್ಟೆಯಲ್ಲದೇ, 'ಗಂಡಸಿನ ಎಲ್ಲ ಹೊಲಸನ್ನು ಹೊರುವುದು ಮಹಿಳೆಗೆ ಯಾಕೆ?' (ಪು. ೧೦೦) ಎನ್ನುವ ಗಂಭೀರ ಪ್ರಶ್ನೆಯನ್ನು ಈ ಕಾದಂಬರಿಯು ನಮ್ಮ ಮುಂದೆ ಒಡ್ಡುತ್ತದೆ.

ಗಂಡು ಹೆಣ್ಣುಗಳ 'ಖಾಸಗಿ ಬದುಕು' ಅನ್ನುವುದು ಇವತ್ತು ಹೇಗೆ ರೂಪುಗೊಳ್ಳುತ್ತದೆ, ಇಂತಹದೊಂದು ಬದುಕಿಗಾಗಿ ಹಪಹಪಿಸುವ ನಾವು ಅದನ್ನು ಹೇಗೆ ಕಾಪಿಟ್ಟು ಕೊಳ್ಳುತ್ತೇವೆ ಎನ್ನುವುದನ್ನು ವ್ಯಂಗ್ಯ ಮಾಡುವ ನಿದರ್ಶನಗಳು ಇಲ್ಲಿವೆ. ಸಂಬಂಧದ ತಾತ್ಪರ್ಯವೇ ನಮಗೆ ಅರ್ಥವಾಗದ ಸನ್ನಿವೇಶದಲ್ಲಿ ಮದುವೆ, ಮಕ್ಕಳು ಹಾಗೂ ಕುಟುಂಬದಂತಹ 'ಸುಖಿ' ನೆಲೆಗಳನ್ನು ಬಯಸುತ್ತೇವೆ. ಈ ಸುಖಿ ನೆಲೆಗಳೇ ಹೇಗೆ ನಮ್ಮ ಬದುಕಿನ ಲಯಗಳು ತಪ್ಪುವುದಕ್ಕೆ ಕಾರಣವಾಗುತ್ತವೆ ಎಂಬುದನ್ನು ಇಲ್ಲಿ ನೋಡಬಹುದು. ಗಂಡ-ಹೆಂಡತಿ, ಅತ್ತೆ-ಮಾವ, ಮಗಳು-ಮಗ-ಮೊಮ್ಮಕ್ಕಳು ಮೊದಲಾದ ಸಂಬಂಧಗಳು ಕೇವಲ ಅಭಿನಯಿಸುವ ಪಾತ್ರಗಳಾಗಿ ಮಾತ್ರ ಉಳಿದಿವೆ ಅನ್ನುವುದಕ್ಕೆ ಸಾಕ್ಷಿಯಾಗಿವೆ. ಧರ್ಮ, ಲೈಂಗಿಕತೆ ಮತ್ತು ಜಾತಿ ಈ ಮೂರು ಸಂಕಥನಗಳು ಮನುಷ್ಯರ ಬದುಕನ್ನು ಹೇಗೆ ನಿಶ್ಚಯಿಸುತ್ತವೆ, ನಿಭಾಯಿಸುತ್ತವೆ ಎಂಬುದಕ್ಕೆ ಈ ಪ್ರಸ್ತುತ ಕಾದಂಬರಿ ಒಂದು ಕನ್ನಡಿಯಾಗಿ ನಮಗೆ ದೊರೆತಿದೆ. ಹೌದು ಕಥೆಯ ಒಳಗಿನ ಲೋಕ ಒಂದು ಬದುಕಿನ ಕ್ರಿಯೆಯಾಗಿ ಕಾಣುತ್ತದೆ. ಆದರೆ ಕಥೆಯ ಹೊರಗಿನ ಲೋಕದಲ್ಲಿ ಇದನ್ನು ಕಥೆಯ ಅನುಭವವನ್ನಾಗಿ ಮಾತ್ರ ಕಾಣಲಾಗುತ್ತದೆ. ಅಂದರೆ ಕಾದಂಬರಿಯ ಅನುಭವಕ್ಕೂ ಮತ್ತು ನಮ್ಮ ಬದುಕಿನ ಅನುಭವಕ್ಕೂ ಹೋಲಿಕೆ ಎನ್ನುವುದು ಕೇವಲ ನೆನಪು ಮಾತ್ರ. ಆದಾಗ್ಯೂ ಕಥನಗೊಳ್ಳುವ ಕ್ರಮ (ಗತದ ಅನುಭವ), ಅದೊಂದು ಒಳ್ಳೆಯ ಕಾಲ ಎನ್ನುವ ವಿನೀತಭಾವವು ಪಾತ್ರಗಳ ಮನಸ್ಸಲ್ಲಿ ಮಿಂಚಿ ಹೋಗುತ್ತದೆ. ಇಂತಹ ವೈಚಿತ್ರ್ಯಗಳನ್ನು ನಾವು ದಿನವೂ ನಮ್ಮ ಬದುಕಿನಲ್ಲಿ ಯಥೇಚ್ಛವಾಗಿ ಕಾಣುತ್ತೇವೆ ಎಂಬುದಕ್ಕೆ ಇದೊಂದು ಮಹತ್ವದ ನಿದರ್ಶನವಾಗಿದೆ.

ಹೆಣ್ಣು ಮಕ್ಕಳ ಬಗೆಗಿನ ತಂದೆತಾಯಿಗಳ ಚಡಪಡಿಕೆಯಿಂದ ಶುರುವಾಗುವ ಈ ಕಥನವು ವಾಸ್ತವದಲ್ಲಿ 'ಹೆಣ್ಣು ಲೋಕ'ದ ನಿಗೂಢತೆಯನ್ನು ಅರಿಯಲು ಪ್ರಯತ್ನಿಸುತ್ತದೆ.

ಹಾಗಂತ ಇದನ್ನು ಕೇವಲ ಸ್ತ್ರೀವಾದಿ ನೆಲೆಯ ಕಥನವೆಂದು ತೀರ್ಮಾನಿಸಲಾರೆ. ನಮ್ಮ ದೈನಂದಿನ ಬದುಕಿನಲ್ಲಿ ಘಟಿಸುವ ಪ್ರತಿಯೊಂದು ಘಟನೆಯೂ, ಒಂದಿಲ್ಲೊಂದು ರೀತಿಯಲ್ಲಿ ಹೆಣ್ಣುಲೋಕದ ಕಥನಗಳಿಗೆ ಸಂಬಂಧಿಸಿರುತ್ತದೆ. ಆದರೆ ಇಲ್ಲಿ ಹೆಣ್ಣುಲೋಕದ ನಿಗೂಢತೆಯನ್ನು ಖಚಿತವಾಗಿ ಅರಿಯಲು ಸಾಧ್ಯವಿಲ್ಲ. ಅಂತಹ ಯಾವುದೇ ನಿಚ್ಚಳವಾದ ಚಿತ್ರಣವೂ ನಮಗೆ ದೊರೆಯುವುದಿಲ್ಲ. ಸಾಮಾನ್ಯವಾಗಿ ನಾವು ಹೆಣ್ಣು-ಗಂಡಿನ ನಡುವಣ ಸಂಬಂಧದ ಸ್ವರೂಪ ಎಂತಹದು? ಅಂದರೆ ಇಂಟರ್ಪರ್ಸನಲ್ ರಿಲೇಶನ್ನಿನ ಚಹರೆಗಳನ್ನು ನಾವು ಇಂದಿಗೂ ಖಚಿತಪಡಿಸಿಕೊಂಡಿಲ್ಲ. ಆದರೆ ಇಂತಹ ಸಂಬಂಧ ರೂಪುಗೊಳ್ಳುವ ಬಗೆಗಳು ಎಂತಹವು ಎನ್ನುವುದನ್ನು ಈ ಕಾದಂಬರಿ ಅನಾವರಣಗೊಳಿಸುತ್ತದೆ. ಅತ್ಯಂತ ಸಣ್ಣ ಸಣ್ಣ ವಿವರಗಳು, ಅವುಗಳ ಮೂಲಕ ಒಂದು ಅನುಭವ ಕಥನವನ್ನು ನಿರೂಪಿಸುವ ವಿಧಾನವೇ ವಿಶಿಷ್ಟವಾಗಿದೆ. ಇದು ಕೇವಲ ಕಥೆಯನ್ನು ಹೇಳುವ ಮಾದರಿಯಲ್ಲ. ಬದಲಾಗಿ ಕಥೆಯನ್ನು ಕಟ್ಟುವ ಬಗೆಯಾಗಿದೆ. ಕಾಲ ದೇಶಕ್ಕೆ ಅನುಗುಣವಾಗಿ ಈ ಕಥನದ ವಿವರಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಸಂಬಂಧದ ತೀವ್ರತೆಯ ರೂಪಕಗಳಾಗಿ ಈ ವಿವರಗಳು ಕೆಲಸ ಮಾಡುತ್ತವೆ ಹಾಗೂ ಪಾತ್ರದ ಧೋರಣೆಗಳನ್ನು ಕಂಡರಿಸುವ ಬಗೆಗಳಾಗಿಯೂ ಈ ವಿವರಗಳು ನೆಲೆಗೊಂಡಿರುತ್ತವೆ.

ಈಗಾಗಲೇ ಚರ್ಚಿಸಿದಂತೆ, ಗೌರಿಯರು ಎನ್ನುವ ಈ ಕಾದಂಬರಿಯ ಹೆಸರೇ ಹಲವು ಬಗೆಯ ವ್ಯಾಖ್ಯಾನಗಳಿಗೆ ಸುಳಿವು ನೀಡುತ್ತದೆ. ಇದು ಆಪ್ತಬಂಧನದ ರೂಪಕವಾಗಿ, ಸ್ತ್ರೀ ಬದುಕಿನ ವೈಚಿತ್ರ್ಯದ ಸೂಚಕವಾಗಿ ಹಾಗೂ ಒಂದು ರೀತಿಯ ರೆಟಾರಿಕ್ ಧ್ವನಿಯನ್ನೂ ಇದು ಪ್ರಕಟಿಸುತ್ತದೆ. ಒಟ್ಟಾರೆ ಈ ಕಥನದ ಹರವು ಮತ್ತು ಆಳವನ್ನು ವಿಸ್ತರಿಸುವಲ್ಲಿ ಮಹತ್ವದ ಪಾತ್ರಗಳಾಗಿ ಈ ಗೌರಿಯರು ಕಂಡುಬಂದಿದ್ದಾರೆ. ಕೌಟುಂಬಿಕ ಸಂಬಂಧಗಳು ಒಂದು ಕಾಲದಲ್ಲಿ, ತಿಳಿಕೊಳದಂತೆ ಕಾಣುತ್ತಿದ್ದರೂ, ಆಳದಲ್ಲಿರುವ ಕೆಸರನ್ನು ಮಾತ್ರ ಕಡೆಗಣಿಸುವಂತಿಲ್ಲ ಎನ್ನುವ ಎಚ್ಚರ ಮತ್ತು ವಿವೇಕವನ್ನೂ ಈ ಕಥನ ನಮ್ಮಲ್ಲಿ ಮೂಡಿಸುತ್ತದೆ. ಅದೇ ಸಮಯಕ್ಕೆ, ಈ ಹೊತ್ತಿನ ನಮ್ಮ ಕೌಟುಂಬಿಕ ಸಂಬಂಧಗಳು ಕೆಸರು ಮತ್ತು ನೀರಿನ ಕಲಬೆರಕೆಯ ಸ್ವರೂಪದಲ್ಲಿಯೇ ಇರುತ್ತವೆ ಎನ್ನುವ ಕಟು ವಾಸ್ತವವನ್ನು ಈ ಕಾದಂಬರಿ ನಮಗೆ ಮನವರಿಕೆ ಮಾಡುತ್ತದೆ. ಅಂದರೇನಾಯಿತು, ಹಿಂಸೆಯ ಸ್ವರೂಪ ಮತ್ತು ವಿಧಾನಗಳು ಮಾತ್ರ ಬದಲಾಗಿವೆ ಹೊರತು ಹೆಣ್ಣು ತಾನು ಅನುಭವಿಸುತ್ತಿರುವ ಹಿಂಸೆಯಿಂದ ಇವತ್ತಿಗೂ ವಿಮೋಚನೆ ಸಾಧ್ಯವಾಗಿಲ್ಲ ಎಂಬ ದಿಟವು ಈ ಕಾದಂಬರಿಯ ಉದ್ದಕ್ಕೂ ಅನುರಣಿಸುತ್ತದೆ. ಅಮರೇಶ ಅವರ ಕಥನ ನಿರೂಪಣೆ ಅತ್ಯಂತ ಸೂಕ್ಷ್ಮವೂ ಗಹನವೂ ಆಗಿರುತ್ತದೆ. ಆದರೆ ಇವರ ಈ ಕಥನಗಳ ನಿರೂಪಣೆಗೆ ಬಳಸಿಕೊಳ್ಳುವ ಭಾಷೆಗೆ, ವಾಸ್ತವದಲ್ಲಿ ಇಂತಹ ಸೂಕ್ಷ್ಮತೆ ಮತ್ತು ಗಹನತೆಗೂ ಯಾವುದೇ ಸಂಬಂಧವಿಲ್ಲ ಎನ್ನುವಂತೆ

ತೋರುತ್ತದೆ. ಏಕೆಂದರೆ ಈ ಆಯಾಮವು ಕೇವಲ ಧ್ವನಿಗೆ ಸಂಬಂಧಿಸಿದ ಸಂಗತಿಯಾಗಿದೆ.

ಯಾವುದೇ ಸಾಹಿತ್ಯ ಪಠ್ಯದ ವಿಶ್ಲೇಷಣೆ ಎನ್ನುವುದು, ಕಲೆಯ ವಿವರಗಳನ್ನು ಬಣ್ಣಿಸುವುದು ಅಥವಾ ನಿರೂಪಿಸುವುದಲ್ಲ. ಬದಲಾಗಿ ಕಥನ ಕ್ರಿಯೆ ಮತ್ತು ಅದಕ್ಕೆ ಸಂಬಂಧಿಸಿದ ನಿಲುವುಗಳು ಹೇಗೆ ಒಂದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶವನ್ನು ಮರುವಿನ್ಯಾಸಗೊಳಿಸುವಲ್ಲಿ ಒತ್ತಾಸೆಯಾಗುತ್ತವೆ ಎನ್ನುವುದು ಮುಖ್ಯ. ಈ ಬಗೆಯ ಚರ್ಚೆಗಳನ್ನು ಆಧರಿಸಿಯೇ ಪ್ರಸ್ತುತ ಟಿಪ್ಪಣಿಯ ಚರ್ಚೆಗಳನ್ನು ಇಲ್ಲಿ ಮಂಡಿಸಲಾಗಿದೆ. ಇಂತಹ ದೃಷ್ಟಿಕೋನಗಳ ಮೂಲಕ ಇವತ್ತು ಸಾಹಿತ್ಯ ಪಠ್ಯಗಳನ್ನು ವಿಶ್ಲೇಷಿಸುವುದು ಅತ್ಯಂತ ಮುಖ್ಯವಾಗಿ ನನಗೆ ಕಾಣುತ್ತದೆ.

◆◆

೪

ಗೌರಿಯರು : ಕುಟುಂಬ-ದಾಂಪತ್ಯ ಸಂಕಥನ

ರಾಮಲಿಂಗಪ್ಪ ಟಿ. ಬೇಗೂರು

೧. ಕೃಷಿ ಮತ್ತು ವ್ಯಾಪಾರ, ೨. ಸರ್ಕಾರಿ ಉದ್ಯೋಗ ಮತ್ತು ಸಾಂಪ್ರದಾಯಿಕ ಕೃಷಿ ಬದುಕು, ೩. ಸಾಂಪ್ರದಾಯಿಕ ಕೌಟುಂಬಿಕತೆ ಮತ್ತು ಬದಲುಗೊಳ್ಳುವ ದಾಂಪತ್ಯ ಸಾಂಗತ್ಯಗಳು ಹೀಗೆ ಅಮರೇಶ ನುಗಡೋಣಿ ಅವರು ಬರೆದಿರುವ ಗೌರಿಯರು ಕಾದಂಬರಿಯಲ್ಲಿ ಈ ಮೂರು ಬಗೆಯ ಬೈನರಿಗಳ ತೌಲನಿಕ ಸಂಕಥನ ಇದೆ. ಆದಾಗ್ಯೂ ಇಲ್ಲಿ ಮೊದಲ ಎರಡಕ್ಕಿಂತ ಮೂರನೆಯದಕ್ಕೆ ಹೆಚ್ಚಿನ ಒತ್ತು ಇದೆ. ಇಲ್ಲಿ ದಾಂಪತ್ಯದಲ್ಲಿನ ಗಂಡು ಹೆಣ್ಣುಗಳ ಪ್ರಧಾನಾಧೀನತೆಯ ನೆಲೆಗಳ ಸಂಘರ್ಷ; ಕುಟುಂಬ, ದಾಂಪತ್ಯಗಳ ವಿಘಟನೆ, ಸಂಘಟನೆ ಮತ್ತು ಮನುಷ್ಯ ಸಂಬಂಧಗಳ ಕಥನಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಮಿಕ್ಕೆಲ್ಲ ನಿರೂಪಣೆಗಳೂ ಆನುಷಂಗಿಕ ಆಗಿಬರುತ್ತವೆ. ಹಾಗಾಗಿಯೆ ಈ ಕಾದಂಬರಿ ಒಂದು ಕುಟುಂಬ- ದಾಂಪತ್ಯ ಸಂಕಥನ ಎನ್ನಬಹುದು.

ಇಲ್ಲಿ ಇರುವುದು ಮೂರು ಕುಟುಂಬಗಳ ಕಥನ. ಇವುಗಳಲ್ಲಿ ದಾಕ್ಷಾಯಿಣಿ ಶಂಭುಲಿಂಗರ ಕುಟುಂಬ, ಶಿವಲಿಂಗಪ್ಪ ಚೆನ್ನಮ್ಮರ ಕುಟುಂಬದ ಕತೆಗಳು ಪ್ರಾಸಂಗಿಕ ವಾಗಿ ಬರುತ್ತವಾದರೂ ಸದಾಶಿವಪ್ಪ ಪಾರ್ವತಿ ಕುಟುಂಬದ ಕತೆಯೆ ಪ್ರಧಾನವಾಗಿ ಕಥಿತ ಆಗಿದೆ. ಇವಲ್ಲದೆ ಇಲ್ಲಿ ಮಲ್ಲಪ್ಪ ಎಲ್ಲಮ್ಮರ ದಾಂಪತ್ಯ, ಶಿವಲೀಲಾ ಚಂದ್ರಶೇಖರರ ದಾಂಪತ್ಯ, ಅಕ್ಕಮ್ಮ ರಾಮಚಂದ್ರರ, ಶ್ರೀದೇವಿ ಅರುಣರ, ಕಲ್ಯಾಣಿ ಶಂಕರಲಿಂಗರ, ಶರಣ ಚಂದ್ರಕಲಾರ ದಾಂಪತ್ಯ ಹೀಗೆ ಹಲವು ದಾಂಪತ್ಯಗಳ ಕಥನಗಳು ಇವೆ. ಸರ್ಕಾರಿ ನೌಕರಿಯಲ್ಲಿ ಇರುವ ತನ್ನ ಮೂವರು ಹೆಣ್ಣುಮಕ್ಕಳನ್ನು ನೋಪಿ ಪೂಜೆಗೆ ಒಟ್ಟಿಗೆ ಸೇರಿಸಲು ಪಾರ್ವತಿ ಇಲ್ಲಿ ಮೂರುವರ್ಷ ಶ್ರಮಪಟ್ಟಿದ್ದಾಳೆ. ಹಾಗೆ ಹೆಣ್ಣುಮಕ್ಕಳು ಸಂಪ್ರದಾಯಗಳಿಂದ ದೂರ ಆದದ್ದು ಮತ್ತು ಕಳ್ಳುಬಳ್ಳಿಯನ್ನು ಕಡಿದುಕೊಂಡದ್ದೆ ಅವರ ದಾಂಪತ್ಯದ ವಿಘಟನೆಗೆ ಕಾರಣ ಎಂಬಂತೆ ಕಥನ ಪರೋಕ್ಷವಾಗಿ ಸೂಚಿಸುತ್ತದೆ. ಈ ಮೂರು ದಾಂಪತ್ಯಗಳ ವಿಘಟನೆಯನ್ನು ಹೇಳುವ ಉದ್ದೇಶದಿಂದಲೇ ಕಥನವನ್ನು ಹೆಣೆದಿರುವಂತೆ ಒಟ್ಟಾರೆ ಕಾದಂಬರಿ ಇದೆ.

ತನ್ನ ಚಿಕ್ಕಮ್ಮನ ಎದುರು ತನ್ನ ಕತೆಯನ್ನು ಬಿಚ್ಚಿಕೊಳ್ಳುವ ತಂತ್ರದಲ್ಲಿ ಅಕ್ಕಮ್ಮನ ದಾಂಪತ್ಯ ವಿಘಟನೆಯ ಕಥನ ನಿರೂಪಣೆ ಆಗಿದೆ. "ಎಷ್ಟೆ ಫ್ಯಾಶನ್ ಮಾಡ್ರಿ. ತಾಳಿಚೈನು ಹಾಕ್ಕೊಳ್ಳದನ್ನ ಮರೀಬಾರದಮ್ಮ" ಎಂದು ಚಿಕ್ಕಮ್ಮ ದಾಕ್ಷಾಯಿಣಿ ಹೇಳಿದಾಗ ಅಕ್ಕಮ್ಮ "ನಾನು ಗಂಡನಿಗೆ ಡೈವೋರ್ಸ್ ಕೊಟ್ಟಿದೀನಿ. ನಾಲ್ಕು ವರ್ಷಗಳಾದುವು". ಎನ್ನುತ್ತಾಳೆ. ದಾಕ್ಷಾಯಿಣಿಗೆ ಶಾಕ್ ಆಗುತ್ತದೆ. "ಹಾಗಾದರೆ ನಿನ್ನ ಮಗ ಶಿವದರ್ಶನನಿಗೆ ಒಂದೂವರೆ ವರ್ಷ ಮಾತ್ರವಲ್ಲ." ಎಂದರೆ ಅದಕ್ಕೆ "ಇವನು ನನ್ನ ಮಗ. ಮದರ್ ಬೇಬಿ. ಅವನಿಗೆ ಅಪ್ಪ ಇಲ್ಲ. ಇದ್ದರೂ ನೇಪತ್ಯದಲ್ಲಿ" ಎನ್ನುತ್ತಾಳೆ. (ಪು. ೮೨) ಹಳೆಯ ಸಂಪ್ರದಾಯಗಳನ್ನು ಮುರಿಯುವ ಧೈರ್ಯಸ್ಥೆಯಂತೆ ಇಲ್ಲಿ ಅಕ್ಕಮ್ಮ ಕಾಣುತ್ತಾಳೆ. ಆದರೂ ಈಕೆಗೆ ಒಳಗೆ ತನ್ನ ಮಗನನ್ನು ತನ್ನ ತಂದೆ, ತಾಯಿ ಒಪ್ಪಿಕೊಳ್ಳಲಿ ಎಂಬ ಆಸೆಯೂ ಇದೆ. ಮದರ್ ಬೇಬಿಯನ್ನು ಹೊಂದುವ ಸಿಂಗಲ್ ಪೇರೆಂಟಿಂಗ್ ಮನಸ್ಥಿತಿಯನ್ನು ಚಿತ್ರಿಸುವುದು ಮತ್ತು ಅದಕ್ಕೆ ನಮ್ಮ ಸಮಾಜ ತನ್ನ ಸಮ್ಮತಿ ಮುದ್ರೆಯನ್ನು ಒತ್ತಲಿದೆಯೇ ಎಂಬ ಪ್ರಶ್ನೆ ಎತ್ತುವುದು ಇಲ್ಲಿನ ನಿರೂಪಣೆಯ ಉದ್ದೇಶವಾಗಿದೆ.

ಮೊದಲ ಮಗಳು ಶಿವಲೀಲಾ ಕಥೆ ಆಕೆಯೆ ಸ್ವತಃ ಅಪ್ಪನ ಎದುರು ತನ್ನ ಕತೆಯನ್ನು ಬಿಚ್ಚಿಕೊಳ್ಳುವ ತಂತ್ರದಲ್ಲಿ ನಿರೂಪಿತವಾಗಿದೆ. 'ಅಪ್ಪ ಅವನಿಂದ ನಾನು ಡೈವೋರ್ಸ್ ಪಡೆದುಕೊಂಡೇ ಐದು ವರ್ಷಗಳಾದುವು. ನಿಮ್ಗೆ ಹೇಳಿಲ್ಲ. ಅಮ್ಮ ಸೂಕ್ಷ್ಮ ಮನಸ್ಸಿರುವಾಕೆ. ಅದಕ್ಕೆ ಅದರ ಸುಳಿವು ನೀಡಲಿಲ್ಲ. ಅಪ್ಪ ದೇವರು ನನ್ನನ್ನು ಸರಿಯಾದ ವೇಳೆಗೆ ಟ್ರಾನ್ಸ್ಫರ್ ಮಾಡಿದ. ಆಗ ನನಗೆ ಮೂರು ತಿಂಗಳಾಗಿದ್ದುವು'. ಎಂದು ತನ್ನ ಮಗಳು ಹೇಳಿದಾಗ ಸದಾಶಿವಪ್ಪನ ಕಣ್ಣಲ್ಲಿ ನೀರಾಡುತ್ತವೆ. (ಪು. ೬೨)

ನೋಪಿಪೂಜೆಗೆ ಬರುವ ಹೊತ್ತಿಗೆ ಅವಳ ಮಗ ಶಿವಸಮಯನಿಗೆ ಆರು ವರ್ಷ ವಯಸ್ಸಾಗಿದೆ. ಅವನನ್ನು ಆಕೆ ನೋಪಿ ಪೂಜೆಗೆ ಕರೆತಂದಿರುವುದಿಲ್ಲ. ಅವನನ್ನು ಅದುವರೆಗೆ ನೋಡಲು ಸದಾಶಿವಪ್ಪ, ಪಾರ್ವತಿ ಕೂಡ ಹೋಗಿರುವುದಿಲ್ಲ. ಶಿವಲೀಲಾ ಡೈವೋರ್ಸ್ ತೆಗೆದುಕೊಂಡು ಐದು ವರ್ಷ ಆಗಿವೆ. ಈ ಸುದ್ದಿಕೂಡ ತಂದೆ ತಾಯಿಗೆ ಗೊತ್ತಿಲ್ಲ. ಈಕೆಯ ಅತ್ತೆ ಮಾವಂದಿರಿಗೂ ಈ ಸುದ್ದಿ ಗೊತ್ತಿಲ್ಲ. ಅಂದರೆ ಇವರ ನಡುವೆ ಅದೆಂತಹ ಭಾವನಾತ್ಮಕ ಸಂಬಂಧ ಇದೆ! ಸಂಬಂಧಗಳ ಬಾವುಣಿಕೆಯ ಅಭಾವ ಮತ್ತು ಸಾಂಗತ್ಯದ ಅಭಾವವೇ ನಮ್ಮನ್ನು ವಿಘಟನೆಗೆ ಒಯ್ಯುತ್ತದೆ ಎಂಬ ಧ್ವನಿ ಕಾದಂಬರಿ ಯುದ್ದಕ್ಕೂ ಇದೆ.

ಶಿವಲೀಲಾ ಮಾವ ರಾಮನಗೌಡ ಮತ್ತು ತಂದೆ ಸದಾಶಿವಪ್ಪ ಬಹಳ ಆತ್ಮೀಯರು ಎಂಬಂತೆ ಕಾದಂಬರಿಯಲ್ಲಿ ಚಿತ್ರಣವಿದೆ. ಒಮ್ಮೆ ಆತ ಸೇವೆಯಿಂದ ರಿಟೈರ್ ಆದಾಗ ಸದಾಶಿವಪ್ಪನ ಮನೆಗೆ ಬಂದು ನಾಲ್ಕುದಿನ ಇದ್ದೂ ಹೋಗುತ್ತಾನೆ. ಆಗ ಆತ ನನ್ನ ಇಡೀ ಸರ್ವೀಸಿನಲ್ಲಿ ನಿರುಮ್ಮಳವಾಗಿ ಕಳೆದದ್ದು ಈ ನಾಲ್ಕೈದು ದಿನ ಮಾತ್ರ ಅಂತಲೂ ಹೇಳುತ್ತಾನೆ. ಇಷ್ಟೆಲ್ಲ ಹೊಕ್ಕು ಬಳಕೆ ಇರುವ ಬೀಗರು ಮಗಳ ಮದುವೆ ಒಡೆದು ಹೋಗುವಾಗ ಮಧ್ಯಪ್ರವೇಶ ಮಾಡುವುದಿಲ್ಲ. ಶಿವಲೀಲಾ ಸಂಸಾರದ ಒಡಕು ಇವರಿಗೆ

ತಿಳಿದೇ ಇಲ್ಲವೆಂತಲ್ಲ. ಒಮ್ಮೆ ರಾಮನಗೌಡ ಮತ್ತು ಆತನ ಹೆಂಡತಿ ಶಿವಲೀಲಾ ಮನೆಗೂ ಬಂದು ಎರಡು ದಿನ ಇದ್ದೂ ಹೋಗುತ್ತಾರೆ. ಆಗ ಶಿವಲೀಲಾಳೆ ತನ್ನ ಗಂಡನ ಹೊಣೆಗೇಡಿತನದ ಬಗ್ಗೆ ಹೇಳಿಕೊಳ್ಳುತ್ತಾಳೆ. ಆದರೂ ಅವಳ ದಾಂಪತ್ಯ ಹಿರಿಯರ ಯಾವುದೇ ಬಗೆಯ ಮಧ್ಯಪ್ರವೇಶ ಇಲ್ಲದೆ ಮುರಿದು ಹೋಗುತ್ತದೆ. ಹೀಗೆ ಎರಡನೇ ಪೀಳಿಗೆಯ ದಾಂಪತ್ಯದ ವಿಘಟನೆಗೆ ಮಹಿಳೆಯ ಆರ್ಥಿಕ ಸ್ವಾತಂತ್ರ್ಯ ಮಾತ್ರ ಕಾರಣವಲ್ಲ; ಪೀಳಿಗೆಗಳ ನಡುವಣ ಬಂಧುತ್ವದ ಸರಿಯಾದ ನಿಭಾವಣೆ ಇಲ್ಲದುದೂ ಕಾರಣ ಎಂದು ಕಾದಂಬರಿ ಬಿಂಬಿಸುತ್ತದೆ.

ಮೂರನೇ ಮಗಳು ಶ್ರೀದೇವಿಯ ಕಥನವು ಆಕೆ ತನ್ನ ಮನಸ್ಸಿನಲ್ಲೇ ತನ್ನ ಕತೆಯನ್ನು ಮೆಲುಕು ಹಾಕುವ ಆತ್ಮಾವಲೋಕನ ತಂತ್ರದ ಮೂಲಕ ನಿರೂಪಿತವಾಗಿದೆ. ಈಕೆ ತನ್ನ ತಂದೆ–ತಾಯಿಂದ ದೂರಾಗಿ ಹೈಸ್ಕೂಲು ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲು, ಕಾಲೇಜು ಓದನ್ನು ಮೈಸೂರಿನಲ್ಲು ಮಾಡಿದವಳು; ಹೈಸ್ಕೂಲಿನವರೆಗೆ ಊರಲ್ಲೇ ಇದ್ದರೂ, ಆಗಾಗ ರಜೆಯಲ್ಲಿ ಊರಿಗೆ ಬಂದು ಮೂರ್ನಾಲ್ಕು ದಿನ ಇದ್ದು ಹೋದರೂ ಆಕೆಗೆ ಮೂಲಂಗಿ ನೆಲದಲ್ಲಿ ಬೆಳೆಯುತ್ತದೆ. ಕೆಲ ತರಕಾರಿ ಬಳ್ಳಿಯಲ್ಲಿ ಬಿಡುತ್ತವೆ ಅನ್ನುವುದೇ ಗೊತ್ತಿಲ್ಲ. ಈಕೆ ತನ್ನ ಕಲೀಗ್, ಗೆಳೆಯ ಅರುಣನ ಜೊತೆ ಒಂದು ವರ್ಷಕಾಲ ಲೀವ್ ಇನ್ ರಿಲೇಶನ್ನಲ್ಲಿ ಇದ್ದು ಆನಂತರ ಕಲೀಗ್ ದೀಪಾ ಪಾಟೀಲಳ ಒತ್ತಾಯಕ್ಕೆ ತನ್ನ ಮದುವೆಯನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾಳೆ. ಅದಕ್ಕು ಎಷ್ಟೋ ಮೊದಲೇ ಇವಳ ಅವನ ಲೈಂಗಿಕ ಸಂಬಂಧ ನಡೆದಿರುತ್ತದೆ (ಪು. ೧೧೭).

ನೋಂದಾಯಿತ ಮದುವೆ ಆಗಿದ್ದರೂ ಜೊತೆಯಲ್ಲಿ ಬಾಳದೆ ಅವನ ಪಾಡಿಗೆ ಅವನೂ ಇವಳ ಪಾಡಿಗೆ ಇವಳೂ ಇರಬೇಕೆಂಬ ಷರತ್ತಿನೊಂದಿಗೆ; ಇವಳು ಕರೆದಾಗ ಅವನು ಲೈಂಗಿಕಕೂಟಕ್ಕೆ ಬರಬೇಕು, ಹೋಗೆಂದಾಗ ಮಳೆಯಿರಲಿ, ಬಿಸಿಲಿರಲಿ, ಹಗಲಾಗಲಿ, ಇರುಳಾಗಲಿ ಎದ್ದುಹೋಗಬೇಕು ಎಂಬ ಆಚಾರದೊಂದಿಗೆ ಈಕೆ ಅವನೊಂದಿಗೆ ಲೈಂಗಿಕ ಸಂಗಾತ ಜೀವನ ನಡೆಸುತ್ತಿರುತ್ತಾಳೆ. ಹೀಗಾಗಿ ಇವರದು ಬೇರೆಬೇರೆ ಸೂರಿನಡಿ ಬದುಕುತ್ತ ಬೇಕಾದಾಗ ಯಾದೃಚ್ಛಿಕ ಲೈಂಗಿಕ ಕೂಟಕ್ಕಾಗಿ ಮಾಡಿಕೊಂಡ ನೋಂದಾಯಿತ ಮದುವೆ. (ಪು. ೧೧೭) ಇದು ನೋಂದಾಯಿತ ಮದುವೆ ಎನ್ನುವುದಕ್ಕಿಂತ ಸಾಮಾಜಿಕ ಮಾನ್ಯತೆ ಬಯಸುವ ಮತ್ತು ವೈಯಕ್ತಿಕ ಹೊಣೆ ಇಲ್ಲದ ಒಪ್ಪಂದದ ಮದುವೆ ನೋಂದಣಿ ಎನ್ನಬಹುದು. ನಮ್ಮ ಯಾದೃಚ್ಛಿಕ ಲೈಂಗಿಕ ಸಂಬಂಧಕ್ಕೆ ಸಮಾಜದ ಎದುರು ಒಂದು ಒಪ್ಪಿಗೆಯನ್ನು ಉತ್ಪಾದಿಸಿ ಕೊಳ್ಳುವುದಕ್ಕೆಂದೇ ಇಲ್ಲಿ ನೋಂದಣಿ ಹಾದಿ ಹಿಡಿಯಲಾಗಿದ್ದರೂ ಅದಕ್ಕೆ ಅಂತಹ ಮಾನ್ಯತೆ ಇಲ್ಲ ಎಂಬುದು ಇಲ್ಲಿ ನಿರೂಪಣೆಯಲ್ಲಿ ಎದ್ದು ಕಾಣುತ್ತದೆ.

ಈಕೆ ಗೌರಿ ನೋಪಿಗೆ ಊರಿಗೆ ಬರುವಹೊತ್ತಿಗೆ ಇವರ ಸಂಬಂಧಕ್ಕೆ ನಾಲ್ಕು ವರ್ಷ ಆಗಿ ಅದರಲ್ಲಿ ಬಿರುಕೂ ಮೂಡಿ ಅರುಣನಾಗಲೇ ಡೈವೋರ್ಸ್ ಮಟ್ಟಕ್ಕೆ

ಹೋಗಿದ್ದಾನೆ. ಸಿಟಿ ಕಾಲೇಜಿನಿಂದ ತಾಲ್ಲೂಕು ಕಾಲೇಜಿಗೆ ಅದಕ್ಕಾಗಿ ವರ್ಗ ಕೂಡ ಮಾಡಿಸಿಕೊಂಡಿದ್ದಾನೆ. ಸಂಬಂಧ ಬ್ರೇಕ್‌ಅಪ್ ಆಗಿದೆ. (೧೧೬) ಇವಳಿಗೆ ಅರುಣನ ಜೊತೆ ಬ್ರೇಕ್ ಆಪ್ ಆಗಿರುವ ಸಂಬಂಧ ಪುನಃ ಆರಂಭಿಸಬೇಕು ಎಂಬ ಹಂಬಲ ವೇನೋ ಇದೆ. ಆದರೆ ಸಾಂಪ್ರದಾಯಿಕ ದಾಂಪತ್ಯಕ್ಕೆ ಸಿದ್ಧವಿರುವ ಅವನಿಗೆ ಇವಳ ಲೈಂಗಿಕ ಸಾಂಗತ್ಯ ಮಾತ್ರವುಳ್ಳ ಒಪ್ಪಂದದ ನೋಂದಾಯಿತ ದಾಂಪತ್ಯಕ್ಕೆ ಒಪ್ಪಿಗೆಯಿಲ್ಲ. (ಪು. ೧೨೧). ಇದನ್ನು ಸಾಂಪ್ರದಾಯಿಕ ದಾಂಪತ್ಯ ಮತ್ತು ಅಪೇಕ್ಷಿತ ದಾಂಪತ್ಯಗಳ ಸಂಘರ್ಷಎಂದೂ ಕಾಣಬಹುದು.

ಶ್ರೀದೇವಿಯ ವ್ಯಕ್ತಿತ್ವ ಚಿತ್ರಣದಲ್ಲಿ ಓದುಗರಿಗೆ ಒಂದು ಬಗೆಯ ಅಪೂರ್ಣತೆ ಕಾಡುತ್ತದೆ. ಆಕೆಯ ರೂಪಗೊಂಡ ವ್ಯಕ್ತಿತ್ವದ ನಿರೂಪಣೆಗೆ ಇಲ್ಲಿ ಹೆಚ್ಚು ಮಹತ್ವ ನೀಡಲಾಗಿದೆ. ಆದರೆ ಅದರ ವಿಕಸನದ ಕಥನಕ್ಕೆ ಸಾಕಷ್ಟು ಅವಕಾಶ ಕಾದಂಬರಿಯಲ್ಲಿ ದೊರಕಿಲ್ಲ. ಇಲ್ಲಿ ಕತೆ ಆಲದ ಮರದ ಹಾಗೆ ಹರಡಿಕೊಳ್ಳದೆ ಇದು ಹೀಗೇ ಮುಗಿಯ ಬೇಕು ಎಂಬಂತೆ ನೀಲಗಿರಿ ಮರದ ರೀತಿ ನ್ಯಾರೋ ಆಗಿದೆ.

ಇಲ್ಲಿರುವ ಶಿವಲೀಲಾ ಮತ್ತು ಅಕ್ಕಮ್ಮರ ದಾಂಪತ್ಯ ಮುರಿಯಲು ಅವರ ಗಂಡಂದಿರ ಅನಾಚಾರ ಕಾರಣ ಎಂದಿದ್ದರೆ ಶ್ರೀದೇವಿ ಸಂಬಂಧ ಮುರಿಯಲು ಅಕೆಯ ಸ್ವೇಚ್ಛೆ ಕಾರಣ ಎಂಬಂತೆ ಕಾದಂಬರಿ ಬಿಂಬಿಸುತ್ತದೆ. ಆದರೆ ಅಲ್ಲೊಂದು ಮಹಿಳಾ ಅಪೇಕ್ಷಿತ ಸಾಂಗತ್ಯ ಜೀವನದ ಮಾದರಿ ಇದೆ. ಅದಕ್ಕೆ ಓದುಗರಲ್ಲಿ ನ್ಯೂಟ್ರಲ್ ಆದ ದೃಷ್ಟಿ ಒದಗುತ್ತದೆಯೇ ಎನ್ನುವುದು ಪ್ರಶ್ನೆ. ಈ ಸಂಬಂಧ ಕುರಿತ ನಿರೂಪಣೆಯಲ್ಲಿ ಮಹಿಳಾ ಸ್ವಾತಂತ್ರ್ಯ, ಮಹಿಳಾ ಹಕ್ಕುಗಳ ಪ್ರತಿಪಾದನೆ ಮತ್ತು ಪುರುಷಪ್ರಧಾನತೆಯನ್ನು ಮುರಿಯಬೇಕು ಎಂಬ ಆಶಯ ಇರುವಂತೆಯೇ ಸಾಂಪ್ರದಾಯಿಕ ಕುಂಟುಂಬದಲ್ಲಿ ಇದ್ದಲ್ಲಿ ಮಹಿಳೆಯರ ಸ್ವೇಚ್ಛೆಗೆ ಅವಕಾಶ ಆಗುವುದಿಲ್ಲ ಎಂಬ ಇಂಗಿತವೂ ಇದೆ. ಸಾಂಪ್ರದಾಯಿಕ ಕೌಟುಂಬಿಕತೆಯೇ ಆದರ್ಶ ಕೌಟುಂಬಿಕತೆ ಎಂಬ ವಾಲುವಿಕೆಯನ್ನೂ ಕಾದಂಬರಿಯಲ್ಲಿ ಕಾಣಬಹುದು.

ಕುಟುಂಬ, ದಾಂಪತ್ಯಗಳಲ್ಲಿನ ಸ್ತ್ರೀಪುರುಷ ಸಂಬಂಧಿ ಸಂಕಥನವು ಲಿಂಗಸಮಾನತೆಯ ಸಂಘರ್ಷಗಳ ಕಥನವೂ, ಪ್ರಧಾನಾಧೀನತೆಯ ಸಂಘರ್ಷಗಳ ಕಥನವೂ, ಪರಸ್ಪರ ಯಾಜಮಾನ್ಯದ ವಿಘಟನೆ-ಸಂಘಟನೆಯ ಸಂಘರ್ಷಗಳ ಕಥನವೂ ಆಗಿರುತ್ತದೆ. ಹಾಗೆ ನೋಡಿದರೆ ಕುಟುಂಬ ಎನ್ನುವುದು ಸಮಾಜದಲ್ಲಿ ಅಲಾಯಿದ ಆಗಿಯೇನೂ ಇರುವುದಿಲ್ಲ. ಇಲ್ಲಿನ ಸ್ತ್ರೀಪುರುಷ ಸಂಬಂಧವು ಅರ್ಥಿಕತೆ, ಸಾಮಾಜಿಕ ಸನ್ನಿವೇಶಗಳ ಹಾಜರಿ, ಗೈರುಹಾಜರಿ, ಮಠ-ಶಾಲೆ-ಜ್ಞಾನಗಳನ್ನೂ; ರಾಜಕೀಯ ಸಂಪರ್ಕಗಳ ಬಲಾಬಲಗಳನ್ನೂ ಅವಲಂಬಿಸಿರುತ್ತದೆ. ಇದನ್ನೇ ಕಾದಂಬರಿ ಪ್ರತಿಪಾದಿಸುತ್ತದೆ.

ಸಂಸ್ಕೃತಿಯ ಹೆಸರಿನಲ್ಲಿ ಚಾಲ್ತಿಯಲ್ಲಿ ಇಟ್ಟ ಹಲವು ಬಗೆಯ ಆಚಾರಗಳೂ ಕುಟುಂಬದ ಸಂಬಂಧಗಳನ್ನು ನಿಯಂತ್ರಿಸುತ್ತ, ಪ್ರಭಾವಿಸುತ್ತ ಇರುತ್ತವೆ. ಉದಾಹರಣೆಗೆ

ಈ ಕಾದಂಬರಿಯಲ್ಲಿ ಬರುವ ನೋಪಿ ಪೂಜೆಯ ಆಚರಣೆ, ತಾಳಿ ಧರಿಸುವ, ಮೈಮುಚ್ಚುವಂತಹ ಬಟ್ಟೆ, ಸೀರೆ ಉಡಬೇಕೆಂಬ ಆಚಾರ, ತಂದೆ-ತಾಯಿಗೆ ನೋವು ಉಂಟುಮಾಡಬಾರದು; ಅವರ ಮಾತು ಮೀರಬಾರದು, ಅವರನ್ನು ಸಂತೋಷವಾಗಿ ಇಡಬೇಕು ಎಂಬ ನಂಬುಗೆ, ಹೆಣ್ಣುಗಳೇ ಗಂಡಸರ ಜೊತೆ ಹೊಂದಾಣಿಕೆ ಮಾಡಿಕೊಳ್ಳಿ ಮತ್ತು ನಿಮ್ಮ ಒಳ್ಳೆಯ ಕಾಲಕ್ಕಾಗಿ ಕಾಯಿರಿ ಎಂಬ ಉಪದೇಶ ಇತ್ಯಾದಿ ಇತ್ಯಾದಿ ಎಲ್ಲವೂ ಹೆಣ್ಣನ್ನೇ ನಿಯಂತ್ರಿಸುವ ನಂಬಿಕೆ ಮತ್ತು ಮೌಲ್ಯಗಳೇ ಆಗಿವೆ. ಹೆಣ್ಣನ್ನು ಸಮಾನವಾಗಿ ಕಾಣಬೇಕು ಎಂಬ ಆಶಯ, ಹೆಣ್ಣು ತನ್ನ ಮನೆಯನ್ನು (ಕುಟುಂಬ ದಾಂಪತ್ಯವನ್ನು) ಕಾಪಿಟ್ಟುಕೊಳ್ಳಬೇಕು ಎಂಬ ಅಪೇಕ್ಷೆ ಎರಡೂ ಇಲ್ಲಿವೆ. ಅಂದರೆ ಸಾಂಪ್ರದಾಯಿಕ ಸ್ಥಾಪಿತ ಕುಟುಂಬ, ದಾಂಪತ್ಯದ ಸ್ವರೂಪ ಬದಲುಗೊಳ್ಳಬೇಕು ಎಂಬ ಆಶಯ ಮತ್ತು ಸಾಂಸ್ಕೃತಿಕ ಆಚಾರಗಳು ಉಳಿಯಬೇಕು ಎಂಬ ಅಪೇಕ್ಷೆಗಳ ನಡುವಣ ಸಂಘರ್ಷ ಕಾದಂಬರಿಯ ಆಳದಲ್ಲಿ ಇದೆ.

ಗಂಡಿನ ಅನಾಚಾರಗಳು ಕೂಡ ದಾಂಪತ್ಯ ವಿಘಟನೆಗೆ ಕಾರಣ ಎಂಬಂತೆ ಇಲ್ಲಿ ಕಥನ ಇದ್ದರೂ ಅವು ಒಟ್ಟಾರೆ ಕಾದಂಬರಿಯ ತಾತ್ವಿಕತೆಯಲ್ಲಿ ಕರಗಿ ಸಾಂಪ್ರದಾಯಿಕ ಕುಟುಂಬ, ದಾಂಪತ್ಯ ಕಲ್ಪನೆಯನ್ನು ಎತ್ತಿಹಿಡಿಯುವ ಕೆಲಸ ಕಾದಂಬರಿಯ ಆಂತರ್ಯದಲ್ಲಿ ಜರುಗಿದೆ. ಅಷ್ಟೆ ಅಲ್ಲ ನಮಗೆ ಗೊತ್ತಿಲ್ಲದೆಯೇ ಹೇಗೆ ನಾವು ಕಥನದಲ್ಲಿ ಪರೋಕ್ಷವಾಗಿ ಊಳಿಗಮಾನ್ಯತನವನ್ನು ಬಿತ್ತರಿಸಬಹುದು ಎಂಬುದಕ್ಕೆ ಮಲ್ಲಪ್ಪ ಎಲ್ಲಮ್ಮರ ಜೋಡಿಯ ಚಿತ್ರಣ ಉದಾಹರಣೆಯಾಗಿ ಕಾಣುತ್ತದೆ. ಮಲ್ಲಪ್ಪನಿಗೆ ಸದಾಶಿವಪ್ಪ ಕೊಡುವ ಸಂಬಳದ ಲೆಕ್ಕವೇ ಕಾದಂಬರಿಯಲ್ಲಿ ಇಲ್ಲ. ಎಲ್ಲಮ್ಮನದಂತೂ ಬಿಟ್ಟಿಚಾಕರಿ. ಅವಳ ಚಾಕರಿಗೆ ಆರ್ಥಿಕ ಮೌಲ್ಯವೇ ಇಲ್ಲ. ಇದು ಸಾಹಿತ್ಯಕ ವಾಸ್ತವ ಮಾತ್ರವಲ್ಲ ನಮ್ಮ ಸಾಮಾಜಿಕ ವಾಸ್ತವ ಕೂಡ. ಆದರೆ ಇಲ್ಲಿ ಕಾದಂಬರಿಯ ಗಮನ ಅವರ ದಾಂಪತ್ಯ ಚಿತ್ರಕ್ಕೆ ಮಾತ್ರ ಸೀಮಿತ ಆಗುತ್ತದೆ.

ಆತ್ಮಾವಲೋಕನ ತಂತ್ರ, ಆತ್ಮ ನಿವೇದನಾ ತಂತ್ರ, ಮೂರನೆ ವ್ಯಕ್ತಿಯ ನಿರೂಪಣಾ ತಂತ್ರ, ನಿರೂಪಕ ನಿರೂಪಣೆ ತಂತ್ರ, ಸಂಭಾಷಣಾ ತಂತ್ರ ಹೀಗೆ ಕಾದಂಬರಿಯಲ್ಲಿ ನಿರೂಪಣೆಗೆ ಹಲವು ತಂತ್ರಗಳನ್ನು ಬಳಸಲಾಗಿದೆ. ಎಲ್ಲಿಯೂ ಯಾವುವೂ ಪರಸ್ಪರ ಸಂಘರ್ಷಿಸುವುದಿಲ್ಲ. ಎಲ್ಲವೂ ಒಟ್ಟಾರೆ ಮೇಳೈಸಿ ಕಾದಂಬರಿಯು ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ.

ಹಾಗೆಯೆ ನಿರೂಪಣೆಗೆ ರಾಯಚೂರಿನ ಜವಾರಿ ಭಾಷೆ ಮತ್ತು ಕನ್ನಡ ಮಾನಕ ಭಾಷೆ ಎರಡನ್ನೂ ಕಾದಂಬರಿಯಲ್ಲಿ ಬಳಸಲಾಗಿದೆ. ಇಲ್ಲಿ ನಿರೂಪಕನ ಭಾಷೆ ಮಾನಕ ಭಾಷೆಯಾದರೆ ಪಾತ್ರಗಳ ಭಾಷೆ ಜವಾರಿ ಭಾಷೆಯಾಗಿದೆ. ಆದರೆ ಅಲ್ಲಲ್ಲಿ ನಿರೂಪಕನ ಭಾಷೆಯಲ್ಲಿ ಮಾನಕ ಮತ್ತು ಜವಾರಿ ಎರಡೂ ಕಲಸಿಕೊಳ್ಳುತ್ತವೆ. (ಉದಾ: ನೋಡಿ ಪು. ೮೧) ಪಾತ್ರಗಳ ಮತ್ತು ನಿರೂಪಕನ ಎರಡೂ ಭಾಷೆಗಳನ್ನು

ಜವಾರಿ ಆಗಿಯೇ ಇರಿಸಿಕೊಂಡಿದ್ದರೆ ಕಾದಂಬರಿ ನಿರೂಪಣೆಯ ಅಂದ ಖಂಡಿತಾ ಇನ್ನಷ್ಟು ಹೆಚ್ಚಾಗುತ್ತಿತ್ತು.

ಕಾದಂಬರಿಯ ಆರಂಭದಲ್ಲಿ ಸದಾಶಿವಪ್ಪ ಪಾರ್ವತಿ ದಂಪತಿಗಳ ಹಿರಿಯ ಮಗಳ ಹೆಸರನ್ನು ಶಿವಗೀತಾ ಎನ್ನಲಾಗಿದೆ. ಆದರೆ ಹತ್ತನೇ ಪುಟದ ಆನಂತರದಲ್ಲಿ ಆಕೆಯ ಹೆಸರನ್ನು ಶಿವಲೀಲಾ ಎಂದೆ ಬಳಸಲಾಗಿದೆ. ಕರಡು ತಿದ್ದುವಾಗ ಇದನ್ನು ಗಮನಿಸಬಹುದಿತ್ತು. ಅಲ್ಲದೆ ಮಠದ ಹಿರಿಯ ಸ್ವಾಮಿಗಳ ಮೂಲಕ ಮಾದೇವಪ್ಪ ಗುಡ್ಡದ ಹೊಲ ಖರೀದಿ ಮಾಡಿದ್ದು ರಾಮನಗೌಡ ಎಂಬುವವರಿಂದ ಹಾಗೆಯೇ ಶಿವಲೀಲಾಳ ಮಾವನ ಹೆಸರೂ ರಾಮನಗೌಡ ಎಂದೆ ಇರಿಸಲಾಗಿದೆ. ಮುಂದುವರಿದು ಮಠದ ಕಿರಿಸ್ವಾಮಿಯ ಹೆಸರು ಚೆನ್ನಬಸವಸ್ವಾಮಿ ಆದರೆ ಕಲ್ಯಾಣಿಯ ಮಗನ ಹೆಸರೂ ಚೆನ್ನಬಸವ ಎಂದೇ ಇದೆ. ಸಮಾಜದಲ್ಲಿ ಒಂದೇ ಹೆಸರಿನ ಹಲವು ಮಂದಿ ಇರಬಹುದು. ಆದರೆ ಒಂದು ಕಾದಂಬರಿ ಬರೆಯುವಾಗ ಇಬ್ಬಿಬ್ಬರಿಗೆ ಒಂದೇ ತೆರನ ಹೆಸರು ಬಳಸುವುದು ಅಷ್ಟು ಉಚಿತವಲ್ಲ. ಕಲ್ಯಾಣಿ ಶಿವಲೀಲಾಳಿಗೆ ತನ್ನ ಗಂಡ ಹೊಲದಲ್ಲಿ ಬೇವಿನಮರಕ್ಕೆ ನೇಣು ಬಿಗಿದುಕೊಂಡು ಜೀವ ತೆಗೆದುಕೊಂಡ ವಿವರಗಳನ್ನು ಹೇಳಿಕೊಳ್ಳುವ ತಂತ್ರದಲ್ಲಿ ಶಂಕರಲಿಂಗನ ವೃತ್ತಾಂತವನ್ನು ನಿರೂಪಿಸಿರುವುದು ಒಳ್ಳೆಯ ತಂತ್ರವೇ ಹೌದು. ಆದರೆ ಶಂಕರಲಿಂಗನ ಹೆಸರು ಸೈತ ಶಿವಲೀಲಾಳಿಗೆ ಗೊತ್ತಿರಲಿಲ್ಲ ಎಂಬಂತೆ (ಪು. ೨೩) ಆ ವೃತ್ತಾಂತ ನಿರೂಪಿಸಿರುವುದು ಸ್ವಲ್ಪ ಅತಿಶಯ ಅನ್ನಿಸುತ್ತದೆ.

ಗೌರಿಯರು ಬದಲುಗೊಳ್ಳುವ ಕುಟುಂಬ, ದಾಂಪತ್ಯ ಸಂಕಥನದ ನೆಲೆಯಲ್ಲಿ ಒಂದು ವಿಶಿಷ್ಟ ಕಾದಂಬರಿ. ಅನುಭವಿ ಕತೆಗಾರರಾದ ಅಮರೇಶರು ಈ ಕಾದಂಬರಿಯನ್ನು ಮುಂಬರುವ ಯಾವುದೋ ಮಹಾ ಕಾದಂಬರಿಯ ತಾಲೀಮಿನ ಹಾಗೆ ಬರೆದಂತೆ ಕಾಣುತ್ತದೆ. ನನ್ನ ಓದಿನ ಅನುಭವದಲ್ಲಿ ಹೇಳುವುದಾದರೆ ಈ ಕಾದಂಬರಿ ಮುಗಿದಿಲ್ಲ. ಶುರುವಾಗಿದೆ ಅಷ್ಟೆ. (ಹಾಗೆ ನೋಡಿದರೆ ಯಾವ ಕತೆಗಳಿಗೂ ಕೊನೆ ಎಂಬುದು ಇರುವುದಿಲ್ಲ) ಇದು ಒಂದು ಯಶಸ್ವಿ ಕಾದಂಬರಿಯ ಮೊದಲ ಪೀಠಿಕಾ ಭಾಗ ಮಾತ್ರ. ಅಂದರೆ ಇದು ಶಿವಲೀಲಾ, ಅಕ್ಕಮ್ಮ, ಶ್ರೀದೇವಿಯರ ಮೂರು ದಾಂಪತ್ಯಗಳ ಪೀಠಿಕಾ ಕಥನ ಮಾತ್ರ. ಇದು ಮುಂದುವರೆಯಬೇಕು. ನುಗಡೋಣಿ ಬಸವ ಇವರ ಕಿರುಬೆರಳನ್ನು ಮುಂದೆಯು ಹಿಡಿದು ನಡೆಸುವನೊ ಇಲ್ಲವೊ; ಅಮರೇಶ ನುಗಡೋಣಿ ಅವರು ಮುಂದೊಂದು ದಿನ ಗೌರಿಯರು ಭಾಗ ಎರಡನ್ನು ಬರೆಯಲಿ ಎಂದು ಆಶಿಸುತ್ತೇನೆ.

ಆಕರ : ಗೌರಿಯರು (ಕಾದಂಬರಿ) –ಅಮರೇಶ ನುಗಡೋಣಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೨೧.

◆◆

೫

ತಾಯಿ ಹೃದಯದ ಕಾದಂಬರಿ

ಕೋಡಿಬೆಟ್ಟು ರಾಜಲಕ್ಷ್ಮಿ

ಉತ್ತರ ಕರ್ನಾಟಕದ ಶೈಲಿಯ ಭಾಷೆಯನ್ನು ಅರ್ಥಮಾಡಿಕೊಳ್ಳುವುದೇ ಒಂದು ಖುಷಿ. ಅಲ್ಲಿನ ಮಾತುಗಳ ಧಾಟಿಗೆ ಮನಸ್ಸನ್ನು ಒಗ್ಗಿಸಿಕೊಂಡು, ಅದೇ ಓಘದಲ್ಲಿ ಕಾದಂಬರಿಯೊಂದನ್ನು ಓದಿದಾಗ ಕಾದಂಬರಿಯ ಸಾಲುಗಳ ನಡುವಿನ ಅಡಗಿ ಕುಳಿತಿರುವ ಪರೋಕ್ಷ ಅರ್ಥಗಳು, ಸಾಂಕೇತಿಕತೆ ಹೆಚ್ಚು ಅರ್ಥವಾಗುತ್ತದೆ. ಮಂಗಳೂರಿನವಳಾದ ನಾನು ಉತ್ತರ ಕರ್ನಾಟಕದ ಭಾಷೆಯಲ್ಲಿರುವ 'ಗೌರಿಯರು' ಕಾದಂಬರಿಯನ್ನು ಬಹಳ ಆಸ್ವಾದಿಸಿಕೊಂಡು ಓದಿದೆ.

ಸಮಾಜದ ಪ್ರತಿಯೊಬ್ಬರ ಅಂತರಂಗದಲ್ಲಿಯೂ ಒಂದು ಆಶಯವಿರುತ್ತದೆ. ಉದಾಹರಣೆಗೆ ಹೆಣ್ಣುಮಕ್ಕಳಿಗೆ ಅನೇಕ ಕಟ್ಟಳೆಗಳನ್ನು ವಿಧಿಸಬಾರದು. ರಾತ್ರಿ ಸ್ವಲ್ಪ ತಡವಾಗಿ ಬರುತ್ತೇನೆ ಎಂದು ಹೆಣ್ಣುಮಗಳು ಹೇಳಿದಾಗ, ಏನು ಎತ್ತ ಎಂದು ವಿಚಾರಿಸದೇ ದಬಾಯಿಸಬಾರದು, ಕಾಲು ಸರಿ ಇಟ್ಕೊ, ಜಡೆ ಹಿಂದಕ್ಕೆ ಹಾಕ್ಕೋ..., ಪೋಲಿ ಜೋಕುಗಳು ಅರ್ಥವಾದರೂ ನಗಬಾರದು, ಹೀಗೆಲ್ಲ ಸಂಪ್ರದಾಯಗಳನ್ನು ಒಂದರ ಮೇಲೊಂದರಂತೆ ಅವರ ಮೇಲೆ ಹೇರದೇ, ಅವರೂ ಗಂಡುಮಕ್ಕಳಂತೆ ಸಹಜವಾಗಿ ಬೆಳೆಯುವಂತಹ ವಾತಾವರಣ ರೂಪಿಸಬೇಕು ಎಂಬ ಆಶಯವಿರುತ್ತದೆ.

ಈ ಆಶಯಗಳು ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಮಾತ್ರವಷ್ಟೇ ಅಲ್ಲ, ಸಮಾಜದ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಇಂತಹ ಆಶಯಗಳು ನಮ್ಮ ನಡುವೆ ಇದ್ದೇ ಇರುತ್ತವೆ. ನಮ್ಮ ಕನಸಿನ ಈ ಆದರ್ಶಗಳು ಜಾರಿಯಾಗಲಿ ಎಂಬ ನಿಟ್ಟಿನಲ್ಲಿ ನಾವು ವರ್ತಿಸುತ್ತಿರುತ್ತೇವೆ. ಅಂದರೆ ನಮ್ಮ ಮನೆಯಲ್ಲಿ ಮಗಳಿದ್ದರೆ ಅವಳಿಗೆ ಅಷ್ಟೆಲ್ಲ ಕಟ್ಟಳೆಗಳನ್ನು ಹೇರದೇ ಇರುವುದು, ಇತರ ಹೆಣ್ಮಕ್ಕಳಿಗೆ ಕೆಡುಕು ನುಡಿಯದೇ ಇರುವುದು. ಬದುಕಿನಲ್ಲಿ ಹೀಗೆ ನಮ್ಮನ್ನು ನಾವು ತಿದ್ದಿಕೊಳ್ಳುತ್ತ ಇರುತ್ತೇವೆ. ಆದರೆ ಈ ತಿದ್ದಿಕೊಳ್ಳುವಿಕೆ ಮತ್ತು ಉದಾರತೆಯನ್ನು ಪ್ರಸ್ತುತ ಕಾಲದಲ್ಲಿ ಎಷ್ಟರವರೆಗೆ ವಿಸ್ತರಿಸಬಹುದು? ಅಂದರೆ

ಹೆಣ್ಣುಮಕ್ಕಳು ರಾತ್ರಿ ಪ್ರಯಾಣಿಸಲು ಪೂರಕವಾದ ವಾತಾವರಣ ಈಗ ಸೃಷ್ಟಿಯಾಗಿದೆಯೇ ಎಂಬುದು ಪ್ರಶ್ನೆ. ಈ ವಾಸ್ತವದ ಸಂಗತಿ ಮತ್ತು ಆದರ್ಶದ ನಡುವೆ ಬಹಳ ತೆಳುವಾದ ಗೆರೆ ಇರುತ್ತದೆ. ಎಷ್ಟರ ಮಟ್ಟಿಗೆ ಅವಳಿಗೆ ಎಚ್ಚರವನ್ನು ಹೇಳಬಹುದು, ಅದನ್ನು ಸ್ವೀಕರಿಸುವ ಅವಳ ಸಾಮರ್ಥ್ಯ ಏನು, ಲೋಕವು ಎಷ್ಟರಮಟ್ಟಿಗೆ ಮುಕ್ತವಾಗಿ, ಬದುಕಿಗೆ ಪೂರಕವಾಗಿದೆ ಎಂಬೆಲ್ಲ ಅಂಶಗಳು ಮನದಲ್ಲಿ ಹಾದು ಹೋಗುತ್ತವೆ ಅಲ್ಲವೇ? ಈ ವಿವೇಕದ ಗೆರೆಯನ್ನು ಗುರುತಿಸುವುದಕ್ಕೆ ಕತೆಗಾರ ಅಮರೇಶ ನುಗಡೋಣಿಯವರು ಬರೆದ **ಗೌರಿಯರು** ಕಾದಂಬರಿ ಪ್ರಯತ್ನ ಮಾಡಿದೆ. ಈ ನಿಟ್ಟಿನಲ್ಲಿ ಕಾದಂಬರಿಯ ಓದುವಿಕೆ ನನಗೆ ಕೊಟ್ಟ ಕೆಲವು ಹೊಳಹುಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ಕರಾವಳಿ ಪ್ರದೇಶದಲ್ಲಿ ಹಿಂದೆ ಅಪಾರ ಪ್ರಮಾಣದಲ್ಲಿ ಭತ್ತ ಬೆಳೆಯುತ್ತ ಇದ್ದರು. ನಮ್ಮ ಬಾಲ್ಯ ಕಾಲದಲ್ಲಿ ಮತ್ತು ಅದಕ್ಕೂ ಪೂರ್ವದಲ್ಲಿ ಭತ್ತವು ಬಹಳ ದುಬಾರಿಯಾದುದಾಗಿತ್ತು. ಭತ್ತ ಬೆಳೆಯುವವರಿಗೆ ಸಾಮಾಜಿಕ ಸ್ಥಾನಮಾನ, ಗೌರವಗಳು ಸ್ವಲ್ಪ ಜಾಸ್ತಿಯೇ ಇತ್ತು. ಆಗೆಲ್ಲ ಬಡತನ ಇದ್ದವರು, ಊಟಕ್ಕೆ ಅಕ್ಕಿಯನ್ನು ಹೆಚ್ಚು ಬಳಸದೇ ಹೆಸರು, ಕಡಲೆ ಮುಂತಾದ ಕಾಳುಗಳನ್ನು ಬಳಸುತ್ತಿದ್ದರು. ಸೊಪ್ಪು, ದಂಟು ಬಳಸಿ ಹಸಿವು ತಣಿಸಿಕೊಳ್ಳುತ್ತಿದ್ದರು. ಆದರೆ ಇಂದು ಅಕ್ಕಿಯ ಬೆಲೆಯನ್ನೂ ಈ ಧಾನ್ಯಗಳ ಅಥವಾ ಇತರ ವಿಚಾರಗಳ ಬೆಲೆಯನ್ನೂ ಗಮನಿಸಿದಾಗ ಭತ್ತದ ಬೆಲೆಯು ಎಲ್ಲಿ ನಿಂತಿದೆ ಎಂದು ವಿವೇಚಿಸಬಹುದು. ಆಹಾರವು ಎಲ್ಲರ ಹಕ್ಕು ಎಂಬುದನ್ನು ಒಪ್ಪಿಕೊಳ್ಳುವುದಾದರೆ, ರೈತನಾದವನು ಘನತೆಯಿಂದ ಬಾಳುವುದು ಕೂಡ ಅವನ ಹಕ್ಕಲ್ಲವೇ. ಅಕ್ಕಿಯು ಎಲ್ಲರಿಗೂ ಕಡಿಮೆ ಬೆಲೆಯಲ್ಲಿ ಸಿಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ವ್ಯವಸ್ಥೆಯ ಆಶಯವಾಗಿರಬಹುದು, ಅದಕ್ಕೆ ತೆರುವ ಬೆಲೆಯೆಂತಹುದು ಎಂಬುದನ್ನು ಗಮನಿಸಬೇಕು. ಈ ಸದಾಶಯವು, ಯಾವುದೋ ರೈತನ ಬದುಕನ್ನೇ ಕಸಿದುಕೊಳ್ಳುವ ಮಟ್ಟಕ್ಕೆ ಹೋಗಬಾರದು. ಈ ಸಂದಿಗ್ಧವನ್ನು ಕಾದಂಬರಿಯ ಪಾತ್ರಗಳು ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತವೆ. ಯಾವುದೇ ಬೆಳೆಯಾದರೂ ಸರಿ, ಮಾರುಕಟ್ಟೆಯಲ್ಲಿ ಸಮತೋಲನವಿಲ್ಲದೇ ಇದ್ದಾಗ, ಅಂತಿಮವಾಗಿ ಅದರ ಬಿಸಿಯು ರೈತನನ್ನೇ ಸುಡುತ್ತದೆ.

ಕಾದಂಬರಿಯಲ್ಲಿ ಶಿವಲಿಂಗಪ್ಪ ಹೇಳುವ ಮಾತುಗಳಿವು: "ಗದ್ದೆಯಲ್ಲಿ ಭತ್ತ ಬೆಳೀಲಿಕ್ಕಾಗಿ ಭಾಳ ಖರ್ಚು ಮಾಡಬೇಕಾಗ್ತದ– ಒಕ್ಕಲುತನ ರೈತರನ್ನು ಮುಗ್ಗಲು ಮಾಡಿಬಿಟ್ಟಿತು" ಎನ್ನುವುದು ಬಹಳವೇ ತಟ್ಟುವ ಸಾಲುಗಳಿವು.

ಹೀಗೆ ಕೃಷಿ ಕ್ಷೇತ್ರದ ವಾಸ್ತವ ಪರಿಸ್ಥಿತಿಯು ಇಡೀ ಕಾದಂಬರಿಯುದ್ದಕ್ಕೂ ಕಾಣಿಸುತ್ತದೆ. ಅದು ರೈತರ ಬದುಕನ್ನು ಹೈರಾಣ ಮಾಡುವ ರೀತಿ ನೀತಿಗಳು ಇಂದಿನ ಪರಿಸ್ಥಿತಿಗೆ ಹಿಡಿದ ಕನ್ನಡಿಯ ಹಾಗಿದೆ. ಆರಂಭದಲ್ಲಿ ಶಿವಲಿಂಗಪ್ಪನ ಪಾತ್ರ

ಚಿತ್ರಣದಲ್ಲಿ ಅದು ಸ್ವಲ್ಪ ಢಾಳಾದ ಚಿತ್ರಣವನ್ನು ಪಡೆದಿದ್ದರೆ, ಅಂತ್ಯದಲ್ಲಿ ಕೃಷಿ ಕ್ಷೇತ್ರದ ಪಲ್ಲಟಗಳು ಬದುಕಿನ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಕಾದಂಬರಿಯು ಪರೋಕ್ಷವಾಗಿ ಚಿತ್ರಿಸುತ್ತ ಸಾಗಿದೆ. ಶಿವಲಿಂಗಪ್ಪ ಮತ್ತು ಸದಾಶಿವಪ್ಪನ ಮಕ್ಕಳ ಜೀವನ ಶೈಲಿಗೆ ಪರೋಕ್ಷವಾಗಿ ಕೃಷಿ ಕ್ಷೇತ್ರದ ವಿಫಲತೆಯೂ ಕಾರಣ ವಾಗಿರಬಹುದಲ್ಲವೇ?

ಇನ್ನು ಅವರ ತೋಟದ ಮನೆಗೆ ಬಂದೊದಗುವ ಸಂಕಷ್ಟಗಳ ಸರಮಾಲೆಯನ್ನು ನೋಡಿದರೆ, ಅದು ಪ್ರತೀ ಊರಿನ ಕತೆಯಾಗಿದೆ. ನಗರದ ಅಂಚಿನಲ್ಲಿರುವ ಗ್ರಾಮಗಳಲ್ಲಿ ಬದುಕುವ ಜನರು ನೆಮ್ಮದಿಯಿಂದ ನಿದ್ದೆ ಮಾಡುವ ಪರಿಸ್ಥಿತಿ ಇಂದಿಲ್ಲ. ರಿಯಲ್ ಎಸ್ಟೇಟ್ ಉದ್ಯಮದಿಂದ ಅವರಿಗೆ ಧಮಕಿಗಳು ಬರಬಹುದು. ಅಷ್ಟೇ ಅಲ್ಲ, ಇನ್ನೂ ಅನೇಕಾನೇಕ ಸಮಸ್ಯೆಗಳು ಅವರನ್ನು ಕಾಡುವುದನ್ನು ವಿವಿಧ ಕಡೆಗಳಲ್ಲಿ ಓದಿದ್ದೇವೆ, ಸ್ವತಃ ಅನುಭವಿಸಿದವರೂ ಇದ್ದೇವೆ.

ಆದ್ದರಿಂದ **ಗೌರಿಯರು** ಕಾದಂಬರಿಯ ಕತೆಯು ಕೇವಲ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿ ಎಂಬ ಮೂವರು ಕಥಾನಾಯಕಿಯರ ಸುತ್ತ ಸಾಗುವುದಷ್ಟೇ ಅಲ್ಲ, ಭೂಮಿತಾಯಮ್ಮನೂ ಇಲ್ಲಿ ಒಬ್ಬಳು 'ಗೌರಿ'ಯಾಗಿ ಕಾಣಿಸಿಕೊಳ್ಳುತ್ತಾಳೆ. ಆಕೆಯ ದುಃಖವನ್ನು ಕೇಳದ ವ್ಯವಸ್ಥೆಯ ಧೋರಣೆಯನ್ನು ಅಕ್ಷರಗಳ ನಡುವಿನ ಮೌನವು ಸೆರೆಹಿಡಿಯುತ್ತದೆ.

ಈ ಎಲ್ಲ ದುಃಖಗಳಿಗೆ ಸಾಕ್ಷಿಯಾಗಿ, ಕಾಲದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಈ ಮೂವರು ಹುಡುಗಿಯರನ್ನು ಮೀರಿದ ಮಹಾಗೌರಿಯೊಬ್ಬರ ಪರಿಚಯವನ್ನು ಮಾಡಿಕೊಡಲು ಕತೆಯು ಹವಣಿಸುತ್ತದೆ.

ಯಾರದು ಮಹಾಗೌರಿ? ಮುಂದಕ್ಕೆ ನೋಡೋಣ.

ಸ್ವಾತಂತ್ರ್ಯವು ಯಾವಾಗಲೂ ಜವಾಬ್ದಾರಿಯೆಂಬ ಹೊರೆಯೊಂದಿಗೇ ನಮಗೆ ಲಭಿಸುತ್ತದೆ. ಸಂಪ್ರದಾಯದ ಚೌಕಟ್ಟನ್ನು ದಾಟುವ ಅವಕಾಶ ಸಿಕ್ಕಿದಾಗ, ಮಹಿಳೆಯ ಮುಂದೆ ಒಳಿತು ಮತ್ತು ಕೆಡುಕಿನ ಅನೇಕ ದಾರಿಗಳು ತೆರೆದುಕೊಳ್ಳುತ್ತವೆ. ಎಷ್ಟೋ ಸಂದರ್ಭಗಳಲ್ಲಿ ನಾವು ಹೆಜ್ಜೆ ಹಾಕುವ ದಾರಿ ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ ಎಂಬುದು ಮುಂಚಿತವಾಗಿ ಗೊತ್ತಾಗಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ವಿವೇಕದ ಎಳೆಯೊಂದು ನೆರವಿಗೆ ಬರುವುದು. ಈ ವಿವೇಕದ ಹೊಳಹನ್ನು ಕೊಡುವ ಶಕ್ತಿಯಿರುವುದು ಶಿಕ್ಷಣಕ್ಕೆ ಎಂಬುದನ್ನು ನಂಬಿದ ವ್ಯಕ್ತಿ ಸದಾಶಿವಪ್ಪ.

ಶಿವಲೀಲಾ ಮತ್ತು ಅಕ್ಕಮ್ಮರಿಗೆ ಈ ವಿವೇಕವು ಒಲಿದು ಬಂದಿದ್ದರೆ ಶ್ರೀದೇವಿಗೆ ಅದು ಅಷ್ಟು ಬೇಗನೇ ಒಲಿದು ಬಂದಂತೆ ಕಾಣುವುದಿಲ್ಲ. ಕೇವಲ ಪದವಿಗಳಷ್ಟೇ ವಿವೇಕವನ್ನು ಕಲ್ಪಿಸಲಾರವು ಎಂಬ ಪರೋಕ್ಷ ಮಾತೊಂದು ಇಲ್ಲಿ ಸ್ಪಷ್ಟವಾಗಿದೆ.

ದಾಂಪತ್ಯ ಸೌಖ್ಯವು ಇಲ್ಲದೇ ಇದ್ದಾಗ ಸಹನೆ, ಹೊಂದಾಣಿಕೆ, ಕ್ಷಮೆ ಎನ್ನುವುದು ಎಷ್ಟರ ಮಟ್ಟಿಗೆ ಇರಬೇಕು.'ಇನ್ನು ಸಾಧ್ಯವಿಲ್ಲ' ಎಂದು ನಿರ್ಧಾರ ಮಾಡುವ ಆ ಕ್ಷಣ

ಯಾವುದು. ಅಂತಹ ನಿರ್ಧಾರವು ಕೊಡುವ ನೋವನ್ನು ಭರಿಸುವುದಾದರೂ ಹೇಗೆ ಎನ್ನುವುದು ಕೂಡ ವಿವೇಕವನ್ನೇ ಅವಲಂಬಿಸಿದೆ.

ಮೊದಲನೆಯದು ದಾಂಪತ್ಯಕ್ಕೆ ಬದ್ಧವಾಗಿರುವುದು ಮತ್ತು ಎರಡನೆಯದಾಗಿ ಪ್ರೀತಿಸಿದವರನ್ನು ಕ್ಷಮಿಸುವುದು ಎಲ್ಲಿಯವರೆಗೆ ಎನ್ನುವ ಪ್ರಶ್ನೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ಭಾವನೆಗಳ ಮಹಾಪೂರವನ್ನು ಭರಿಸಲಾರದೇ ತೊಳಲಾಡುವವರೇ ಹೆಚ್ಚು.

ಹೆಂಡತಿಯನ್ನು ದುಡಿಯುವ ಆಳಿನಂತೆ, ದುಡಿಮೆಯ ದುಡ್ಡೆಲ್ಲ ತನಗೆ ಸೇರಬೇಕು ಎಂಬಂತೆ ನಡೆಸಿಕೊಂಡ ಗಂಡನ ಬಗ್ಗೆ ಶಿವಲೀಲಾಗೆ ಜಿಗುಪ್ಸೆ ಮೂಡುತ್ತದೆ. ಹಲವು ಅವಕಾಶಗಳನ್ನು ನೀಡಿದಾಗ ಸುಧಾರಿಸಿಕೊಳ್ಳದೇ ಇರುವ ಪತಿಯ ಕುರಿತು ಬೇಸರವುಂಟಾಗಿ, ದೂರವಾಗುವ ನಿರ್ಧಾರವನ್ನು ಆಕೆ ಮಾಡುತ್ತಾಳೆ. ಹಾಗೆ ನೋಡಿದರೆ, ತೀರಾ ಅವಕಾಶಗಳನ್ನು ಕೊಟ್ಟು ಕೊಟ್ಟು ತನ್ನನ್ನು ತಾನು ನೋವಿಗೆ ಒಡ್ಡಿಕೊಳ್ಳುವ ಮೂರ್ಖತೆಯನ್ನೂ ಅವಳು ಮಾಡುವುದಿಲ್ಲ. ಮಗುವಿನ ಕ್ಷೇಮಕ್ಕೆ ಈ ವಾತಾವರಣ ಸರಿಯಿಲ್ಲ ಎಂಬ ಪ್ರೌಢನಿರ್ಧಾರ ಅವಳದ್ದಾಗಿ ಕಾಣುತ್ತದೆ.

ಶಿವಲೀಲಾ ಹೆಚ್ಚು ರಂಪಾಟವಿಲ್ಲದೇ, ಈ ನಿರ್ಧಾರವನ್ನು ತೆಗೆದುಕೊಂಡಿದ್ದಾಳೆ. ಅವಳ ನಿರ್ಧಾರದ ಹಿನ್ನೆಲೆಯಲ್ಲಿ ರಂಪ, ನೋವು, ಚೀರಾಟ, ವಿಧಿಯೇ ಹೀಗೇಕೆ ಮಾಡಿದೆ ಎನ್ನುವ ಪ್ರಶ್ನೆಗಳೆಲ್ಲ ಪ್ರಕಟವಾಗಿ ಗೋಚರಿಸುವುದಿಲ್ಲ. ಸಾಧ್ಯವಾದಷ್ಟು ಅಪ್ಪ ಅಮ್ಮನನ್ನು ನೋಯಿಸಬಾರದು ಎಂಬ ಅವಳ ಮನದ ಆಶಯವಷ್ಟೇ ಕಾದಂಬರಿಯಲ್ಲಿ ಪ್ರಕಟವಾಗಿ ಕಾಣುತ್ತದೆ.

ಇದೇ ಪ್ರೌಢತೆ ಮತ್ತು ವಿವೇಕವು ಅಕ್ಕಮ್ಮನ ಧೋರಣೆಯಲ್ಲಿಯೂ ಕಾಣಿಸುತ್ತದೆ. ಲಂಪಟನಾದ ಗಂಡನ ವರ್ತನೆಯು ದಾಂಪತ್ಯದ ಅಡಿಪಾಯವಾದ ನಂಬಿಕೆಯನ್ನೇ ಕುಸಿದು ಬೀಳುವಂತೆ ಮಾಡುತ್ತಿರುವಾಗ, ಆಕೆ ಅನುಭವಿಸುವ ಅವಮಾನ ಅಷ್ಟಿಷ್ಟಲ್ಲ. ಕೊನೆಗೆ ತನ್ನ ನಿರ್ಧಾರದ ನೋವನ್ನು ಯಾರೊಡನೆಯೂ ಹಂಚಿಕೊಳ್ಳುವ ಗೊಡವೆಗೇ ಅವಳು ಹೋಗುವುದಿಲ್ಲ.

ಶಿವಲೀಲಾ ಮತ್ತು ಅಕ್ಕಮ್ಮ ಸಂದರ್ಭಗಳನ್ನು ವಿವೇಕದಿಂದ ನಿಭಾಯಿಸಿದ್ದಾರೆ ಎಂದು ಕಾಣಿಸಿದರೆ, ಅದು ಶ್ರೀದೇವಿ ವಿಚಾರದಲ್ಲಿ ಹಾಗೆ ಕಾಣಿಸುವುದಿಲ್ಲ. ಅವಳು ತನ್ನ ಬದುಕಿನ ಒಡಕುಗಳನ್ನು ಮುಚ್ಚಿಕೊಳ್ಳುತ್ತಾಳೆ ನಿಜ. ಆದರೆ ಅವಳೇ ತೆಗೆದುಕೊಳ್ಳುವ ಅಂತಹ ನಿರ್ಧಾರಗಳು ಅವಳಲ್ಲಿ ಕ್ಷೇಮ ಭಾವವನ್ನು ಮೂಡಿಸುವುದಿಲ್ಲ.

ಜಗತ್ತಿನಲ್ಲಿ ಬದಲಾವಣೆ ಎಂಬುದನ್ನು ಒಂದು 'ಸಾರ್ಥ' ಎಂದು ಪರಿಭಾವಿಸುವುದಾದರೆ, ಈ ಸಾಲಿನ ಮುಂಭಾಗದಲ್ಲಿ ಇರುವವರು ಎದುರಿಸುವ ಸವಾಲುಗಳು ಬೇರೆಯದೇ ಆಗಿರುತ್ತವೆ, ಹಿಂದಿನಿಂದ ಅನುಸರಿಸಿಕೊಂಡು, ದಾರಿಯನ್ನು ವಿಸ್ತರಿಸಿಕೊಂಡು ಹೋಗುವವರಿಗೆ ಎದುರಾಗುವ ಸವಾಲುಗಳು ಬೇರೆಯದೇ

ಆಗಿರುತ್ತವೆ. ಅಂದರೆ ಈ ಶತಮಾನದ ಆದಿಭಾಗದಲ್ಲಿ ನಮ್ಮ ಅಜ್ಜಿ, ಅಮ್ಮಂದಿರು ಮನೆಯ ಹೊಸಿಲು ದಾಟುವುದೇ ಕಷ್ಟವಾಗಿತ್ತು. ಹಾಗೆ ದಾಟಿ ಬರುವುದನ್ನೇ ಅವರೆಲ್ಲ ಸಾಧ್ಯವಾಗಿಸಿಕೊಂಡಿದ್ದರಿಂದ, ನಂತರದ ತಲೆಮಾರಿನ ಹೆಣ್ಮಕ್ಕಳು, ಹೊಸಿಲು ದಾಟಿದ ಬಳಿಕ ಎದುರಾಗುವ ಪ್ರಶ್ನೆಗಳನ್ನು ಸವಾಲುಗಳನ್ನು ಎದುರಿಸುತ್ತ, ಉತ್ತರಿಸುತ್ತ ತಮ್ಮ ದಾರಿಯನ್ನು ವಿಸ್ತರಿಸಿಕೊಂಡರು. ಉದ್ಯೋಗಕ್ಕೂ ಹೋಗಿ, ಮನೆಯನ್ನೂ ನಿಭಾಯಿಸಿ ಕೊಂಡು, ಆರ್ಥಿಕವಾಗಿ ಸಂಪಾದನೆ ಇದ್ದರೂ, ಅದನ್ನು ಬೇಕಾದ ಹಾಗೆ ಖರ್ಚು ಮಾಡುವ ಸ್ವಾತಂತ್ರ್ಯವಿಲ್ಲದೇ ನಮ್ಮ ಹಿಂದಿನ ತಲೆಮಾರಿನವರು ಹೋರಾಟದ ಜೀವನವನ್ನೇ ಮಾಡುತ್ತ ಬಂದರು. ಅವರ ಹೋರಾಟದ ಫಲವೇನೋ ಎಂಬಂತೆ ಈ ಪರಿಸ್ಥಿತಿಯು ಇಂದು ಇನ್ನೂ ಮುಂದುವರೆದು ಆರ್ಥಿಕ ಸ್ವಾತಂತ್ರ್ಯವೂ ದೊರೆಯುವ ಸಂದರ್ಭ ಎದುರಾಗಿದೆ.

ಬದಲಾವಣೆಯ ವಿಷಯಕ್ಕೆ ಬಂದಾಗ ಅಥವಾ ನಿರ್ದಿಷ್ಟವಾಗಿ ಮಹಿಳಾ ಸ್ವಾತಂತ್ರ್ಯದ ವಿಷಯಕ್ಕೆ ಬಂದಾಗ, 'ಸಂಕ್ರಮಣ' ಕಾಲ ಎನ್ನುವುದು ಒಂದು ಅವಧಿಗೆ ಸೀಮಿತವಾಗಿ ಇರುವುದಿಲ್ಲ. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಅಥವಾ ನಗರದಲ್ಲಿಯೂ ಆಗಿರಬಹುದು ಸಂಪ್ರದಾಯಸ್ಥ ಪರಿಸರಗಳಲ್ಲಿ ಮಹಿಳೆಯರು ಹೊಸಿಲು ದಾಟಿ ಹೋಗುವುದು ಸುಲಭವಲ್ಲ. ಅದೇ ವೇಳೆಗೆ ಇಂದು 'ನಮ್ಮ ಬದುಕು ನಮ್ಮ ಮರ್ಜಿ' ಎನ್ನುವ ನಿಟ್ಟಿನಲ್ಲಿ ಜೀವನ ಮಾಡುವ, ಸಾಧನೆಗಳ ಮೆಟ್ಟಿಲೇರುತ್ತ ಹೋಗುವ ಅವಕಾಶಗಳು ಮಹಿಳೆಯರಿಗೆ ಲಭ್ಯವಿದೆ. ಇದೊಂಥರಾ 'ಗ್ರೇ ಏರಿಯಾ'ವೊಂದರ ಸಂಕೇತವೆನ್ನಬಹುದು.

ಹಾಗಾಗಿ ಕಣ್ಣ ಮುಂದಿರುವ ಸಿಂಗಲ್ ಪೇರೆಂಟಿಂಗ್, ಸಿಂಗಲ್ ಮದರ್, ಲಿವ್ ಇನ್ ರಿಲೇಷನ್‌ಶಿಪ್ ಎಂಬ ಆಧುನಿಕ ಪರಿಕಲ್ಪನೆಗಳನ್ನು ಕಾದಂಬರಿಕಾರರು ಮೂವರು ಮಹಿಳೆಯರ ಮೂಲಕ ಪ್ರಸ್ತುತಪಡಿಸಿದ್ದಾರೆ.

'ನಮಗ್ಯಾಕ ದಾಕ್ಷಾಯಿಣಿ, ಏನೋ ಮಕ್ಕಳು ಮನಗೆ ಬಂದಾರ. ನಾಕು ಮಾತು ಕುಂತು ಆಡ್ತಿದಾರ. ಅಷ್ಟೇ ಖುಷಿ ಪಡದು ಬೇಶು. ನಮ್ಮ ಕಾಲ ಬ್ಯಾರೆ, ಅವರ ಕಾಲ ಬ್ಯಾರೆ ಅಂತ ನೀನೇ ಹೇಳ್ತಿದಿ' ಎನ್ನುವ ಪಾರ್ವತಿ. 'ಐ ಆಮ್ ಫೈನ್ ಅಂಡ್ ಫ್ರೀ' ಎನ್ನುವ ಶಿವಲೀಲಾ ಮಾತು ಗಮನಿಸಬಹುದು. ತಾವು ಆಯ್ಕೆ ಮಾಡಿಕೊಂಡ ದಾರಿಗಳ ಬಗ್ಗೆ ಅವರು ದುಸುಮುಸು ಇರಿಸಿಕೊಂಡು ಪರಿಸ್ಥಿತಿ ಕೊಳೆತು ಹೋಗದಂತೆ ಎಚ್ಚರವಹಿಸಿದ್ದಾರೆ. ಸ್ವೀಕಾರ ಮನೋಭಾವನೆಯು ಆತ್ಮವಿಶ್ವಾಸದ ಜೊತೆಗಿದೆ.

ಒಟ್ಟಿನಲ್ಲಿ ಆಧುನಿಕ ಸಮಾಜದಲ್ಲಿರುವ ಹೊಸ ಪರಿಕಲ್ಪನೆಗಳ ಪ್ರಸ್ತುತಪಡಿಸುವಿಕೆಯು ಎಷ್ಟು ಸುಂದರವಾಗಿದೆ ಎಂದರೆ ನಿರೂಪಕನು ಎಲ್ಲಿಯೂ ನಿರ್ಧಾರಗಳನ್ನು, ತೀರ್ಪುಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಹೀಗೆಲ್ಲ ಪರಿಸ್ಥಿತಿಗಳಿವೆ ಎಂದು ಹೇಳುತ್ತ, ಮೂರೂ ವಿಚಾರಗಳು ಪಾತ್ರಗಳ ಮೂಲಕ ಅನಾವರಣಗೊಳ್ಳುತ್ತ

ಹೋಗುತ್ತವೆ. ಕಥೆಯ ನಡಿಗೆಯೇ ಓದುಗರಲ್ಲಿ ಅವಿತಿರುವ ವಿವೇಚನೆಯನ್ನು ಅರಳುವಂತೆ ಮಾಡುತ್ತದೆ.

ದೇವನೂರ ಮಹಾದೇವ ಅವರ 'ಅಮಾಸ' ಕತೆಯಲ್ಲಿ ಕುರಿಯಯ್ಯ ಮತ್ತು ಅಮಾಸನ ಚಿತ್ರಣವನ್ನು ಮಾಡುವ ದೇವನೂರ ಎಲ್ಲಿಯೂ, 'ಇದೊಂದು ಶೋಷಣೆ, ಇದು ಸರಿಯಾಗಬೇಕು, ಕ್ರಾಂತಿಯಾಗಬೇಕು' ಎಂಬ ಘೋಷಣೆಯನ್ನೇನೂ ವಾಚ್ಯವಾಗಿ ಮಾಡುವುದಿಲ್ಲ. ಆದರೆ ಅಮಾಸ ಕತೆಯನ್ನು ಓದುವಾಗ, ಪರಿಸ್ಥಿತಿ ಸುಧಾರಣೆ ಯಾಗಬೇಕು ಎನ್ನುವ ಭಾವನೆಯು ಓದುಗನ ಮನಸ್ಸಿನಲ್ಲಿ ಮೂಡದೇ ಇರುವುದು ಸಾಧ್ಯವಿಲ್ಲ ಅಲ್ಲವೇ. ಹಾಗೇಯೇ **ಗೌರಿಯರು** ಕಾದಂಬರಿಯಲ್ಲಿ ಕಥೆಯ ನಡಿಗೆಯು ಸಾಗಿದೆ.

ಸಾಹಿತ್ಯ ಕೃತಿಯೊಂದು ಓದುಗನನ್ನು 'ಒಮ್ಮೆ ಯೋಚಿಸಬೇಕಾದ ವಿಷಯ' ಎಂದು ಪರಿಭಾವಿಸುವಂತೆ ಮಾಡಿದರೆ ಅದಕ್ಕಿಂತ ದೊಡ್ಡ ಯಶಸ್ಸು ಬೇರೇನಿದೆ. ಉಳಿದಂತೆ ಚರ್ಚೆಗೆ ಅರ್ಹವಾದ ವಿಚಾರಗಳು ಹಲವಾರು ಇರಬಹುದು.

ಹೀಗೆ ನಡೆಯುವ ಕತೆಯಲ್ಲಿ ಗಂಡು ಪ್ರಪಂಚಕ್ಕೆ ಬುದ್ಧಿವಾದ ಹೇಳುವ ಗೊಡವೆಗೆ ಅಥವಾ 'ಅವನಿಗೆ ಕೊನೆಗೆ ಇಂಥಾ ಗತಿ ಬಂತು ನೋಡು' ಎಂದು ಸಾಬೀತುಪಡಿಸುವ ಹಠಕ್ಕೆ ನಿರೂಪಕ ಹೋಗುವುದೇ ಇಲ್ಲ. 'ನನ್ನ ಪಾಲಿಗೆ ಬಂದ ಬಾಳುವೆಯನ್ನು ನಾನು ಚೆಂದಾಗಿ ಬಾಳುತ್ತೇನೆ' ಎನ್ನುವ ನಿರ್ಧಾರಗಳು ಮತ್ತು ಆ ನಿಟ್ಟಿನಲ್ಲಿ ಮಾಡುವ ಪ್ರಯತ್ನಗಳೇ ಇತರರಿಗೆ ಬೇಕಿದ್ದರೆ ಪಾಠವಾಗಬಹುದು. ಅದು ಅವರ ಬದುಕು ಎನ್ನುವ ಸ್ಪೇಸ್ ಅನ್ನು ಈ ಕಾದಂಬರಿಯು ಕಲ್ಪಿಸಿದೆ.

ಇದೆಲ್ಲದಕ್ಕೂ ಕಾರಣವಾದ ಮುಖ್ಯ ಅಂಶವೇ ಕಾದಂಬರಿ ಉದ್ದಕ್ಕೂ ಕಾಣುವ 'ತಾಯಿ ಹೃದಯ'. ಅದುವೇ ನಾನು ಆರಂಭದಲ್ಲಿ ಹೇಳಿದ 'ಮಹಾಗೌರಿ'. ತಾಯಿ ಹೃದಯದ ಯೋಚನೆಯು ಒಂದಿಷ್ಟೂ ಊನವಿಲ್ಲದೇ ಕತೆಯಲ್ಲಿ ಸಾಗುತ್ತದೆ. ಅದನ್ನು ಹೆಚ್ಚಾಗಿ ಪ್ರತಿನಿಧಿಸುವುದು ಶಿವಲೀಲಾ ಅಲ್ಲ, ಪಾರ್ವತಿ ಅಲ್ಲ, ಅಕ್ಕಮ್ಮ ದಾಕ್ಷಾಯಿಣಿ ಯರಲ್ಲ. ಬದಲಾಗಿ ಸದಾಶಿವಪ್ಪ.

ಕಥೆಯನ್ನು ನಡೆಸಿಕೊಂಡು ಹೋಗುವ ಸಂದರ್ಭದಲ್ಲಿ ಬಳಸುವ ಭಾಷೆಯೇ ಪರೋಕ್ಷವಾಗಿ ಒಂದು 'ಒಳ್ಳೆಯತನ'ದ ಭಾವವನ್ನು ಕಟ್ಟಿಕೊಡಲು ಪ್ರಯತ್ನಿಸುತ್ತದೆ. ಅದನ್ನು ಇನ್ನೂ ಸ್ಪಷ್ಟಪಡಿಸಲು ಕೆಲವು ಉದಾಹರಣೆಗಳನ್ನು ನೋಡಬಹುದು.

ಅಷ್ಟೊಂದು ಹೆಣ್ಣುಮಕ್ಕಳು ಸೇರಿ ನೋಪಿ ಪೂಜೆಗೆ ತಯಾರಿ ಮಾಡಿ ಕೊಳ್ಳುತ್ತಿರುವಾಗ, ಯಾರೂ ಯಾರ ಮೇಲೆಯೂ ದೂರು ಹೇಳುವುದೇ ಇಲ್ಲ. ಪರಸ್ಪರ ಒಡಕಿನ ದುಃಖದ ಮಾತುಗಳು, ಆರೋಪದ ಮಾತುಗಳು ಕೇಳುವುದೇ ಇಲ್ಲ. ತನ್ನ ಮಗಳ ಬಾಳುವೆಗೆ ಕುತ್ತಾದ ಚೆನ್ನಮ್ಮನ ಬಗ್ಗೆಯೂ ಒಂದಿನಿತೂ ಒಡಕಿನ ಮಾತು ಎಲ್ಲಿಯೂ ಯಾರ ಬಾಯಲ್ಲೂ ಬರುವುದಿಲ್ಲ.

ವೈಯಕ್ತಿಕ ಬದುಕಿನಲ್ಲಿ ಎಲ್ಲರೂ ಒಟ್ಟಾಗಿ ಚೆಂದಾಗಿ ಬಾಳುವೆ ಮಾಡಬೇಕು ಎಂಬ ಆಶಯದ ಪ್ರತೀಕವಾಗಿಯೇ ನೋಪಿ ಪೂಜೆಯು ಎಲ್ಲರ ನಿರೀಕ್ಷೆಯಾಗಿ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಸೆವೆನ್ ಸಿಸ್ಟರ್ಸ್ ಹಕ್ಕಿಗಳ ಉಲ್ಲೇಖವೂ ಅದೇ ಮಾದರಿಯ ರೂಪಕವಾಗಿ ಕಾಣಿಸುತ್ತದೆ. ಅವುಗಳೆಲ್ಲ ಲೆಕ್ಕ ಎಂಬ ತರ್ಕಕ್ಕೆ ಸಿಗುವಂತಹವು ಅಲ್ಲ. ಬದುಕೂ ಅಷ್ಟೇ ತಾನೇ, ಎಲ್ಲಿಯೂ ತರ್ಕದ ಹಂಗಿಗೆ ಬೀಳುವುದೇ ಇಲ್ಲ. ನಾವು ಮಾತ್ರ ತರ್ಕದ ಬಲೆ ಹಿಡಿದು, ನಮ್ಮ ಅಹಂನ್ನು ತಣಿಸಿಕೊಳ್ಳಲು ಪ್ರಯತ್ನಿಸುತ್ತಾ ಇರುತ್ತೇವೆ.

'ಇವತ್ತು ಗೌರಮ್ಮನಿಗೆ ನೋಪಿ ಪೂಜೆ ಮುಗಿತದಲ್ಲ. ನಾಳೆ ನಮ್ಮೂರಿಗೆ ಹೋಗಮು. ನೀನು ನಿನ್ನ ಕಾರ್ನಲ್ಲಿ ನನ್ನ ಕೂಡಿಸಿಕೊಂಡು ಬಾ. ಅಕ್ಕನ್ನ ಕರೀತೀನಿ. ಶಿವಲೀಲಾ, ಶ್ರೀದೇವಿನ ಕರೀತಿನಿ. ಬಂದ್ರ ಎಲ್ಲರನ್ನ ಕರಕೊಂಡು ಊರಿಗೆ ಹೋದ್ರ ನಿನ್ನ ಚಿಕ್ಕಪ್ಪ ಎಲ್ಲರನ್ನ ನೋಡಿ ಹಿಗ್ಗಿಬಿಡುತ್ತಾನ. ನಿನ್ನ, ನಿನ್ನ ಕಾರನ್ನು, ನೀನು ಓಡಿಸುವುದನ್ನು ನೋಡಿ ಖುಷಿಯಾಗ್ತನಂದ್ರ ಹೇಳಲಾಸಾಲ. ಅಕ್ಕಮ್ಮ, ಮಗನ್ನ, ಸೊಸೆನ್ನ ಕರೆಸ್ತೀನಿ. ಹೋಗೋಮಾ ಏನಂತಿದ್ದೀ..'

ಹೀಗೆ ಒಟ್ಟಾಗಿರೋಣ ಎಂದು ಹಿರಿಯ ತಲೆಮಾರಿನವರು ಆಗಾಗ ಹೇಳುವ ಮಾತುಗಳು ಕಾದಂಬರಿ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಹಾಗೆ ಒಟ್ಟಾಗಿರುವುದಕ್ಕೆ ಬೇಕಾಗುವ ಮೂಲ ಗುಣವೆಂದರೆ, ಇನ್ನೊಬ್ಬರ ಬಗ್ಗೆ ನ್ಯಾಯ ತೀರ್ಪುಗಳನ್ನು ಕೊಡದೇ ಅವರ ನಡೆಗಳನ್ನು ಗೌರವಿಸುವುದು. ಈ ಸ್ವಭಾವದ ಮೂಲ ಸ್ರೋತವಿರುವುದು ಸದಾಶಿವಪ್ಪನ ಬಳಿ. ಅವನನ್ನು ಅನುಸರಿಸುವ ಪಾರ್ವತಿ, ತಮ್ಮ ಶಿವಲಿಂಗಪ್ಪ. ಹೀಗೆ ಈ ಆಶಯವು ಕಾದಂಬರಿಯಲ್ಲಿ ಸಾಧ್ಯವಿರುವ ಎಲ್ಲ ಪಾತ್ರಗಳ ಚಿತ್ರಣಗಳಲ್ಲಿ ಇಷ್ಟಿಷ್ಟಾದರೂ ಕಾಣಿಸುತ್ತದೆ. ಅದುವೇ ಕಾದಂಬರಿಯ ಬಂಧವನ್ನು ಬಿಗಿ ಮಾಡಿದ, ಓದುವಿಕೆಗೆ ಖುಷಿಯ ಲೇಪವನ್ನು ಹಚ್ಚಿದ ವಿಚಾರ ಎನಿಸುತ್ತದೆ.

◆◆

೬

'ಗೌರಿಯರು' : ಹೆಣ್ಣು ನೋಟದ ದಿಟ್ಟ ಕಥನ

ಸುಭಾಷ್ ರಾಜಮಾನೆ

ಕನ್ನಡದ ಹೆಸರಾಂತ ಸಣ್ಣ ಕತೆಗಾರರಾದ ಅಮರೇಶ ನುಗಡೋಣಿ ಅವರ ಹೊಸ ಕಾದಂಬರಿ **ಗೌರಿಯರು** ಈಚೆಗಷ್ಟೇ ಪ್ರಕಟವಾಗಿದೆ. ಇದರ ಶಿರೋನಾಮೆಯೇ ಹೇಳುವಂತೆ ಸ್ತ್ರೀಸಂವೇದನೆಯನ್ನು ಕೇಂದ್ರಸ್ಥಾಯಿಯನ್ನಾಗಿ ರೂಪಿಸಿಕೊಂಡಿದೆ. ಕಾದಂಬರಿಯು ಪ್ರಧಾನವಾಗಿ ಗಂಡು-ಹೆಣ್ಣಿನ ದಾಂಪತ್ಯದ ಬಿರುಕುಗಳನ್ನು ಚಿತ್ರಿಸಿದೆ; ಹೆಣ್ಣು ಪಾತ್ರಗಳಿಂದ ದಾಂಪತ್ಯದ ವಿರಸವನ್ನು ವಿವಿಧ ನೆಲೆಗಳಲ್ಲಿ ಮುಖಾಮುಖಿ ಯಾಗಿದೆ. ಇದರ ಜೊತೆಯಲ್ಲಿ ಹಲವು ಕತೆಗಳು ಕೂಡ ಸೇರಿಕೊಂಡಿವೆ. ಈ ಕಾದಂಬರಿಯ ಕನ್ನಡಿಯಲ್ಲಿ ನಮ್ಮದೇ ಕಾಲಘಟ್ಟದ ಪರಿವರ್ತನಶೀಲ ಪಾತ್ರಗಳನ್ನು ನೋಡಬಹುದಾಗಿದೆ.

ಅಮರೇಶ ನುಗಡೋಣಿಯವರು ಕಳೆದ ಮೂವತ್ತು ವರ್ಷಗಳಿಂದ ಕನ್ನಡದಲ್ಲಿ ಸಣ್ಣ ಕತೆಗಳನ್ನು ಬರೆಯುತ್ತ ಬಂದಿದ್ದಾರೆ. ಅವರು ಕನ್ನಡ ಸಾಹಿತ್ಯಕ್ಕೆ ಹಲವು ಮಹತ್ವಪೂರ್ಣ ಕತೆಗಳನ್ನು ಕೊಟ್ಟಿದ್ದಾರೆ. ಅವರ ಕತೆಗಳು ಕಾದಂಬರಿಯಂತಿವೆ ಎಂದು ಹೇಳಿದ ವಿಮರ್ಶಕರೊಬ್ಬರ ಮಾತನ್ನು ನೆಚ್ಚಿಕೊಂಡು ಕಾದಂಬರಿಯ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದನ್ನು ಹೇಳಿಕೊಂಡಿದ್ದಾರೆ. ಕಳೆದ ವರ್ಷವಷ್ಟೇ 'ದಂದುಗ' ಪ್ರಕಟಿಸುವುದರ ಮೂಲಕ ನುಗಡೋಣಿಯವರು ಕಾದಂಬರಿ ಲೋಕಕ್ಕೆ ಹೆಜ್ಜೆ ಇಟ್ಟಿದ್ದಾರೆ. ಈಗ **ಗೌರಿಯರು** ಕೃತಿಯಲ್ಲಿ ಕಾದಂಬರಿಯ ವಸ್ತು ಮತ್ತು ವಿನ್ಯಾಸವನ್ನು ಕಂಡುಕೊಳ್ಳುವ ಹುಡುಕಾಟದಲ್ಲಿದ್ದಾರೆ. ಸಣ್ಣ ಕತೆಗಳಿಂದ ಬಿಡಿಸಿಕೊಂಡು ಬದುಕಿನ ವಿಸ್ತಾರತೆ ಹಾಗೂ ಸಂಕೀರ್ಣತೆಯನ್ನು ಶೋಧಿಸಲು ಅವಕಾಶವಿರುವ ಕಾದಂಬರಿ ಪ್ರಕಾರದಲ್ಲಿ ಅವರು ಪ್ರಯತ್ನಿಸುತ್ತಿರುವಂತಿದೆ.

ವಾಸ್ತವವಾದಿ ಕಾದಂಬರಿಯಲ್ಲಿ ಕಾಲ ಹಾಗೂ ದೇಶಕ್ಕೆ ಸಂಬಂಧಿಸಿದಂತೆ

ಕತೆಯನ್ನು ನಿರೂಪಿಸುವುದಕ್ಕೆ ಹಲವು ಬಗೆಯ ದಾರಿಗಳಿರುತ್ತವೆ. ಇಲ್ಲಿ ಕಾದಂಬರಿಕಾರರು ಕಥನಕ್ಕಾಗಿ ಒಂದು ದಿನದ ಅವಧಿಯನ್ನು ಆಯ್ದುಕೊಂಡಿದ್ದು ವಿಶೇಷವಾಗಿದೆ. ಈ ಕಿರು ಅವಧಿಯಲ್ಲಿಯೇ ಪ್ರಧಾನ ಕಥಾನಕದ ಜೊತೆಯಲ್ಲಿ ಕೆಲವರ ನೆನಪುಗಳಿಂದ ಕೆಲವು ಕತೆಗಳು ಹರಿದಾಡಿವೆ. ಶಿವಲೀಲಾ, ಅಕ್ಕಮ್ಮ ಹಾಗೂ ಶ್ರೀದೇವಿ–ಇವು ಕಥನದ ಮುಖ್ಯ ಪಾತ್ರಗಳು. ಈ ಅಕ್ಕತಂಗಿಯರು ಹೆಚ್ಚಿನ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ನಗರಗಳನ್ನು ಸೇರಿರುತ್ತಾರೆ. ಆದರೆ ತಮ್ಮ ಬಾಲ್ಯವನ್ನು ಹಳ್ಳಿಯಲ್ಲಿಯೇ ಕಳೆದಿರುತ್ತಾರೆ; ನಾಲ್ಕೈದು ವರ್ಷಗಳ ತರುವಾಯದಲ್ಲಿ ತಮ್ಮ ಅಪ್ಪ–ಅಮ್ಮರನ್ನು ಕಾಣಲು ಹಳ್ಳಿಗೆ ಬರುತ್ತಾರೆ; ಇವರನ್ನು ಕರೆಸಲು ಗೌರಿ ನೋಪಿ ಪೂಜೆಯು ಒಂದು ನೆಪವಾಗಿರುತ್ತದೆ. ಒಂದೆಡೆ ನೋಪಿ ಪೂಜೆಯ ಸಿದ್ಧತೆಗಳು ಭರದಿಂದ ಸಾಗುತ್ತವೆ; ಇನ್ನೊಂದೆಡೆ ಈ ಮಹಿಳೆಯರು ತಮ್ಮ ವೈವಾಹಿಕ ಬದುಕು ಛಿದ್ರಗೊಂಡಿರುವುದನ್ನು ನಿವೇದಿಸಿಕೊಳ್ಳುತ್ತಾರೆ. ಇವರು ತಮ್ಮದಲ್ಲದ ತಪ್ಪುಗಳಿಗೆ ಪರಿತಪಿಸುವ ಸನ್ನಿವೇಶಗಳು ಮನಕಲಕುತ್ತವೆ.

ಸದಾಶಿವಪ್ಪನವರೇ ತಮ್ಮ ಹಿರಿಯ ಮಗಳಾದ ಶಿವಲೀಲಾಳಿಗೆ ಮದುವೆಯ ಹುಡುಗನನ್ನು ನಿರ್ಧರಿಸುತ್ತಾರೆ. ಅಪ್ಪ ನೋಡಿದ ಹುಡುಗನನ್ನು ಶಿವಲೀಲಾ ಒಪ್ಪಿಕೊಳ್ಳುತ್ತಾಳೆ. ಮದುವೆಯಾದ ಕೆಲವು ತಿಂಗಳುಗಳಲ್ಲಿಯೇ ಗಂಡ–ಹೆಂಡಿರಲ್ಲಿ ವೈಮನಸ್ಸು ಉಂಟಾಗುತ್ತದೆ. ಯಾಕೆಂದರೆ ಗಂಡನೇ ಕುಟುಂಬದಲ್ಲಿ ಎಲ್ಲ ನಿರ್ಣಯಗಳನ್ನು ಕೈಗೊಳ್ಳುವವನಾಗಿರುತ್ತಾನೆ. ಇದರಿಂದಾಗಿ ಶಿವಲೀಲಾಳ ಆರ್ಥಿಕ ಸ್ವಾತಂತ್ರ್ಯ ಹರಣವಾಗುತ್ತದೆ. ಆಕೆ ಗಂಡನ ಕುಟುಂಬದವರಿಗಾಗಿಯೇ ದುಡಿಯುವಂತಾಗುತ್ತದೆ. ತಾನು ಗರ್ಭಿಣಿ ಎಂದು ಹೇಳಿದಾಗಲೂ ಗಂಡ ಪ್ರೀತಿಯಿಂದ ಸ್ಪಂದಿಸುವುದಿಲ್ಲ. ಪುರುಷ ಪ್ರಧಾನತೆಯ ಹಿಂಸೆ, ಕಿರುಕುಳ, ಕ್ರೌರ್ಯಗಳಿಂದ ಶಿವಲೀಲಾ ರೋಸಿ ಹೋಗುತ್ತಾಳೆ. ಆಕೆಯ ಮನಸ್ಸು ಕದಡಿದ ನೀರಿನಂತೆ ಪ್ರಕ್ಷುಬ್ಧವಾಗುತ್ತದೆ. ಇದರಿಂದ ವಿಮೋಚಿತಳಾಗಲು ನಿರ್ಧರಿಸುತ್ತಾಳೆ. ಸ್ವತಂತ್ರ ಬದುಕಿಗಾಗಿ ವಿಚ್ಛೇದನದ ಮೊರೆ ಹೋಗುತ್ತಾಳೆ. ಧೈರ್ಯದಿಂದ ಏಕಾಂಗಿಯಾಗಿಯೇ ತಾನು ಹೆತ್ತ ಮಗುವಿನ ಲಾಲನೆ–ಪಾಲನೆಯ ಸಂಪೂರ್ಣ ಹೊಣೆಯನ್ನು ಹೊರುತ್ತಾಳೆ. ಈ ಹಿನ್ನೆಲೆಯಲ್ಲಿ ಶಿವಲೀಲಾ ದಿಟ್ಟತನದ ಹೆಣ್ಣಾಗಿ ತೋರುತ್ತಾಳೆ.

ಕಾದಂಬರಿಯಲ್ಲಿ ಮತ್ತೊಂದು ಪ್ರಮುಖ ಪಾತ್ರ ಅಕ್ಕಮ್ಮಳದ್ದು. ಬ್ಯಾಂಕ್ ಉದ್ಯೋಗಿಯಾಗಿರುವ ಅಕ್ಕಮ್ಮಗೆ ಕಾಲೇಜು ಉಪನ್ಯಾಸಕನೊಬ್ಬನ ಪರಿಚಯವಾಗುತ್ತದೆ. ಇದು ಸ್ನೇಹಕ್ಕೆ ತಿರುಗುತ್ತದೆ; ಸ್ನೇಹವು ಪ್ರೇಮವಾಗಿ ರೂಪಾಂತರವಾಗುತ್ತದೆ. ಅಕ್ಕಮ್ಮ ತನ್ನ ತಾಯಿ–ತಂದೆಯರ ಹಂಗಿಲ್ಲದೆ ತಾನು ಮದುವೆಯಾಗುವ ಹುಡುಗನನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ತಾನಾಗಿಯೇ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಷ್ಟು ಪ್ರಬುದ್ಧಳಾಗಿ ಕಾಣುತ್ತಾಳೆ. ಅಕ್ಕಮ್ಮ ಆತನೊಂದಿಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ

ಮದುವೆಯಾಗುತ್ತಾಳೆ; ಈ ಸಂಗತಿಯನ್ನು ನಂತರದಲ್ಲಿ ತಾಯಿ-ತಂದೆಯರಿಗೆ ತಿಳಿಸುತ್ತಾಳೆ. ಕೆಲವೇ ದಿನಗಳಲ್ಲಿ ತಾನು ಮದುವೆಯಾದ ಹುಡುಗ ಲಂಪಟನೆಂದು ತಿಳಿಯುತ್ತದೆ. ಮನೆಗೆಲಸದ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ್ದು ಅಕ್ಕಮ್ಮಳ ಗಮನಕ್ಕೆ ಬರುತ್ತದೆ. ಕಾಲೇಜಿನಲ್ಲಿಯು ಆತನ ಮೇಲೆ ಲೈಂಗಿಕ ದೌರ್ಜನ್ಯದ ಆಪಾದನೆಗಳು ಕೇಳಿ ಬರುತ್ತವೆ. ಇದರಿಂದ ಅಕ್ಕಮ್ಮ ಆಘಾತಕ್ಕೆ ಒಳಗಾಗುತ್ತಾಳೆ. ಇವುಗಳ ಬಗ್ಗೆ ಪ್ರಶ್ನಿಸಿದಾಗ ಆತ ಕುಪಿತನಾಗಿ ಹೊರಟು ಹೋಗುತ್ತಾನೆ. ಅಕ್ಕಮ್ಮ ಆತನಿಂದ ವಿಚ್ಛೇದನ ಪಡೆಯುತ್ತಾಳೆ. ಇದರ ನಂತರದಲ್ಲಿ ಸಿದ್ಧಾರ್ಥ ಎಂಬ ಹುಡುಗನ ಪರಿಚಯವಾಗುತ್ತದೆ; ಆತನಿಂದ ಒಂದು ಮಗುವನ್ನು ಪಡೆಯುತ್ತಾಳೆ. ಆದರೆ ಹುಡುಗನ ತಂದೆ ತಾಯಿಗಳು ಈ ವಿಚ್ಛೇದಿತಳಾದ ಅಕ್ಕಮ್ಮಳನ್ನು ಮದುವೆಯಾಗಲು ಅಡ್ಡಿಯಾಗುತ್ತಾರೆ. ಹೀಗಾಗಿ ಅಕ್ಕಮ್ಮ ಸಿಂಗಲ್ ಮದರ್ ಆಗಿಯೇ ತನ್ನ ಮಗುವನ್ನು ಪೋಷಿಸುವ ಜವಾಬ್ದಾರಿ ಹೋರುತ್ತಾಳೆ.

ಕಾದಂಬರಿಯಲ್ಲಿ ಬರುವ ಮೂರನೇ ಮುಖ್ಯ ಪಾತ್ರವೆಂದರೆ ಶ್ರೀದೇವಿಯದ್ದು. ಈಕೆ ಕಾಲೇಜಿನಲ್ಲಿ ಸಹಾಯಕ ಅಧ್ಯಾಪಕಳಾಗಿ ಕೆಲಸಕ್ಕೆ ಸೇರುತ್ತಾಳೆ. ಈಕೆ ತುಂಬಾ ದುಡುಕಿನ ಸ್ವಭಾವದವಳಾಗಿರುತ್ತಾಳೆ. ಶ್ರೀದೇವಿ ತನ್ನ ಸಹೋದ್ಯೋಗಿ ಅರುಣನಿಂದ ಆಕರ್ಷಿತಳಾಗುತ್ತಾಳೆ. ಇಬ್ಬರೂ ಪರಸ್ಪರವಾಗಿ ಚರ್ಚಿಸಿ ಮದುವೆಯ ಬಂಧನ ಬೇಡವೆಂದು ತೀರ್ಮಾನಿಸಿಕೊಳ್ಳುತ್ತಾರೆ. 'ಒಲವಿನ ಕೂಟಕ್ಕೆ ಯಾವುದರ ಹಂಗು ಬೇಕಿಲ್ಲ' ಎನ್ನುವುದಕ್ಕೆ ಬದ್ಧರಾಗಿ 'ಲಿವ್ ಇನ್ ರಿಲೇಶನ್‌ಶಿಪ್'ನಲ್ಲಿ ಇರುತ್ತಾರೆ. ಆದರೆ ಶ್ರೀದೇವಿಯ ಕಟ್ಟಳೆಗಳು ಒಂದೊಂದಾಗಿ ಶುರುವಾಗುತ್ತವೆ. ಇಲ್ಲಿ ಹುಡುಗನೇ ಆಕೆಯ ವಿಚಿತ್ರ ನಡಾವಳಿಯಿಂದ ಪರಿತಪಿಸುವಂತಾಗುತ್ತದೆ. ಶ್ರೀದೇವಿಯೇ ವಿನಾಕಾರಣವಾಗಿ ಈ ಸಂಬಂಧವನ್ನು ಮುರಿದುಕೊಳ್ಳುತ್ತಾಳೆ. ಶ್ರೀದೇವಿಯ ನಿರ್ಧಾರಗಳು ಸ್ಥಿರವಾಗಿರುವುದಿಲ್ಲ; ಅವು ಬದಲಾಗುತ್ತಲೇ ಹೋಗುತ್ತವೆ. ಇವುಗಳ ಪರಿಣಾಮ ಅರುಣನ ಮೇಲಾಗುತ್ತದೆ. ಕಾದಂಬರಿಯಲ್ಲಿ ಈತನದ್ದು ಅತ್ಯಂತ ಅಮಾಯಕ ಪಾತ್ರವಾಗಿದೆ.

ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಾಗಿ ಬರುವ ಈ ಮೂವರು ಮಹಿಳೆಯರ ಸ್ಥೂಲವಾದ ಚಿತ್ರಣವಿದು. ಅವರ ಬದುಕಿನ ಘಟನೆಗಳು ಅವರ ನೆನಪುಗಳ ಮೂಲಕ ನಿರೂಪಿತವಾಗಿವೆ. ಮದುವೆಯು ಹೆಣ್ಣಿನ ಮನಸ್ಸು ಮತ್ತು ದೇಹವನ್ನು ಗಂಡಿನ ಸ್ವತ್ತಾಗಿಸುತ್ತದೆ. ಆದರೆ ತಮ್ಮದಲ್ಲದ ಕೃತ್ಯಗಳಿಂದ ಇವರ ಮನೋಸ್ಥೈರ್ಯ ಕುಗ್ಗಿ ಹೋಗುವಂತಾಗುತ್ತದೆ. ಗಂಡಸರು ಎಸಗುವ ಪ್ರಮಾದಗಳಿಂದ ತಾವು ಬಲಿಪಶುಗಳಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಗಂಡಸರಿಂದಾಗಿ ತಾವೇಕೆ ಇಂತಹ ಹೊರೆಯನ್ನು ಅನುಭವಿಸಬೇಕೆನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾರೆ. ಶಿವಲೀಲಾ ಮತ್ತು ಅಕ್ಕಮ್ಮ ತಮ್ಮ ಗಂಡಂದಿರನ್ನು ಪ್ರಶ್ನಿಸುವುದರಿಂದಲೇ ದಾಂಪತ್ಯದಲ್ಲಿ ಬಿರುಕು

ಬಿಡುತ್ತದೆ. ಅವರು ತಮ್ಮ ಗಂಡಂದಿರ ಮರ್ಜಿಗಾಗಿ ಕಾಯದೇ ಮದುವೆ ಸಂಬಂಧವನ್ನು ಮುರಿದುಕೊಂಡು ಹೊರ ಬೀಳುತ್ತಾರೆ. ಇವರ ಮೂಲಕ ಕಾದಂಬರಿ ಹೆಣ್ಣೋಟವನ್ನು ಮಂಡಿಸುತ್ತಿರುವುದು ಸ್ಪಷ್ಟವಾಗಿದೆ.

ಈ ಹಿನ್ನೆಲೆಯಲ್ಲಿ **ಗೌರಿಯರು** ಕೃತಿಯನ್ನು ಕನ್ನಡ ಕಾದಂಬರಿ ಪರಂಪರೆಯ ಭಿತ್ತಿಯಲ್ಲಿಟ್ಟು ನೋಡಿದರೆ ಕೊಂಚ ನಿರಾಶೆಯೇ ಆಗುತ್ತದೆ. ಮೂವರು ಮಹಿಳೆಯರು ವೈವಾಹಿಕ ಕಟ್ಟುಪಾಡುಗಳಿಂದ ಹೊರ ಬರುವುದರಲ್ಲಿ ಅವರ ಗಟ್ಟಿತನ ವ್ಯಕ್ತವಾಗಿದೆ. ಆದರೆ ಈ ಮಹಿಳೆಯರು ತಮ್ಮದೇ ಏಕಮುಖಿ ನಿಲುವುಗಳಿಗೆ ಬದ್ಧರಾಗುತ್ತಾರೆ. ಈ ಮಹಿಳೆಯರ ನಿಲುವುಗಳು ಪುರುಷ ಸಂಬಂಧಗಳನ್ನು ಬರಿ 'ಒಪ್ಪುವುದು' ಮತ್ತು 'ತಿರಸ್ಕರಿಸುವುದು'-ಎಂಬಷ್ಟಕ್ಕೆ ಸೀಮಿತವಾಗಿವೆ. ಅದರಲ್ಲಿಯೂ ಮುಖ್ಯವಾಗಿ ಶ್ರೀದೇವಿಯ ಒಪ್ಪುವಿಕೆ ಮತ್ತು ತಿರಸ್ಕಾರಕ್ಕೆ ಗುರಿಯಾಗುವ ಅರುಣನ ಪಾತ್ರ ಚಿತ್ರಣವು ತೀರ ಅಸಹಾಯಕನನ್ನಾಗಿಸಿದೆ. ಇಬ್ಬರು ಮಹಿಳೆಯರ ಬದುಕಿನಲ್ಲಿ ಬರುವ ಗಂಡುಗಳ ಸ್ವಭಾವ ಹಾಗೂ ನಡತೆಯನ್ನು ಕಾದಂಬರಿಯಲ್ಲಿ ಋಣಾತ್ಮಕವಾಗಿಯೇ ಚಿತ್ರಿತವಾಗಿದೆ. ಇಷ್ಟು ಸರಳೀಕರಣದ ನೆಲೆಯಲ್ಲಿ ಗಂಡು-ಹೆಣ್ಣಿನ ದೈಹಿಕ ಸಂಬಂಧಗಳನ್ನು ನೋಡುವುದು ಕೂಡ ಸಮಸ್ಯಾತ್ಮಕವಾಗಿದೆ.

ನುಗಡೋಣಿ ಅವರ ಅನೇಕ ಸಣ್ಣ ಕತೆಗಳಲ್ಲಿ ಹಳ್ಳಿಯ ಕೂಡು ಕುಟುಂಬಗಳು ವಿಘಟಿತವಾಗುವ ಬಗೆಯು ಅತ್ಯಂತ ಸೂಕ್ಷ್ಮವಾಗಿ ಹಾಗೂ ಪರಿಣಾಮಕಾರಿಯಾಗಿ ಬಂದಿದೆ. **ಗೌರಿಯರು** ಕಾದಂಬರಿಯು ಅವರ ಸಣ್ಣ ಕತೆಗಳಿಗಿಂತ ಯಾವ ರೀತಿಯಲ್ಲಿ ಭಿನ್ನವಾಗಿದೆ ಎನ್ನುವುದು ಕುತೂಹಲದ ಸಂಗತಿಯಾಗಿದೆ. ನುಗಡೋಣಿಯವರು ಕಾದಂಬರಿಯಲ್ಲಿ ಬೇರೆ ಬೇರೆ ಕಾರಣಗಳಿಂದ ಛಿದ್ರಗೊಂಡಿರುವ ಕೌಟುಂಬಿಕ ಸಂಬಂಧಗಳನ್ನು ಬೆಸೆಯುವ ಪ್ರಯತ್ನ ಮಾಡುತ್ತಾರೆ. ಪ್ರಾಯಶಃ ಈ ಕಾರಣಕ್ಕಾಗಿಯೇ ಸದಾಶಿವಪ್ಪನ ಪಾತ್ರವನ್ನು ವಿಸ್ತರಿಸಲಾಗಿದೆ. ಆತನೇ ಅನೇಕರಿಗೆ ಪೋಷಕನಾಗುತ್ತಾನೆ; ಆತನ ಉದಾರತೆಯ ಮತ್ತು ಮಾನವೀಯ ಕಾರಣಕ್ಕಾಗಿ ಮಲ್ಲಪ್ಪ ಹಾಗೂ ಎಲ್ಲಮ್ಮ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

ಲೇಖನದ ಆರಂಭದಲ್ಲಿ ಹೇಳಿದಂತೆ ಈ ಕಾದಂಬರಿಯಲ್ಲಿ ಪ್ರಧಾನ ಕಥನದ ಜೊತೆಯಲ್ಲಿ ಇನ್ನೂ ಹಲವು ಪಾತ್ರಗಳ ಕತೆಗಳು ಕೂಡ ಸೇರಿಕೊಂಡಿವೆ. ರೈತನಾಗಿ ಸೋತಿರುವ ಸದಾಶಿವಪ್ಪನ ತಮ್ಮ ಶಿವಲಿಂಗಪ್ಪನ ಕತೆಯಿದೆ; ಆತ್ಮಹತ್ಯೆ ಮಾಡಿಕೊಂಡ ಕಲ್ಯಾಣಿಯ ಗಂಡನ ಕತೆಯಿದೆ; ಶರಣಬಸವ ಸರ್ಕಾರಿ ನೌಕರಿಗಾಗಿ ನಡೆಸುವ ಪ್ರಯತ್ನದ ಕತೆಗೂ ಇಲ್ಲಿ ಜಾಗವಿದೆ; ಇವೆಲ್ಲ ಪಾತ್ರಗಳು ಕಾದಂಬರಿಯಲ್ಲಿ ಜೀವಂತಿಕೆಯಿಂದ ಮಿಡಿಯುತ್ತವೆ. ಆದರೆ ಪುಟ್ಟ ಕ್ಯಾನ್‌ವ್ಯಾಸ್ ಹೊಂದಿರುವ ಈ ಕಾದಂಬರಿಯಲ್ಲಿ ಪಾತ್ರಗಳು ಕಿಕ್ಕಿರಿದಿವೆ. ಓದುವಾಗ ಕೂಡ ಕೆಲವು ಪಾತ್ರಗಳ ಸಂಬಂಧವು ಅಲ್ಲಲ್ಲಿ ಕನೆಕ್ಟ್ ಮಾಡಿಕೊಳ್ಳುವುದು ಕಷ್ಟವೆನಿಸುತ್ತದೆ.

ಶ್ರೀದೇವಿ ತನ್ನೊಂದಿಗೆ ಕರೆದುಕೊಂಡು ಬಂದ ಮಂಜುಳಾ ಕೂಡ ಇಲ್ಲಿದ್ದಾಳೆ. ಕಾದಂಬರಿಯ ಕಥಾನಕದಲ್ಲಿ ಈ ಪಾತ್ರದ ಅಗತ್ಯ ಹಾಗೂ ಔಚಿತ್ಯತೆಯು ಸ್ಪಷ್ಟವಾಗುವುದಿಲ್ಲ. ಸದಾಶಿವಪ್ಪನ ತೋಟವನ್ನು ತಮಗೆ ಮಾರಾಟ ಮಾಡಬೇಕೆಂದು ಪೀಡಿಸುವವರು ಮತ್ತು ಅದರಿಂದ ಆತ ತಪ್ಪಿಸಿಕೊಳ್ಳುವ ಉಪಾಯಗಳ ಬಗ್ಗೆ ಒಂದು ಅಧ್ಯಾಯವೇ ಕಾದಂಬರಿಯಲ್ಲಿದೆ. ಇದು ಹಳ್ಳಿಗಳಲ್ಲಿಯೂ ಅಕ್ರಮವಾಗಿ ರಿಯಲ್ ಎಸ್ಟೇಟ್ ದಂಧೆ ಹಾಗೂ ರೆಸಾರ್ಟ್‌ಗಳು ತಲೆಯೆತ್ತುತ್ತಿವೆ. ಆದರೆ ಕಾದಂಬರಿಯ ಶಿಲ್ಪದ ದೃಷ್ಟಿಯಿಂದ ಈ ಅಧ್ಯಾಯವು ಹೊರಗೆ ನಿಲ್ಲುತ್ತದೆ.

ಗೌರಿಯರು ಕಾದಂಬರಿಯ ಅತ್ಯುತ್ತಮ ಪ್ರಸಂಗವೆಂದರೆ ಕೊನೆಯಲ್ಲಿ ಬರುವ ನೋಪಿ ಪೂಜೆಯ ಆಚರಣೆ. ಈ ಆಚರಣೆಯ ಸಂಭ್ರಮದಲ್ಲಿ ನಗರಗಳಿಂದ ಆಗಮಿಸಿರುವ ಶಿವಲೀಲಾ, ಅಕ್ಕಮ್ಮ, ಶ್ರೀದೇವಿ ಹಾಗೂ ಇತರರು ಪಾಲ್ಗೊಳ್ಳುತ್ತಾರೆ. ಈ ಸಾಂಪ್ರದಾಯಿಕ ಆಚರಣೆಯಲ್ಲಿ ಬಹುತೇಕರ ಕಣ್ಣು ಈ ಮಹಿಳೆಯರ ಮೇಲಿರುತ್ತದೆ. ಪೂಜೆಯ ಸಂದರ್ಭದಲ್ಲಿ ಹೂಗಾರ ಮಹಿಳೆಯು ನೀಡುವ ಕುಂಕುಮವನ್ನು ತಮ್ಮ ಮಾಂಗಲ್ಯಗಳಿಗೆ ಹಚ್ಚಿಕೊಳ್ಳುವಂತೆ ಸೂಚಿಸಲಾಗುತ್ತದೆ. ಆದರೆ ಮಹಿಳೆಯರು ಕುಂಕುಮ ವನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಊರಿನ ಅನೇಕ ಹಿರಿಯ ಹೆಂಗಸರಿಂದ ಗಂಡ ಬಿಟ್ಟವರೆಂದು ಮೂದಲಿಸುವ ವ್ಯಂಗ್ಯದ ಮಾತುಗಳು ತೂರಿ ಬರುತ್ತವೆ. ಅವುಗಳಿಗೆ ಈ ಮಹಿಳೆಯರು ಪ್ರತಿಕ್ರಿಯಿಸುವುದಿಲ್ಲ. ಆರ್ಥಿಕವಾಗಿ ಸ್ವತಂತ್ರರಾಗಿರುವ ಹಾಗೂ ತಮ್ಮ ಬದುಕಿನ ಆಯ್ಕೆಗಳಿಗೆ ತಾವೇ ಹೊಣೆಗಾರರಾಗಿರುವ ಈ ಮಹಿಳೆಯರು ಅತ್ಯಂತ ದಿಟ್ಟರಾಗಿದ್ದನ್ನು ಧ್ವನಿಸುತ್ತದೆ.

ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯು ಗಂಡು ಮತ್ತು ಹೆಣ್ಣಿನ ನಡುವಿನ ದಾಂಪತ್ಯದ ಚಂಚಲ ಸಂಬಂಧಗಳನ್ನು ಚಿತ್ರಿಸಿದೆ. ಬಿಗಿಯಾದ ಬಂಧ ಹಾಗೂ ಹಲವು ಕಣ್ಣೋಟಗಳ ನಿರೂಪಣೆಯನ್ನು ಹೊಂದಿರುವ ಈ ಕಾದಂಬರಿಯು ದಾಂಪತ್ಯದ ಸಮಸ್ಯೆಯನ್ನು ಸಾಮಾಜಿಕ ಕಟ್ಟಳೆ, ಆಚರಣೆ, ಧರ್ಮ, ಪುರಾಣಗಳ ಸಂಕೀರ್ಣವಾದ ನೆಲೆಯಲ್ಲಿ ಹಿಡಿದಿಟ್ಟಿದೆ. ಕಾದಂಬರಿಯಲ್ಲಿ ಸರಸಮ್ಮನ ಸಮಾಧಿಯು ಒಂದು ಸಾಕ್ಷಿ ಪ್ರಜ್ಞೆಯಾಗಿದೆ; ಅದರ ಎದುರಿನಲ್ಲಿ ಹಲವು ಪಾತ್ರಗಳು ತಮ್ಮ ಬದುಕಿನ ದುರಂತವನ್ನು ನಿಕಷಕ್ಕೆ ಒಡ್ಡಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ 'ಗೌರಿಯರು' ಕಾದಂಬರಿಯಲ್ಲಿ ನೋಪಿಯ ಆಚರಣೆಯು ವಿವರಗಳಿಂದ ತುಂಬಿ ಹೋಗಿದೆ; ಕಣ್ಣಿಗೆ ಕಟ್ಟುವ ಹಾಗೆ ವರ್ಣಿತವಾಗಿದೆ. ಆದರೆ ಅದರ ಹಿನ್ನೆಲೆಯಲ್ಲಿ ಮೂವರು ಮಹಿಳೆಯರ ಆಂತರಿಕ ಸಂಘರ್ಷಗಳು ಸ್ಫುಟವಾಗಿ ಚಿಮ್ಮುವುದಿಲ್ಲ. ಅವರು ತಮ್ಮನ್ನಷ್ಟೇ 'ಕೇಂದ್ರ'ವಾಗಿಸಿಕೊಂಡಿದ್ದಾರೆ. ಈ ಮಹಿಳೆಯರ ನಿರ್ಧಾರಗಳಿಂದ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಕೆಲವು ಪರಿಣಾಮಗಳು ತಲೆದೋರುತ್ತವೆ. ಆದರೆ ಅವರು ಪರಿಣಾಮಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಇದು ಕಾದಂಬರಿಯ ಶಕ್ತಿಯೂ ಹೌದು; ಮಿತಿಯೂ ಹೌದು.

ಸಣ್ಣ ಕತೆಗಳನ್ನು ಬರೆದವರಿಗೆ ಕಾದಂಬರಿಯ ಬರವಣಿಗೆ ಸುಲಭವೆಂದು ಹೇಳಲಾಗದು; ಅಥವಾ ಕಾದಂಬರಿಗಳನ್ನು ಬರೆದವರಿಗೆ ಸಣ್ಣ ಕತೆಗಳನ್ನು ಬರೆಯುವುದು ಸಲೀಸು ಎಂದು ಕೂಡ ಹೇಳಲು ಬರುವುದಿಲ್ಲ. ಕಾರಣವೆಂದರೆ ಸಾಹಿತ್ಯದ ಈ ಎರಡೂ ಪ್ರಕಾರಗಳು ಭಿನ್ನವಾದ ಶಿಲ್ಪ ಹಾಗೂ ಕುಶಲತೆಯನ್ನು ಅಪೇಕ್ಷಿಸುತ್ತವೆ. ಈ ನಿಟ್ಟಿನಲ್ಲಿ **ಗೌರಿಯರು** ಕಾದಂಬರಿಯು ಹೊಸ ಕಾಲಘಟ್ಟದ ಸಾಮಾಜಿಕ ಬಿಕ್ಕಟ್ಟುಗಳನ್ನು ನಿರೂಪಿಸಿದೆ. ಭಾಷಾ ಪ್ರಯೋಗಶೀಲತೆಯ ನೆಲೆಯಿಂದ ಕಾದಂಬರಿಯನ್ನು ನೋಡಿದರೆ ಅಲ್ಲಲ್ಲಿ ಶಿಥಿಲಗೊಂಡಿದೆ. ಹೊಸ ಕಥನಕ್ಕೆ ಪೂರಕವಾದ ನವೀನ ಭಾಷೆಯನ್ನು ಹುಟ್ಟಿಸಿಕೊಳ್ಳಲು ಲೇಖಕರಿಗೆ ಸಾಧ್ಯವಾಗಿಲ್ಲ. ಕನ್ನಡದ ಮಹತ್ವದ ಸಣ್ಣ ಕತೆಗಾರರಾಗಿರುವ ನುಗಡೋಣಿಯರ ಕಾದಂಬರಿ ಎಂದಾಗ ಸಹಜವಾಗಿಯೇ ಓದುಗರಲ್ಲಿ ದೊಡ್ಡ ನಿರೀಕ್ಷೆಗಳಿರುತ್ತವೆ. ಸದರಿ ಕಾದಂಬರಿಯು ಮಹತ್ವಾಕಾಂಕ್ಷೆಯ ವಸ್ತುವನ್ನು ಹೊಂದಿದೆ; ಆದರೆ ಮತ್ತಷ್ಟು ಕಲಾತ್ಮಕತೆಯ ಹೊಳಪನ್ನು ಪಡೆಯಲು ಸಾಧ್ಯವಾಗಿದ್ದರೆ ಕೃತಿಯ ಗುಣಮಟ್ಟ ಇನ್ನಷ್ಟು ಎತ್ತರದಲ್ಲಿರುತ್ತಿತ್ತು.

◆◆

೭

ಗೌರಿಯರು : ನವ ಬದುಕಿನ ಒಳಬೇಗುದಿಗಳ ಅನ್ವೇಷಣೆ

ಸುಧಾಕರ ದೇವಾಡಿಗ ಬಿ.

ವರ್ತಮಾನದ ಸಾಮಾಜಿಕ ಬದುಕಿನಲ್ಲಾದ ಪಲ್ಲಟಗಳ ಶೋಧನೆ ಇವರ ಕಥನಗಳ ಕೇಂದ್ರ ಕಾಳಜಿಯಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಕೃಷಿಕ, ಶ್ರಮಜೀವಿಗಳ ಬದುಕು ಹಾಗೂ ಸಂಸ್ಕೃತಿಯ ಪರಿಶೀಲನೆಯೇ ಮುಖ್ಯ ನೆಲೆಯಾಗಿ ಕಾಣಿಸಿಕೊಂಡಿದೆ. ವರ್ತಮಾನವನ್ನು ಕಥನವನ್ನಾಗಿಸಿಕೊಳ್ಳುವಾಗ ಎದುರಿಸುವ ಮುಖ್ಯ ಸಮಸ್ಯೆಯೆಂದರೆ ಇದು ತನ್ನ ಕಾಲದ ಪಾರ್ಶ್ವಿಕ ಗ್ರಹಿಕೆಯಾಗಿರುತ್ತದೆಯೇ ಹೊರತು ಪೂರ್ಣಗ್ರಹಿಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ವರ್ತಮಾನ ಸಿದ್ಧರೂಪದಲ್ಲಿರುವುದಿಲ್ಲ. ಅದೊಂದು ರೂಪುಗೊಳ್ಳುತ್ತಿರುವ ಪ್ರಕ್ರಿಯೆ. ಈ ಸೂಕ್ಷ್ಮ ದೃಷ್ಟಿ ನಮ್ಮಲಿಲ್ಲದಿದ್ದರೆ ವರ್ತಮಾನವನ್ನು ಸಿದ್ಧರೂಪವೆಂದು ಗ್ರಹಿಸಿ ಸರಳೀಕೃತವಾಗಿ ಅಭಿವ್ಯಕ್ತಿಸುವ ಅಪಾಯವಿರುತ್ತದೆ. ಈ ಎಚ್ಚರ ಇವರ ಬರಹಗಳಲ್ಲಿದೆ. ಸದ್ಯದ ಸಾಮಾಜಿಕ ಬದುಕಿನ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ಅದು ಭವಿಷ್ಯದಲ್ಲಿ ಮೈದಾಳಬಹುದಾದ ಸ್ವರೂಪವನ್ನು ಅರಿಯುವ ದಾರ್ಶನಿಕ ದೃಷ್ಟಿ ಅಮರೇಶ ನುಗಡೋಣಿಯವರ ಕಥನದಲ್ಲಿ ಕ್ರಿಯಾಶೀಲವಾಗಿದೆ. **ಗೌರಿಯರು** ಕಾದಂಬರಿಯು ಈ ಸಾಲಿಗೆ ಸೇರುವ ಕಥನವಾಗಿದೆ.

ಈ ಕಾದಂಬರಿಯು ಒಳಗೊಳ್ಳುವ ಜಗತ್ತು ಸೀಮಿತವಾದದ್ದು ಎನ್ನಿಸಿದರೂ ಅದರ ಸಾಮಾಜಿಕ ಹರವು ವಿಶಾಲವಾಗಿದೆ. ಇಲ್ಲಿ ಸದಾಶಿವಪ್ಪ ಪಾರ್ವತಿ ದಂಪತಿಗಳ ಕುಟುಂಬವೇ ಕೇಂದ್ರವಾಗಿದೆ. ಶಿವಲೀಲಾ, ಅಕ್ಕಮ್ಮ, ಶ್ರೀದೇವಿ, ಕಲ್ಯಾಣಿ, ಪಾರ್ವತಿ, ದಾಕ್ಷಾಯಣಿ, ಚೆನ್ನಮ್ಮ, ಹೂಗಾರ ಹಂಪಮ್ಮ, ಮಂಜುಳ ಹೀಗೆ ಸಾಕಷ್ಟು ಸ್ತ್ರೀಪಾತ್ರಗಳಿವೆ. ಕಾದಂಬರಿಯ ಶೀರ್ಷಿಕೆಯು ಸ್ತ್ರೀವಾಚಿಯಾಗಿರುವುದರಿಂದ ಮೇಲ್ನೋಟಕ್ಕೆ ಇದೊಂದು 'ಸ್ತ್ರೀವಾದಿ' ಕಾದಂಬರಿಯಾಗಿ ಗೋಚರಿಸುತ್ತದೆ. ಇದು ಸ್ತ್ರೀವಾದಿ ಕಾದಂಬರಿಯೆಂದು ಸರಳೀಕರಿಸುವ ಅಗತ್ಯವಿಲ್ಲ. ಕಥನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಗರ್ಭೀಕರಿಸಿ ಕೊಂಡ ನೆಲೆಗಳು ವಿಶಾಲವಾಗಿವೆ. ಹಾಗಾಗಿ ಈ ಕಾದಂಬರಿಯಲ್ಲಿ ಕ್ರಿಯಾಶೀಲ

ಸಂಗತಿಗಳನ್ನು ಆಧರಿಸಿ ಪ್ರಸ್ತುತ ಬರಹದಲ್ಲಿ ೧. ಕೃಷಿ ಮತ್ತು ಕೃಷಿಕರ ಜೀವನದ ಪಲ್ಲಟಗಳು ೨. ವಿವಾಹವೆಂಬ ಸಾಮಾಜಿಕ ಸಂಸ್ಥೆ, ಆಧುನಿಕ ಮಹಿಳೆಯ ಬದುಕಿನ ಸ್ಥಿತ್ಯಂತರದ ಸ್ವರೂಪ ೩. ನಂಬುಗೆಯ ಜಗತ್ತಿನ ದೈವಿಕ ದೃಷ್ಟಿ ಎಂಬ ಮೂರು ಆಯಾಮಗಳಲ್ಲಿ ಪರಿಶೀಲಿಸಲಾಗುವುದು.

ಕೃಷಿ, ಕೃಷಿಕರ ಜಗತ್ತಿನ ಪಲ್ಲಟಗಳ ಪರಿಶೀಲನೆ ಅಮರೇಶ ನುಗಡೋಣಿಯವರ ಕಥನಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಪ್ರಸ್ತುತ ಕಾದಂಬರಿಯಲ್ಲಿ ಇದು ಕೇಂದ್ರ ಪ್ರಶ್ನೆಯಾಗಿ ಕಾಣಿಸಿಕೊಳ್ಳದಿದ್ದರೂ ಕಥನದ ಅಂತರ್ಯದಲ್ಲಿ ಕ್ರಿಯಾಶೀಲ ವಾಗಿದೆ. ರೈತಾಪಿ ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಕೂಲಿಕಾರರ ಸಮಸ್ಯೆ, ಬರ, ಹೆಚ್ಚುತ್ತಿರುವ ಕೃಷಿಯ ವೆಚ್ಚ, ಸೂಕ್ತ ಬೆಲೆಯ ಸಮಸ್ಯೆ ಹೀಗೆ ಹಲವು ಆಯಾಮಗಳಿವೆ. ಇವೆಲ್ಲವನ್ನು ಕಾದಂಬರಿ ತನ್ನ ಒಡಲೊಳಗಿರಿಸಿಕೊಂಡಿದೆ. ಈ ಸಮಸ್ಯೆ ಮಳೆಯಾಶ್ರಿತ ಕೃಷಿಕರದು ಮಾತ್ರವಲ್ಲ. ನೀರಾವರಿಯಾಶ್ರಿತರ ಸಮಸ್ಯೆಯೂ ಆಗಿದೆ ಎಂಬ ಸೂಕ್ಷ್ಮ ವಿವೇಚನೆ ಇಲ್ಲಿದೆ. ಶಿವಲಿಂಗಪ್ಪನದು ನೀರಾವರಿ ಭೂಮಿ. ಭತ್ತವನ್ನು ಬೆಳೆಯುವವನು. ಅವನಿಗೆ ಕೂಲಿಕಾರರ ಸಮಸ್ಯೆ ತೀವ್ರವಾಗಿದೆ. ಚಿನ್ನೂರಿನ ಕೂಲಿಕಾರರು ರೈಸ್ಮಿಲ್, ಬಿಲ್ಡಿಂಗ್ ಕೆಲಸಗಳನ್ನು ನೆಚ್ಚಿಕೊಂಡಿರುವುದರಿಂದ ಕೃಷಿಗೆ ದೊಡ್ಡ ತೊಡಕಾಗಿದೆ. ಇದರಿಂದ ಕೃಷಿಯ ವೆಚ್ಚವು ಹೆಚ್ಚಿ ರೈತರನ್ನು ಸಾಲದ ಸುಳಿಗೆ ಸಿಲುಕಿಸಿದೆ.

ಎಲ್ಲಾ ಸಂಕಷ್ಟಗಳನ್ನು ದಾಟಿ ಬೆಳೆ ಬಂದರೂ ಅದಕ್ಕೆ ಸೂಕ್ತ ಬೆಲೆ ದೊರಕದೆ ಕೃಷಿಕರು ಸಾಲಗಾರರಾಗಿಯೇ ಉಳಿಯುವ ಸಮಸ್ಯೆಯ ಕಡೆ ಕಥನ ನಮ್ಮ ಗಮನಸೆಳೆಯುತ್ತದೆ. ಮತ್ತೊಂದೆಡೆ ಮಳೆಯಾಶ್ರಿತ ಭೂಮಿಯನ್ನು ನಂಬಿದವರಿಗೆ ಎದುರಾಗುವ ಬರ ಅವರನ್ನು ಆತ್ಮಹತ್ಯೆಗೆ ಶರಣಾಗಿಸಿದೆ. ಕಲ್ಯಾಣಿಯ ಪತಿ ಶಂಕರಲಿಂಗನ ಆತ್ಮಹತ್ಯೆಗೆ ಪದೇ ಪದೇ ಸೃಷಿಯಾದ ಬರವು ಕಾರಣವಾಗಿದೆ. ಈ ಸ್ಥಿತಿಯಿಂದ ಪಾರಾಗಲೂ ಕೆಲವು ಕುಟುಂಬಗಳು ಗುಳೆ ಹೊರಟಿವೆ. ಆದರೆ ಶಂಕರಲಿಂಗನಿಗೆ ಗುಳೆ ಹೋಗಲು ಅವನ ಕುಟುಂಬ ತಡೆಯಾಗಿದೆ. ಹಾಗಾಗಿ ಅವನ ಸಂಕಷ್ಟ ಸಾವಿನಲ್ಲಿ ಪರ್ಯಾವಸನಗೊಳ್ಳುತ್ತದೆ. ಹೀಗೆ ಭೂಮಿಯನ್ನು ನಂಬಿ ಜೀವಿಸುವವರು ಕೊನೆಯಿರದಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಇದಕ್ಕೆ ಭಿನ್ನವಾದ ಮತ್ತೊಂದು ನೆಲೆಯನ್ನು ಕಥನ ನಮ್ಮ ಮುಂದಿರಿಸಿದೆ. ಅದು ಸದಾಶಿವಪ್ಪನದು. ಕಗ್ಗಾಡಗಿದ್ದ ಭೂಮಿಯಲ್ಲಿ ಹಸಿರು ಬುಗ್ಗೆಯನ್ನುಕ್ಕಿಸಿ, ಸಮೃದ್ಧ ತೋಟವನ್ನು ಕಟ್ಟಿದ ಸಾಹಸಗಾಥೆ ಇವನದು. ಕೃಷಿ ಸೃಷ್ಟಿಸಿದ ಬಿಕ್ಕಟ್ಟಿನ ಬಿಸಿ ಸದಾಶಿವಪ್ಪನಿಗೆ ತಟ್ಟಿಲ್ಲ. ಏಕೆಂದರೆ ಇವರ ಜೀವನ ಕೃಷಿಯನ್ನು ಅವಲಂಬಿಸಿಲ್ಲ. ಇವರ ಕುಟುಂಬ ನಿರ್ವಹಣೆಗೆ ಬ್ಯಾಂಕಿನ ಉದ್ಯೋಗದ ಆಶ್ರಯವಿದೆ. ಹಾಗಾಗಿ ಈ ಭಾದೆ ಹೆಚ್ಚು ತಟ್ಟಿಲ್ಲ ಎಂಬ ನಿರೂಪಣೆ ಕಥನದಲ್ಲಿದೆ. ಆದರೆ ಈ ಕುಟುಂಬ

ಎದುರಿಸುತ್ತಿರುವ ಸಮಸ್ಯೆ ಮತ್ತೊಂದು ಬಗೆಯದು. ಹಸಿರುಕ್ಕುವ ಈ ಭೂಮಿಯನ್ನು ಕಿತ್ತುಕೊಂಡು ರೆಸಾರ್ಟ್, ಹೋಟೇಲ್ಗಳನ್ನು ನಿರ್ಮಿಸಲು ಹೊಂಚುಹಾಕುತ್ತಿರುವ ವರ್ಗವೊಂದು ಈ ಕುಟುಂಬದ ನೆಮ್ಮದಿಯನ್ನು ಕಸಿದುಕೊಂಡಿದೆ. ರಾಜರೆಡ್ಡಿ ಮತ್ತವನ ಪಟಾಲಂ ಭೂಮಿಯನ್ನು ಸದಾಶಿವಪ್ಪನಿಂದ ಕಿತ್ತುಕೊಳ್ಳಲು ನೀಡಿದ ಕಿರುಕುಳ ಅಷ್ಟಿಷ್ಟಲ್ಲ. ಇದು ಕೃಷಿಕರು ಎದುರಿಸುತ್ತಿರುವ ಸಮಸ್ಯೆಯ ಮತ್ತೊಂದು ಸ್ವರೂಪ. ಈ ಕಥನದಲ್ಲಿ ಇವೆಲ್ಲವೂ ಸೂಕ್ಷ್ಮವಾಗಿ ಅಭಿವ್ಯಕ್ತವಾಗಿವೆ.

ನಗರೀಕರಣ, ಆಧುನಿಕತೆ ಸೃಷ್ಟಿಸಿದ ಸಮಸ್ಯೆ ಒಂದು ಕಡೆ. ಇನ್ನೊಂದೆಡೆ ಬ್ಯಾಂಕ್‌ಗಳ ಕೃಷಿಸಾಲ, ಯಂತ್ರಸಾಲಗಳ ಆಮಿಷದ ಸುಳಿ. ಇವು ರೈತರ ಬದುಕನ್ನು ಹಸನಾಗಿಸುವ ಸರ್ಕಾರದ ಯೋಜನೆಗಳಾಗಿವೆ. ದುರಂತವೆಂದರೆ ಇವೇ ರೈತರನ್ನು ಸಾಲದ ಉರುಳಿಗೆ ಸಿಲುಕಿಸುವ ಚಿತ್ರಣ ಕಾದಂಬರಿಯಲ್ಲಿದೆ. ಹೀಗೆ ಹಲವು ಬಗೆಯ ಸಂಕಷ್ಟಗಳ ಸುಳಿಗೆ ಕೃಷಿಕರು ಸಿಲುಕಿದ್ದಾರೆ. ಆದರೆ ಈ ಸ್ಥಿತಿಯು ರೈತಾಪಿ ಸಮುದಾಯವನ್ನು ಕೃಷಿಯಿಂದ ವಿಮುಖವಾಗಿಸಿಲ್ಲ ಎಂಬ ದೃಷ್ಟಿಕೋನವು ಈ ಕಥನದಲ್ಲಿದೆ. ಭೂಮಿಯನ್ನು ನಂಬಿ ಜೀವಿಸುವ ಕುಟುಂಬಗಳಿನ್ನು ಇವೆ. ಸದಾಶಿವಪ್ಪ ಮಲ್ಲಪ್ಪ, ಎಲ್ಲಮ್ಮ ಪಾರ್ವತಿ ಇವರಿಗೆ ಭೂಮಿಯ ಮೇಲಿನ ನಂಬಿಕೆ ಕುಗ್ಗಿಲ್ಲ. ಕೃಷಿಯ ವೆಚ್ಚವೇ ಶಿವಲಿಂಗಪ್ಪನನ್ನು ಸಾಲಗಾರನನ್ನಾಗಿಸಿ ಹೈರಾಣಾಗಿಸಿದೆ. ಆದರೆ ಅವನು ಅದೇ ಭೂಮಿಯಲ್ಲಿಯೇ ಭವಿಷ್ಯವನ್ನು ಅರಸುವ ಮಾತು ಕಾದಂಬರಿಯಲ್ಲಿ ಹೀಗೆ ನಿರೂಪಿತವಾಗಿದೆ."ಅಣ್ಣ, ಗದ್ದೆಯನ್ನು ಮುಂದಿನ ಬೆಳೆಯಿಂದ ನಾನು ಮಾಡ್ತೀನಿ. ಗದ್ದೆನ್ನ ಮಂದಿಗೆ ಕೊಟ್ಟದ್ದು ತಪ್ಪಾಗ್ಯಾದ. ಮನ್ಯಾಗ ಖಾಲಿ ಕುಂತು ಸಾಯದ್ಕಿಂತ, ಹೊಲ್ದಾಗ ದುಡದು ಸತ್ರಾಯ್ತು" (ಪು. ೧೪೯) ಹಲವು ಬಿಕ್ಕಟ್ಟುಗಳ ನಡುವೆಯು ಕೃಷಿಯನ್ನು ಮುಂದುವರಿಸುವ ಛಲವಿದೆ. ಇದೊಂದು ಆಶಾದಾಯಕ ಬೆಳವಣಿಗೆಯಾಗಿದೆ.

೨

ಈ ಕಥನವು ಬದಲಾದ ಕಾಲಮಾನವು ಸೃಜಿಸಿದ ಮಹಿಳಾ ಹಕ್ಕುಗಳ ಪ್ರಶ್ನೆಯನ್ನು ತಾಳ್ಮೆಯಿಂದ ಪರಿಶೀಲಿಸುತ್ತದೆ. ಪಿತೃಪ್ರಧಾನ ಸಮಾಜ ರೂಪಿಸಿದ ಕುಟುಂಬ, ವಿವಾಹಗಳೆಂಬ ಪಾರಂಪರಿಕ ವ್ಯವಸ್ಥೆಯ ನಂಬಿಕೆಗಳನ್ನು ಧಿಕ್ಕರಿಸಿ ನವಬದುಕು ಕಟ್ಟಿಕೊಂಡಿರುವುದನ್ನು ಕ್ರಾಂತಿಕಾರಕವೆಂಬಂತೆ ಕಾಣದೆ ಸಹಜವೆಂಬಂತೆ ನಿರೂಪಿಸಿರುವುದು ಕಾದಂಬರಿಯ ಹೆಗ್ಗಳಿಕೆಯಾಗಿದೆ.

ಗೌರಿಯರು ಕಾದಂಬರಿಯಲ್ಲಿ ಸ್ತ್ರೀಯರ ಎರಡು ತರಹದ ಜೀವನಕ್ರಮಗಳನ್ನು ಕಾಣುತ್ತೇವೆ. ಒಂದು ಪಿತೃಸತ್ತೆ ರೂಪಿಸಿದ ಪಾರಂಪರಿಕ ಜೀವನ. ಇನ್ನೊಂದು ಆಧುನಿಕತೆ ರೂಪಿಸಿದ ಸ್ವಾತಂತ್ರ್ಯದ ನವಬದುಕು. ಈ ಎರಡು ಜೀವನ ವಿಧಾನಗಳು ಇಲ್ಲಿ ಕ್ರಿಯಾಶೀಲವಾಗಿವೆ. ಪಾರ್ವತಿ, ದಾಕ್ಷಾಯಣಿ, ಕಲ್ಯಾಣಿ, ಚಂದ್ರಮ್ಮ, ಹೂಗಾರ

ಹಂಪಮ್ಮ ಮುಂತಾದವರು ಪಾರಂಪರಿಕ ಜೀವನವನ್ನು ಅವಲಂಬಿಸಿದವರು. ಹಳೆಯ ತಲೆಮಾರಿಗೆ ಸೇರಿದವರು, ಗ್ರಾಮೀಣರು, ಕೃಷಿಕ ಸ್ತ್ರೀಯರೆಲ್ಲರೂ ಪಿತೃಸತ್ತೆಯ ಪಾರಂಪರಿಕ ಬದುಕನ್ನು ಜೀವಿಸುವವರು ಎಂದು ಕಥನ ಇದನ್ನು ಸರಳೀಕರಿಸುವುದಿಲ್ಲ. ನವತಲೆಮಾರಿನ ಕಲ್ಯಾಣಿ, ಚಂದ್ರಮ್ಮನಂಥವರು ಈ ವ್ಯವಸ್ಥೆಯನ್ನು ಒಪ್ಪಿ ಜೀವಿಸುತ್ತಿದ್ದಾರೆ. ಕೃಷಿಕ ಹಾಗೂ ಗ್ರಾಮೀಣ ಸಮುದಾಯದ ಸ್ತ್ರೀಯರಿಗೆ ಈ ಪಾರಂಪರಿಕ ಜೀವನ ವಿಧಾನವನ್ನು ಮೀರಲು ಸಾಧ್ಯವಾಗಿಲ್ಲ ಎಂಬುದನ್ನು ಕಥನ ಸೂಚ್ಯವಾಗಿ ಗುರುತಿಸುತ್ತದೆ. ಹೀಗೆ ಮೀರಲು ಸಾಧ್ಯವಾಗದಿರುವುದಕ್ಕೆ ಹಲವು ಕಾರಣಗಳಿವೆ.

ಶಿವಲೀಲಾ, ಅಕ್ಕಮ್ಮ, ಶ್ರೀದೇವಿ ಇವರು ಆಧುನಿಕ ಶಿಕ್ಷಣವನ್ನು ಪಡೆದವರು. ಉದ್ಯೋಗಸ್ಥರು ಆಗಿದ್ದಾರೆ. ಹಾಗಾಗಿ ಇವರಿಗೆ ಪುರುಷ ನಿಯಂತ್ರಿತ ಬದುಕನ್ನು ಧಿಕ್ಕರಿಸಿ ನವಬದುಕನ್ನು ಕಟ್ಟಿಕೊಳ್ಳುವ ಸ್ಥೈರ್ಯವಿದೆ. ಶಿವಲೀಲಾ, ಅಕ್ಕಮ್ಮ ಇಬ್ಬರೂ ಪಿತೃಸತ್ತೆಯ ಪಾರಂಪರಿಕ ವಿಷಮ ನಿಯಮಗಳನ್ನು ಧಿಕ್ಕರಿಸುವ ಸ್ತ್ರೀವಾದಿ ಸೈದ್ಧಾಂತಿಕತೆಯಿಂದ ನವಜೀವನ ಆಯ್ದುಕೊಂಡವರಲ್ಲ. ಅವರ ಬದುಕಿನಲ್ಲಿ ಎದುರಾದ ಸಂಕಷ್ಟಗಳು ಅವರನ್ನು ಈ ದಾರಿಯಲ್ಲಿ ಸಾಗಲು ಪ್ರೇರೇಪಿಸಿವೆ. ಶಿವಲೀಲಾ ಆರಂಭದಲ್ಲಿ ಪತಿ ಚಂದ್ರಶೇಖರನ ಜೊತೆ ಸಾಕಷ್ಟು ಹೊಂದಾಣಿಕೆಯಿಂದ ಬದುಕಿದವಳು. ಅವನ ಪೀಡನೆ, ಕುಟುಂಬದ ಬಗೆಗಿನ ನಿಷ್ಕಾಳಜಿ, ಪತ್ನಿಯ ನಿಯಂತ್ರಣ ಇವು ಅಧಿಕವಾದಾಗ ಸಂಬಂಧ ಕಡಿದುಕೊಂಡು ಹೊರಬಂದವಳು. ಪತಿಯನ್ನು ಧಿಕ್ಕರಿಸಿದಾಗ ಶಿವಲೀಲಾ ಮೂರು ತಿಂಗಳ ಗರ್ಭಿಣಿಯಾಗಿದ್ದಳು. ಅವಳ ದಿಟ್ಟ ನಿರ್ಧಾರವನ್ನು ಇವ್ಯಾವುದು ತಡೆಯಲಿಲ್ಲ. ಮುಂದೆ ಎದುರಾದ ಅನೇಕ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದಳೇ ಹೊರತು ತಂದೆತಾಯಿಯನ್ನು ಆಶ್ರಯಿಸಲಿಲ್ಲ. ಈ ವಿಷಯ ಅವಳ ತಂದೆಗೆ ನೋಪಿ ಪೂಜೆಗೆ ಬಂದಾಗಲೇ ತಿಳಿದದ್ದು. ತನ್ನ ಕುಟುಂಬದ ನೆರವಿಲ್ಲದೆ ಎಲ್ಲವನ್ನು ಎದುರಿಸುತ್ತಾಳೆ. ಎಲ್ಲವನ್ನು ಸ್ವತಂತ್ರವಾಗಿ ಏಕಾಂಗಿಯಾಗಿ ನಿರ್ವಹಿಸುವ ಸ್ತ್ರೀಯ ಹೊಣೆಗಾರಿಕೆಯನ್ನು ಕಥನ ನಿರೂಪಿಸಿದೆ.

ಅಕ್ಕಮ್ಮಳ ಬದುಕು ಶಿವಲೀಲಾಳಗಿಂತ ಭಿನ್ನವೇನಲ್ಲ. ಇವಳು ಪತಿಯಿಂದ ವಂಚನೆಗೊಳಗಾದವಳು. ಲಂಪಟನಾಗಿದ್ದ ರಾಮಚಂದ್ರ ಇವಳ ಪ್ರೀತಿಗೆ ಅರ್ಹ ನಾಗಿರಲಿಲ್ಲ. ಇವನ ನಿಜ ಸ್ವಭಾವ ತಿಳಿದ ಮೇಲೆ ಅಕ್ಕಮ್ಮ ಅವನೊಟ್ಟಿಗಿನ ಸಂಬಂಧವನ್ನು ಕಡಿದುಕೊಂಡು ಸ್ವತಂತ್ರಳಾದಳು. ಶಿವಲೀಲಾ ಒಂಟಿತನದ ಬದುಕಿನಲ್ಲಿ ಸುಖವನ್ನು ಕಂಡವಳು. ಆದರೆ ಅಕ್ಕಮ್ಮ ಇವಳಿಗಿಂತ ಭಿನ್ನ. ಒಂದು ಸಂಬಂಧ ಕಡಿದುಕೊಂಡ ನಂತರ ಮತ್ತೊಂದು ಸಂಬಂಧದತ್ತ ಕೈಚಾಚಿದವಳು. ಸಿದ್ಧಾರ್ಥ ಪಾಟೀಲನ ಸಾಂಗತ್ಯದಲ್ಲಿ ಜೀವನದ ಸುಖವನ್ನು ಅರಸಿದವಳು. ಈ ಇಬ್ಬರು ಸಹೋದರಿಯರು ಸಮಾಜದ ಕಟ್ಟುಪಾಡಿನ ಬಗೆಗಾಗಲಿ, ಪತಿನಿಷ್ಠೆಯ ಕುರಿತಾಗಲಿ

ಚಿಂತಿಸಿದವರಲ್ಲ. ಇವ್ಯಾವುದು ಅವರ ನಿರ್ಧಾರಕ್ಕೆ ಅಡ್ಡಿಯಾಗಿಲ್ಲ. ತಮಗೆ ಸರಿ ಎನ್ನಿಸಿದ ದಾರಿಯಲ್ಲಿ ದಿಟ್ಟವಾಗಿ ಸಾಗಿದವರು. ಕಥನ ಈ ಇರ್ವರ ಜೀವನ ಘಟನೆಗಳ ಮೂಲಕ ಈ ಪರಿವರ್ತನೆ ಸಾಂದರ್ಭಿಕವಾದುದು ಎಂಬುದನ್ನು ಸೂಚಿಸುತ್ತದೆ. ವಿವಾಹವೆಂಬ ಸಂಸ್ಥೆಯನ್ನು ಸ್ತ್ರೀಪ್ರಜ್ಞೆಯ ಸೈದ್ಧಾಂತಿಕತೆಯಿಂದ ಭಂಜಿಸುವ ಉದ್ದೇಶ ಶಿವಲೀಲಾಗಾಗಲಿ, ಅಕ್ಕಮ್ಮನಿಗಾಗಲಿ ಇರಲಿಲ್ಲ. ತಮ್ಮ ನಂಬಿಕೆ ಸ್ವಾತಂತ್ರ್ಯಕ್ಕೆ ಧಕ್ಕೆಯಾದಾಗ ಅನಿವಾರ್ಯವಾಗಿ ಈ ದಾರಿಗೆ ಮರಳಿದವರು ಎಂಬ ನಿಲುವು ಈ ಕಥನದಲ್ಲಿದೆ. ಸ್ತ್ರೀ ವಿರೋಧಿಯಾದ ವ್ಯವಸ್ಥೆಯ ನಾಶ ಕ್ರಾಂತಿಯಿಂದಾಗುವುದಿಲ್ಲ. ಅದರ ಒಡಲೊಳಗಿನ ಉಸಿರು ಗಟ್ಟಿಸುವ ನಿರ್ಬಂಧಗಳೇ ಅದನ್ನು ಶಿಥಿಲಗೊಳಿಸುತ್ತವೆ ಎಂಬ ಹೊಳಹು ಇಲ್ಲಿದೆ.

ಶಿವಲೀಲಾ, ಅಕ್ಕಮ್ಮರಿಗಿಂತ ಭಿನ್ನ ಮನೋಧರ್ಮದ ಶ್ರೀದೇವಿ ಅರುಣರ ಸಂಬಂಧದ ಚಿತ್ರಣವು ಕಾದಂಬರಿಯಲ್ಲಿದೆ. ಶ್ರೀದೇವಿಯ ಸ್ವಭಾವವೇ ವಿಚಿತ್ರವಾದುದು. ಕಾಲೇಜೊಂದರಲ್ಲಿ ಸಹಾಯಕ ಪ್ರಾಧ್ಯಾಪಕಿಯಾದ ಇವಳು ಅರುಣನ ಜೊತೆ 'ಲಿವಿಂಗ್ ರಿಲೇಷನ್' ಸಂಬಂಧವನ್ನು ಹೊಂದಿದ್ದಾಳೆ. ತನಗೆ ಅರುಣನ ಅಗತ್ಯವಿರುವಾಗ ಕರೆಸಿಕೊಳ್ಳುವ ಇವಳು ಅನಂತರ ಅವನನ್ನು ದೂರವಾಗಿಸುತ್ತಾಳೆ. ಈ ವಿಚಿತ್ರ ಸಂಬಂಧವನ್ನು ನಿಭಾಯಿಸಲಾಗದ ಅರುಣ ವಿಚ್ಛೇದನ ಕೇಳುತ್ತಾನೆ. ಶ್ರೀದೇವಿ ಡೈವೋರ್ಸ್ ನೀಡಲು ನಿರಾಕರಿಸುತ್ತಾಳೆ. ಅರುಣನನ್ನು ತ್ಯಜಿಸಲು ತಯಾರಿಲ್ಲದ ಇವಳು ಅವನ ಜೊತೆ ಜೀವಿಸಲು ಸಿದ್ಧಳಿಲ್ಲ. ಮೇಲ್ನೋಟಕ್ಕೆ 'ಲಿವಿಂಗ್ ರಿಲೇಷನ್' ಎನ್ನಿಸುವ ಈ ಸಂಬಂಧವು ಅಷ್ಟು ಸುಲಭ ಗ್ರಾಹ್ಯವಲ್ಲ. ಹಾಗಾಗಿ ಇವಳದು ಭಿನ್ನದಾರಿ.

ದಾಂಪತ್ಯದ ಚೌಕಟ್ಟನ್ನು ಭಂಜಿಸಿ ಹೊರಬಂದ ಈ ಸ್ತ್ರೀಯರು ಕೌಟುಂಬಿಕ ಚೌಕಟ್ಟನ್ನು ನಿರಾಕರಿಸಿದವರಲ್ಲ. ಸರ್ವಸ್ವತಂತ್ರವಾಗಿ ಜೀವಿಸುತ್ತಿರುವಾಗಲು ಕುಟುಂಬದ ನೆಲೆಯನ್ನು ಆಶ್ರಯಿಸಿದವರು. ಇವರು ತಂದೆ ತಾಯಿ ಬಂಧುಬಳಗದವರಿಂದ ದೂರವಾಗಿದ್ದರೂ ಕುಟುಂಬದ ಜೊತೆಗಿನ ಬಂಧ ಇನ್ನು ಬಿಗಿಯಾಗಿಯೇ ಇದೆ. ಶ್ರೀದೇವಿ ಇದಕ್ಕೆ ಹೊರತಾದಂತೆ ಕಂಡರೂ ಕುಟುಂಬದ ಜೊತೆಗಿನ ನಂಟು ಸಡಿಲವಾಗಿಲ್ಲ. ಶಿವಲೀಲಾಗೆ ತಾನು ಬಾಡಿಗೆಗಿರುವ ಮನೆಯ ಸೌಭಾಗ್ಯಳ ಕುಟುಂಬದ ಆಶ್ರಯವಿದೆ. ಶಿವಲೀಲಾಳ ಮಗ ಶಿವಸಮಯನಿಗೆ ಸೌಭಾಗ್ಯಳ ಕುಟುಂಬವೇ ಮನೆಯಾಗಿದೆ. ಅಕ್ಕಮ್ಮನಿಗೆ ಸಿದ್ಧಾರ್ಥ ಪಾಟೀಲನ ಆಶ್ರಯವಿದೆ. ಅಕ್ಕಮ್ಮ ತನ್ನ ಪತಿ ರಾಮಚಂದ್ರನಿಂದ ದೂರವಾದ ನಂತರವು ಅವನ ತಂದೆತಾಯಿಗಳ ಜೊತೆಗಿನ ಸಂಬಂಧ ಕಡಿದುಕೊಂಡಿಲ್ಲ. ಕಥನದ ಈ ವಿವರಗಳು ಇವರು ಎಷ್ಟೇ ಆಧುನಿಕರಾದರೂ ಕೌಟುಂಬಿಕ ಜೀವನದಿಂದ ವಿಮುಖರಾದವರಲ್ಲ ಎಂಬುದನ್ನು ಸೂಚಿಸುತ್ತವೆ. ಈ ಚೌಕಟ್ಟಿನಲ್ಲೇ ಸ್ವತಂತ್ರವನ್ನು ಆಯ್ದುಕೊಂಡವರು. ಇದು ಕುಟುಂಬ ಸಂಬಂಧವನ್ನು ಕಡಿದುಕೊಂಡು ಏಕಾಂಗಿಯಾಗಿ ಬದುಕುವುದು ಅಷ್ಟು ಸುಲಭವಲ್ಲ. ಈ ಸಂಬಂಧಗಳ ಹೆಣಿಗೆ ಸಡಿಲವಾಗಿಲ್ಲ ಎಂಬುದನ್ನು ಕಥನ ಸೂಚ್ಯವಾಗಿ ನಮ್ಮ ಮುಂದಿರಿಸಿದೆ.

ತಾವು ಪಡೆದ ಶಿಕ್ಷಣ, ದೊರೆತ ಉದ್ಯೋಗ ಇವರನ್ನು ದಾಂಪತ್ಯದ ವಿಷಮ ಸ್ಥಿತಿಯಿಂದ ಹೊರಬರುವ ದಾರಿಯನ್ನು ತೋರಿದೆ. ಉದ್ಯೋಗ, ಆರ್ಥಿಕ ಭದ್ರತೆಯಿಲ್ಲದ ಸ್ತ್ರೀಯರು ದಾಂಪತ್ಯ ಹಿಂಸೆಯನ್ನು ಸಹಿಸಿ ಜೀವಿಸುವ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. "ಅಕ್ಕ, ನಾವು ಎಂಪ್ಲಾಯಿಗಳು ಆಗದಿದ್ದರೆ ಎಕಾನಮಿಕ್ ಸೌಂಡ್ ನಮ್ಗೆ ಇಲ್ಲದಿದ್ದರೆ? ನಮಗೂ ಸೂಯಿಸಾಯಿಡೆ ಗತಿಯಾಗಿತ್ತೇನೋ?"(ಪು. ೧೪೩) ಎಂಬ ಅಕ್ಕಮ್ಮಳ ಮಾತು ಉದ್ಯೋಗ ನೀಡಿದ ಆರ್ಥಿಕ ಭದ್ರತೆಯ ಮಹತ್ವವನ್ನು ಹೇಳುತ್ತದೆ. ಶಿಕ್ಷಣ, ಉದ್ಯೋಗ ಒದಗಿಸುವ ಆರ್ಥಿಕ ಭದ್ರತೆ ಸ್ತ್ರೀ ಬಿಡುಗಡೆಯ ಸೂಚಕದಂತೆ ನಿರೂಪಿಸುವ ಕಾದಂಬರಿಯ ನಿಲುವು ಸರಳೀಕರಣದಂತೆ ಕಾಣುತ್ತದೆ. ಈ ನಿಲುವು ಸ್ತ್ರೀ ಸಮಸ್ಯೆಯ ಹಲವು ಆಯಾಮಗಳನ್ನು ಗೌಣವಾಗಿಸಿದೆ ಎಂದು ಗ್ರಹಿಸುವುದು ಸಮ್ಮತವಲ್ಲ. ಏಕೆಂದರೆ ಉಸಿರುಗಟ್ಟಿಸುವ ವ್ಯವಸ್ಥೆಯಿಂದ ಹೊರಬಂದು ಕೊಂಚ ನಿರಾಳವಾಗುವ ನೈತಿಕ ಸ್ಥೈರ್ಯವನ್ನು ಉದ್ಯೋಗ ನೀಡಬಲ್ಲದು ಎಂಬ ಕಾದಂಬರಿಯ ನಿಲುವನ್ನು ಉಪೇಕ್ಷಿಸುವಂತಿಲ್ಲ. ಶಿವಲೀಲಾ, ಅಕ್ಕಮ್ಮಳಿಗೆ ಎದುರಾದ ಸನ್ನಿವೇಶ ಕಲ್ಯಾಣಿಯ ಬದುಕಲ್ಲಿ ಎದುರಾಗಿದ್ದರೆ ಅವಳಿಗೆ ದಿಟ್ಟತನದಿಂದ ಎದುರಿಸಲು ಸಾಧ್ಯವಿತ್ತೆ ಎಂದು ಪ್ರಶ್ನಿಸಿಕೊಂಡರೆ ನಮಗೆ ಕಾದಂಬರಿಯ ನಿಲುವಿನ ಔಚಿತ್ಯ ತಿಳಿಯುತ್ತದೆ.

೩

ಅಮರೇಶ ನುಗಡೋಣಿಯವರು ಚಿತ್ರಿಸುವ ಕಥನ ಜಗತ್ತಿನಲ್ಲಿ ಸಮುದಾಯಗಳ ಬದುಕು ಮಠ, ದೈವೀಕೇಂದ್ರದ ಜೊತೆ ಹೆಣೆದುಕೊಂಡ ಚಿತ್ರಣವು ಸಾಕಷ್ಟಿವೆ. ಮಠ, ಮಠದ ಗುರುಗಳ ದೈವಿಕ ಹಿಡತಕ್ಕೆ ಇಲ್ಲಿನ ಜನಗಳು ಒಳಗಾಗಿದ್ದಾರೆ. ಈ ಮಠದ ಪರಂಪರೆಯ ಜೊತೆಗೆ ಸಾಗುವ ಬದುಕಿನ ಚಿತ್ರಣ ಹಲವು ಕಥೆಗಳಲ್ಲಿದೆ. ಪ್ರಸ್ತುತ ಕಥನದಲ್ಲೂ ಈ ಚಿತ್ರಣವಿದೆ. ಈ ಕಾದಂಬರಿಯಲ್ಲಿ ಗೌರಿಹಬ್ಬದ ನೋಪಿ ಆಚರಣೆಯನ್ನೇ ಪ್ರಧಾನವಾಗಿದೆ. ಈ ಆಚರಣೆಗೆ ತಾಯಿಯ ಒತ್ತಾಯದ ಮೇರೆಗೆ ಚಿನ್ನೂರಿಗೆ ಬಂದ ಶಿವಲೀಲಾ, ಅಕ್ಕಮ್ಮ, ಶ್ರೀದೇವಿಯರ ಬದುಕು ಅನಾವರಣ ಗೊಳ್ಳುತ್ತದೆ. ಇಡೀ ಕಥೆ ದಿನದ ಅವಧಿಯಲ್ಲಿ ಗತದ ನೆನಪುಗಳ ಮೂಲಕ ಅನಾವರಣಗೊಂಡಿದೆ. ವರ್ತಮಾನದ ಜೀವನದ ಜಂಜಡಗಳಲ್ಲಿ ಸಿಲುಕಿದ ಈ ಮೂವರನ್ನು ನೋಪಿ ಪೂಜೆ ತನ್ಮಯತೆಗೆ ಈಡುಮಾಡಿದೆ. ದೈವಿಕ ಜಗತ್ತಿನ ಆಚರಣೆಯು ಅವರ ಮನವನ್ನು ತಟ್ಟಿದ ಚಿತ್ರಣವು ಇಲ್ಲಿದೆ. ಈ ಆಚರಣೆ ಈ ಗೌರಿಯರಿಗೆ ಬಿಡುಗಡೆಯ ದಾರಿಯಾಗಿ ಗೋಚರಿಸಿದಂತಿದೆ.

ಮಠವು ಆಧ್ಯಾತ್ಮಿಕ ಸಮಸ್ಯೆಗಳ ಪರಿಹಾರದ ದಾರಿಯನ್ನಷ್ಟೇ ಸೂಚಿಸುವುದಿಲ್ಲ. ದೈನಿಕ ಜೀವನದಲ್ಲಿ ಎದುರಾಗುವ ಸಮಸ್ಯೆಗಳ ಪರಿಹಾರಕ್ಕೂ ಮಠವನ್ನೇ ಆಶ್ರಯಿಸುತ್ತಾರೆ. ಹಾಗಾಗಿ ಮಠ, ಮಠದ ಗುರುಗಳು ಧಾರ್ಮಿಕ, ಭೌತಿಕ ಸಮಸ್ಯೆಗಳ

ನಿವಾರಣೆಯ ನಂಬುಗೆಯ ಕೇಂದ್ರವಾಗಿ ಕಾಣಿಸಿಕೊಂಡಿದ್ದಾರೆ. ಸದಾಶಿವಪ್ಪನಿಗೆ ಉದ್ಯಮಿ ರಾಜರೆಡ್ಡಿಯ ಹಿಂಬಾಲಕರಿಂದ ಉಂಟಾದ ಕಿರುಕುಳದಿಂದ ಪಾರು ಮಾಡಿದ್ದು ಮಠದ ಕಿರಿಯ ಸ್ವಾಮಿಗಳು. ಸದಾಶಿವಪ್ಪನು ಈಗ ಅನುಭವಿಸುತ್ತಿರುವ ಭೂಮಿಯು ಮಠದ ಹಿರಿಯ ಗುರುಗಳ ಸೂಚನೆ ಮೇರೆಗೆ ಕೊಂಡುಕೊಂಡದ್ದು. ಜನಬದುಕಿನ ಮೇಲಷ್ಟೇ ಅಲ್ಲದೆ ಅಲ್ಲಿನ ರಾಜಕೀಯವು ಮಠದ ಗುರುಗಳ ಹಿಡಿತಕ್ಕೆ ಒಳಗಾದ ಸೂಚನೆಯು ಕಥನದಲ್ಲಿದೆ. ಈ ಮಠವನ್ನು ಸುಧಾರಣೆಯ ಸೂಚಕವೆಂದೊ, ಮೌಢ್ಯ, ವಂಚನೆಯ ಸೂಚಕಗಳೆಂದೋ ಕಾಣುವ ಸೀಮಿತ ದೃಷ್ಟಿಕೋನ ಕಥನದಲ್ಲಿಲ್ಲ. ಸಮುದಾಯಗಳ ನಂಬಿಕೆ ಜಗತ್ತಿನ ಶ್ರದ್ಧೆಯ ಚಿತ್ರಣ ಇಲ್ಲಿದೆ. ಮಠ ಪರಂಪರೆಯ ಕಿರಿಯ ಗುರುಗಳು ಈ ನಂಬುಗೆಯ ಜಗತ್ತನ್ನು ನಾಶಗೊಳಿಸುತ್ತಿರುವ ಚಿತ್ರಣ ಇದೇ ಲೇಖಕರ ಕಥೆಗಳಲ್ಲಿ ಕಾಣುತ್ತೇವೆ. ಸಾಂತ್ವನದ ಕೇಂದ್ರಗಳಾಗಿದ್ದ ಮಠಗಳು ರಾಜಕೀಯದ ತಾಣವಾಗುತ್ತಿರುವ ವಿಷಾದವು ಅಮರೇಶ ನುಗಡೋಣಿಯವರ ಕಥನದಲ್ಲಿ ಕಾಣುತ್ತೇವೆ.

ಗೌರಿಯರು ಕಾದಂಬರಿಯು ಒಳಗೊಳ್ಳುವ ಜಗತ್ತು ಸೀಮಿತವಾದದ್ದು. ಒಂದು ಕುಟುಂಬದೊಳಗಿನ ಕಥನವೇ ಇಲ್ಲಿ ಪ್ರಧಾನವಾಗಿದೆ. ಆದರೆ ಕಥನ ತನ್ನ ತೆಕ್ಕೆಗೆ ಎಳೆದುಕೊಂಡ ಅನುಭವ ಲೋಕ ವಿಶಾಲವಾದುದು. ಶಿಕ್ಷಿತ ಆಧುನಿಕ ಮಹಿಳೆಯರು ಎದುರಿಸುತ್ತಿರುವ ತಲ್ಲಣ, ಆ ಒಳಬೇಗುದಿಗಳಿಂದ ಪಾರಾಗಿ ಬದುಕನ್ನು ಕಟ್ಟಿಕೊಳ್ಳುವ ಚಿತ್ರಣ ಇಲ್ಲಿದೆ. ಆಧುನಿಕ ಸ್ತ್ರೀ ಸಮಸ್ಯೆಗಳನ್ನು ಯಾವ ಸಿದ್ಧಾಂತ ಹಂಗಿಲ್ಲದೆ ಅವುಗಳ ಕೌಟುಂಬಿಕ ನೆಲೆಗಳಲ್ಲಿಟ್ಟು ಶೋಧಿಸುವ ಗುಣ ಈ ಕಾದಂಬರಿಯನ್ನು ವಿಭಿನ್ನವಾಗಿಸಿದೆ. ಅಮರೇಶ ನುಗಡೋಣಿಯವರು ತನ್ನ ಕಥೆಯ ನಿರೂಪಣೆಗೆ ಬಳಸುವ ಭಾಷೆಯ ಮೂಲಕ ಕಥನವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ. ಈ ಕಾದಂಬರಿಯು ಅದಕ್ಕೆ ಹೊರತಾಗಿಲ್ಲ. ಉದಾಹರಣೆಗೆ ನೋಪಿ ಆಚರಣೆಯನ್ನು ನಿರೂಪಿಸುವ ಭಾಗವನ್ನು ಗಮನಿಸಬಹುದು.

◆◆

೮

ಜಗತ್ತಿನ ಪಲ್ಲಟಗಳ ಒಂದು ಒಳನೋಟ–'ಗೌರಿಯರು'

ಜ್ಯೋತಿ ಎ.

ಅಮರೇಶ ನುಗಡೋಣಿಯವರ ಕಾದಂಬರಿ **ಗೌರಿಯರು** ವರ್ತಮಾನ ಜಗತ್ತಿನ ಪಲ್ಲಟಗಳು ಮತ್ತು ಅದರ ಪರಿಣಾಮವಾಗಿ ಉತ್ಪನ್ನವಾಗಿರುವ ಕೌಟುಂಬಿಕ ವ್ಯವಸ್ಥೆಗಳಲ್ಲಿನ ಮಾರ್ಪಾಡುಗಳು, ವಿಶೇಷವಾಗಿ ವಿಕಸಿತವಾಗುತ್ತಿರುವ ಹೆಣ್ಣಿನ ಅಸ್ಮಿತೆಯನ್ನು ಒಂದು ಹೂರಣವಾಗಿ ಕಟ್ಟಿಕೊಡುತ್ತದೆ. ಹಾಗಾಗಿ, ಇದನ್ನು ಪ್ರಸಕ್ತ ಕಾಲಘಟ್ಟವನ್ನು ಪ್ರತಿಬಿಂಬಿಸುವ ಒಂದು ಪ್ರಮುಖ ಕಾದಂಬರಿ ಎನ್ನಬಹುದು. ಇಲ್ಲಿ ಚರ್ಚಿತವಾಗಿರುವ ವರ್ತಮಾನ ಕಾಲದ ಸಾಮಾಜಿಕ ಪಲ್ಲಟಗಳನ್ನು ಬಹಳ ಸೂಕ್ಷ್ಮವಾಗಿ, ಮತ್ತು ಅಷ್ಟೇ ಸಂಯಮದಿಂದ ಚಿತ್ರಿಸಲಾಗಿದೆ. ಗೌರಮ್ಮನ ನೋಪಿ ಪೂಜೆಯ ನೆಪದಲ್ಲಿ ಬಹಳ ಕಾಲದ ನಂತರ ಒಟ್ಟುಗೂಡುವ ಒಂದು ಕುಟುಂಬದ ಹೆಣ್ಣುಮಕ್ಕಳು ಮತ್ತು ಇದಕ್ಕೆ ಜೋಡಣೆಯಾಗಿರುವ ಸಂಸಾರಗಳು ಹಂಚಿಕೊಳ್ಳುವ ನೋವು–ನಲಿವುಗಳ ಚಿತ್ರಣವನ್ನು ಓದುಗರಿಗೆ ಕೊಡುವುದರ ಮೂಲಕ, ಅಮರೇಶ ನುಗಡೋಣಿಯವರು ನಮ್ಮ ಸುತ್ತಲಿನ ಜಗತ್ತಿನಲ್ಲಿ ಆಗುತ್ತಿರುವ ಸೂಕ್ಷ್ಮ ಪಲ್ಲಟಗಳಿಗೆ ಕನ್ನಡಿ ಹಿಡಿಯುತ್ತಾರೆ. ಇಲ್ಲಿ ಚರ್ಚಿತವಾಗಿರುವ ಪ್ರಮುಖ ವಿಷಯಗಳೆಂದರೆ, ರೈತರ ವಿಭಿನ್ನ ಸಂಕಷ್ಟಗಳು, ವೈವಾಹಿಕ ಸಂಬಂಧಗಳ ವಿವಿಧ ಆಯಾಮಗಳು, ಕುಟುಂಬ ವ್ಯವಸ್ಥೆ ಹಾಗು ಪೀಳಿಗೆಗಳ ನಡುವಿನ ಅಂತರ ಮತ್ತು ಕಂಡುಕೊಳ್ಳಬೇಕಾದ ಪರಸ್ಪರ ಅರಿವು.

ವರ್ತಮಾನ ಕಾಲದಲ್ಲಿ ರೈತರ ಸ್ಥಿತಿಗತಿ

ಮೊದಲನೆಯದಾಗಿ, **ಗೌರಿಯರು** ವರ್ತಮಾನ ಕಾಲದ ರೈತರ ಸಂಕಷ್ಟಗಳಾದ ರೈತರ ಆತ್ಮಹತ್ಯೆ, ಸಾಲ ತೆಗೆದುಕೊಳ್ಳಲು ಒತ್ತಾಯಿಸುವ ಬ್ಯಾಂಕುಗಳು, ಬರಗಾಲದ ಸಮಸ್ಯೆಗಳು, ರೈತರು ಹಳ್ಳಿಗಳನ್ನು ಬಿಟ್ಟು ನಗರಗಳಿಗೆ ಗುಳೆ ಹೊರಡುತ್ತಿರುವುದು,

ರೈತರಿಗೆ ರಿಯಲ್ ಎಸ್ಟೇಟ್ ಉದ್ಯಮಿಗಳ ಕಿರುಕುಳಗಳನ್ನು ಬಹಳ ವಿಸ್ತೃತವಾಗಿ ಚಿತ್ರಿಸುತ್ತದೆ. ರೈತನಾಗಿಯೇ ತನ್ನ ಬದುಕನ್ನು ಸವೆಸಿದ ಶಿವಲಿಂಗಪ್ಪನ ಅಳಿಯ, ಬರಗಾಲದಿಂದಾಗಿ ಬೆಳೆ ತೆಗೆಯಲಾಗದೆ ಕುಟುಂಬದ ಜೀವನ ನಿರ್ವಹಣೆಗೆ ತನ್ನ ಮಾವನನ್ನು ಆಶ್ರಯಿಸಬೇಕಾಯಿತೆಂದು ಹಲುಬುತ್ತಾನೆ. ಉದ್ಯೋಗವನ್ನು ಅರಸಿಕೊಂಡು ಊರಿಗೆ ಊರೇ ಗುಳೆ ಹೊರಡುವಾಗ ಅವನೂ ಹೊರಟುನಿಂತರೆ, ಮನೆಯವರೆಲ್ಲಾ ಹೋಗಲು ಬಿಡದೇ ತಡೆಹಿಡಿದು, ಒಳ್ಳೆಯ ದಿನಗಳ ನಿರೀಕ್ಷೆಯಲ್ಲಿ ಇನ್ನಷ್ಟು ಕಾಯುವಂತೆ ಮಾಡುತ್ತಾರೆ. ಆದರೆ, ಸ್ವಾಭಿಮಾನಿಯಾದ ಅವನು ಬದುಕುವ ಎಲ್ಲಾ ಭರವಸೆಗಳನ್ನು ಕಳೆದುಕೊಂಡು ಹತಾಶೆಯಿಂದ ಆತ್ಮಹತ್ಯೆಗೆ ಶರಣಾಗುತ್ತಾನೆ. ಅವನಂತೆಯೇ, ಕೃಷಿಯಲ್ಲಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗದೆ, ಹಳ್ಳಿಯ ಜನರು ಇರುವುದನ್ನೆಲ್ಲಾ ಬಿಟ್ಟು ಸಾಮೂಹಿಕವಾಗಿ ನಗರಗಳತ್ತ ಹೆಜ್ಜೆಹಾಕುತ್ತಿರುವ ವಿದ್ಯಮಾನ ಕಾದಂಬರಿಯಲ್ಲಿ ಹಲವಾರು ಬಾರಿ ಪ್ರಸ್ತಾಪವಾಗಿದೆ. ಇದು, ಇತ್ತೀಚೆಗಿನ ವರ್ಷಗಳಲ್ಲಿ ಹೆಚ್ಚಾಗಿರುವ ವಿಷಾದಕರ ವಸ್ತುಸ್ಥಿತಿಯಾಗಿದೆ.

ಹಾಗೆಯೆ, ರೈತರಿಗೆ ತಮ್ಮ ಹಾಸಿಗೆಯಿದ್ದಷ್ಟೇ ಕಾಲು ಚಾಚದಂತೆ ನೋಡಿಕೊಳ್ಳುವ ಬ್ಯಾಂಕುಗಳ ಬಗ್ಗೆಯೇ ಉಲ್ಲೇಖವಿದೆ. ಈ ಬ್ಯಾಂಕುಗಳು, ತಮ್ಮ ಹೊಟ್ಟೆಬಟ್ಟೆಯನ್ನು ನಿರ್ವಹಿಸಿಕೊಂಡು ನೆಮ್ಮದಿಯಿಂದ ಇರಬಯಸುವ ರೈತರಿಗೆ ಬೈಕು, ಟ್ರ್ಯಾಕ್ಟರ್‌ಗಳ ಕನಸನ್ನು ತುಂಬಿ, ಅವುಗಳ ಮೇಲಿನ ಸಾಲವನ್ನು ಒತ್ತಾಯಪೂರ್ವಕವಾಗಿ ಹೇರಿ, ಆದರೆ ಅವುಗಳ ಕಂತು ಕಟ್ಟಲಾಗದಿರುವಾಗ ಮನೆಗಳಿಗೆ ವಸೂಲಿಗೆ ಜನರನ್ನು ಕಳಿಸಿ ಬೆದರಿಕೆ ನೀಡಿದಾಗ, ಮತ್ತು ಖರೀದಿಸಿದ ವಸ್ತುಗಳನ್ನು ಕಿತ್ತುಕೊಂಡಾಗ, ಸಾರ್ವಜನಿಕವಾಗಿ ಅವಮಾನಗೊಳ್ಳುವ ಬಡರೈತರು ಆತ್ಮಹತ್ಯೆ ಮಾಡಿಕೊಳ್ಳದೆ ಇನ್ನೇನು ಮಾಡಿಪಯಾರು? ರೈತರ ಆದಾಯವನ್ನು ಮೀರಿ ಸಾಲವನ್ನು ಒತ್ತಾಯಪೂರ್ವಕವಾಗಿ ಹೇರುವ ಬ್ಯಾಂಕುಗಳಿಗೆ, ಸಾಲ ತೀರಿಸುವಾಗ ಅವರು ಪಡುವ ಕಷ್ಟಗಳು ಕಾಣಿಸುವುದಿಲ್ಲವೇಕೆ? ತಮ್ಮ ಟಾರ್ಗೆಟ್ಟು ಮುಟ್ಟುವುದಕ್ಕಾಗಿ ಸಾಲವನ್ನು ಒತ್ತಾಯವಾಗಿ ಹೇರಿ, ಈ ಮುಗ್ಧ ಮನಸ್ಸುಗಳಲ್ಲಿ ಹುಚ್ಚು ಕನಸುಗಳನ್ನು ಬಿತ್ತಿ, ಅನಂತರ ಅವರನ್ನು ನಿರ್ದಾಕ್ಷಿಣ್ಯವಾಗಿ ಸಾವಿನ ಅಂಚಿಗೆ ತಳ್ಳುವ ಹಣಕಾಸಿನ ಸಂಸ್ಥೆಗಳಿಗೆ ಯಾಕೆ ಶಿಕ್ಷೆಯಾಗುತ್ತಿಲ್ಲ? ಇನ್ನು, ಮಳೆ ನೀರನ್ನೇ ಆಶ್ರಯಿಸಿ ಕೃಷಿ ಮಾಡುವ ರೈತರಿಗೆ, ಮಳೆ ಕೈಕೊಟ್ಟಾಗ, ದಿಕ್ಕು ತಪ್ಪುವುದು ಸಹಜ. ಆದರೆ, ಹೊಟ್ಟೆಪಾಡು ನಡೆಯಬೇಕಲ್ಲ? ಬರಗಾಲದಿಂದಾಗಿ, ತಾವು ಪ್ರೀತಿಯಿಂದ ಸಾಕಿದ್ದ ದನಕರುಗಳನ್ನು ಮಾರಿ, ಕೊಟ್ಟಿಗೆಗಳನ್ನು ಬರಿದು ಮಾಡಿಕೊಂಡಿರುವ ಮನೆಗಳು ಇಲ್ಲಿ ಸಿಗುತ್ತವೆ. ಇವು ಗತಕಾಲದ ನೆನಪುಗಳನ್ನು, ಈ ಕಾದಂಬರಿಯ ಪಾತ್ರಗಳಿಗೆ ಮರುಕಳಿಸುತ್ತವೆ. ಅಣ್ಣ ಸದಾಶಿವಪ್ಪನಂತೆ ಶಿಕ್ಷಣದಲ್ಲಿ ಆಸಕ್ತಿ ತೋರದೆ, ಕೃಷಿಯಲ್ಲಿಯೇ ತನ್ನ ಬದುಕಿನ ಅಸ್ತಿತ್ವ ಕಟ್ಟಿಕೊಂಡ ಶಿವಲಿಂಗಪ್ಪ, ಬದುಕಿನುದ್ದಕ್ಕೂ ಕಷ್ಟಪಡುತ್ತಾನೆ ಮತ್ತು ಸಾಲದಲ್ಲಿ

ಮುಳುಗುತ್ತಾನೆ. ಹಾಗಾಗಿಯೇ, ಅವನಿಗೆ, ತನ್ನ ಅಣ್ಣನಂತೆ ಮಕ್ಕಳಿಗೆ ಉತ್ತಮ ಸ್ವಾವಲಂಬಿ ಬದುಕು ಕೊಡಲಾಗುವುದಿಲ್ಲ. ಕೊನೆಯಲ್ಲಿ, ಅವನು ಸಾಲ ಮಾಡಿ ಕೊರಗುತ್ತಾ ಕುಳಿತದ್ದನ್ನು ನೋಡಲಾಗದೆ, ಅಣ್ಣನೇ ಅವುಗಳನ್ನು ಮರುಪಾವತಿಸುವ ವಾಗ್ದಾನ ನೀಡುತ್ತಾನೆ.

ಅವುಗಳಿಗಿಂತ ಭಿನ್ನವಾದ ಇನ್ನೊಂದು ಸಮಸ್ಯೆಯೆಂದರೆ, ಹೆದ್ದಾರಿಗಳ ಅಕ್ಕಪಕ್ಕದಲ್ಲಿರುವ ಕೃಷಿಭೂಮಿಗಳ ಮೇಲೆ ಕಣ್ಣುಹಾಕಿರುವ ಪ್ರಭಾವಶಾಲಿ ಉದ್ಯಮಿಗಳು ಹಾಕುವ ಜೀವ ಬೆದರಿಕೆಗಳು. ಇದರ ಬಿಸಿ ಸದಾಶಿವಪ್ಪನ ಅನುಭವಕ್ಕೆ ಬರುತ್ತದೆ. ತಾನು ಕಷ್ಟಪಟ್ಟು ಆಳುಗಳ ಸಹಾಯದಿಂದ ಬೆಳೆಸಿದ ತೋಟದ ಮುಂದೆ ಸಿದ್ಧಗೊಂಡ ಹೆದ್ದಾರಿ ಮತ್ತು ಅದರ ಫಲವಾಗಿ ಅಕ್ಕಪಕ್ಕದಲ್ಲಿ ಸೈಟುಗಳ ವ್ಯವಹಾರ ಜೋರಾದಾಗ, ಸದಾಶಿವಪ್ಪನಿಗೆ ತೋಟ ಮಾರಾಟಕ್ಕಿದೆಯೇ ಎನ್ನುವ ವಿಚಾರಣೆಗಳು ಹೆಚ್ಚಾಗ ತೊಡಗುತ್ತದೆ. ಆರಂಭದಲ್ಲಿ ಹೋಟೆಲ್ಮಾಡಲೆಂದು ಬಾಡಿಗೆಗೆ ಕೇಳಿದರೆ, ಮುಂದೆ ಬಾರ್ ತೆರೆಯುವ ಪ್ರಸ್ತಾಪ ಬರುತ್ತದೆ. ದಿನ ಕಳೆದಂತೆ, ಪ್ರಭಾವಿ ವ್ಯಕ್ತಿಗಳು ಮಾರಲೇಬೇಕೆಂಬ ಒತ್ತಡ ಮತ್ತು ಬೆದರಿಕೆ ಎರಡನ್ನೂ ಪ್ರಯೋಗಿಸುತ್ತಾರೆ. ಇದರಿಂದ ಸಾಕಷ್ಟು ಮಾನಸಿಕ ಒತ್ತಡ ಅನುಭವಿಸುವ ಸದಾಶಿವಪ್ಪ ಅದರಿಂದ ಬಚಾವಾಗು ವುದಂತೂ ಹರಸಾಹಸವೇ ಸರಿ. ವಾಸ್ತವದಲ್ಲಿಯೂ ಕೂಡ, ಇಂತಹ ಪ್ರಭಾವಿ ವ್ಯಕ್ತಿಗಳ ಬೆದರಿಕೆಗೆ ಬಡ ರೈತರು, ತಮ್ಮ ಭೂಮಿಯನ್ನು ಕಡಿಮೆ ದುಡ್ಡಿಗೆ ಮಾರುವ ಒತ್ತಡದಲ್ಲಿರುವುದು ಮಾತ್ರವಲ್ಲ, ತಮ್ಮ ಪ್ರೀತಿಯ ಕೃಷಿ ಕಾಯಕವನ್ನು ಕೈಬಿಡಬೇಕಾದ ಸಂದಿಗ್ಧತೆಯಲ್ಲಿದ್ದಾರೆ.

ಬಹುರೂಪದ ಗೌರಿಯರು

ಗೌರಿಯರು ಹೆಸರೇ ಸೂಚಿಸುವಂತೆ, ಗೌರಿಯರ ಕಥೆ. ಇಲ್ಲಿ ಬರುವ ಗೌರಿಯರು ಹೆಣ್ಣಿನ ಬೇರೆಬೇರೆ ರೂಪದಲ್ಲಿ ನಮ್ಮ ಮುಂದೆ ಪ್ರತ್ಯಕ್ಷವಾಗುತ್ತಾರೆ. ಸದಾಶಿವಪ್ಪನ ಹೆಂಡತಿ ಪಾರ್ವತಿ ಒಬ್ಬ ಸಾಂಪ್ರದಾಯಿಕ ಹೆಣ್ಣು ಮಗಳಾಗಿ, ಗಂಡನಿಗೆ ತಕ್ಕ ಹೆಂಡತಿಯಾಗಿ, ಕೂಡುಕುಟುಂಬದ ಆದರ್ಶ ಸೊಸೆಯಾಗಿ, ನಮಗೆ ಕಂಡರೆ, ಶಿವಲಿಂಗಪ್ಪನ ಹೆಂಡತಿ ಚೆನ್ನಮ್ಮ, ತಾನು ಬಲಗಾಲಿಟ್ಟು ಪ್ರವೇಶಿಸಿದ ಕೂಡು ಕುಟುಂಬವನ್ನು ಒಡೆದು ತನ್ನದೇ ಬೇರೆ ಸಂಸಾರ ಕಟ್ಟಿಕೊಳ್ಳಬೇಕೆನ್ನುವ ಮಹದಾಸೆ ಹೊತ್ತ ಹೆಣ್ಣು ಮಗಳಾಗಿ ಗೋಚರಿಸುತ್ತಾಳೆ. ಮನಸ್ಸುಗಳನ್ನು ಒಡೆಯುವ ಈ ಸ್ಪರ್ಧಾತ್ಮಕ ಗುಣ ಅವಳ ಮಗಳ ಬಾಳನ್ನು ಹಾಳು ಮಾಡುತ್ತದೆ, ಮಾತ್ರವಲ್ಲ, ಅವಳು ಬೇಗ ತನ್ನ ಜೀವನದ ಅಂತ್ಯ ಕಾಣುತ್ತಾಳೆ ಕೂಡ. ಚೆನ್ನಮ್ಮನ ಮಗಳು ಕಲ್ಯಾಣಿ, ಗಂಡನ ಆತ್ಮಹತ್ಯೆಯಿಂದಾಗಿ ಎಳೆಯ ವಯಸ್ಸಿನಲ್ಲಿ ವಿಧವೆಯಾದರೂ, ತನ್ನ ಮಗುವಿನೊಂದಿಗೆ ಗಂಡನ ಮನೆಯಲ್ಲಿ ಅತ್ತೆಮಾವನೊಂದಿಗೆ ದಿನಗಳೆಯುವ ನಿರ್ಧಾರ ತೆಗೆದುಕೊಳ್ಳುತ್ತಾಳೆಯೇ ಹೊರತು, ಮರಳಿ ತೌರುಮನೆಗೆ ಬರಲು

ಒಪ್ಪುವುದಿಲ್ಲ. ಗಂಡನಿಲ್ಲದ ಗಂಡನ ಮನೆಯಲ್ಲಿಯೇ ತನ್ನ ಅಸ್ತಿತ್ವ ಕಂಡುಕೊಳ್ಳುತ್ತಾಳೆ. ಪಾರ್ವತಿಯ ತಂಗಿ ದಾಕ್ಷಾಯಿಣಿ ತನ್ನ ಅಕ್ಕನ ಮೂವರು ಹೆಣ್ಣುಮಕ್ಕಳು, ಗಂಡನ ಹಂಗಿಲ್ಲದೆ ಸ್ವತಂತ್ರವಾಗಿ ತಮ್ಮ ಬದುಕನ್ನು ಕಟ್ಟಿಕೊಂಡಿರುವುದನ್ನು ಅರ್ಥ ಮಾಡಿಕೊಳ್ಳುವುದಲ್ಲದೆ, ತನ್ನಕ್ಕನಿಗೆ ಅವರ ನಿರ್ಧಾರಗಳನ್ನು ಮನಪೂರ್ವಕವಾಗಿ ಸ್ವೀಕರಿಸು ವಂತೆ ಬುದ್ಧಿವಾದ ಹೇಳುತ್ತಾಳೆ.

ಸದಾಶಿವಪ್ಪ ಮತ್ತು ಪಾರ್ವತಿ ದಂಪತಿಗಳ ಮೊದಲ ಮಗಳು ಶಿವಲೀಲಾ, ತನ್ನನ್ನು ಆರ್ಥಿಕವಾಗಿ ಹಿಂಡಿಹಿಪ್ಪೆ ಮಾಡಿದ ಗಂಡ ಚಂದ್ರಶೇಖರನಿಂದ ಬಿಡುಗಡೆ ಪಡೆಯುವ ನಿರ್ಧಾರವನ್ನು, ಹೆತ್ತವರ ಸಹಾಯವಿಲ್ಲದೆ ಸ್ವತಂತ್ರವಾಗಿ ತೆಗೆದುಕೊಳ್ಳುತ್ತಾಳೆ ಮತ್ತು ಮಗುವನ್ನು ಒಂಟಿಯಾಗಿ ಸಾಕುತ್ತಾಳೆ. ಎರಡನೆಯ ಮಗಳು ಅಕ್ಕಮ್ಮ ತನ್ನ ಗಂಡ ರಾಮಚಂದ್ರನ ಅಕ್ರಮ ಸಂಬಂಧಗಳಿಂದ ಬೇಸತ್ತು ಅವನಿಂದ ಬೇರೆಯಾಗುವುದು ಮಾತ್ರವಲ್ಲ, ಯಾವುದೇ ಬಂಧನಗಳಿಲ್ಲದ ಮುಕ್ತ ಸಂಬಂಧವನ್ನು ಸಿದ್ಧಾರ್ಥನ ಜೊತೆಗೆ ಬೆಳೆಸುತ್ತಾಳೆ ಮತ್ತು ಅವನಿಂದ ಒಂದು ಮಗುವನ್ನು ಪಡೆಯುತ್ತಾಳೆ. ಇನ್ನು, ಕೊನೆಯ ಮಗಳು ಶ್ರೀದೇವಿ ವೈವಾಹಿಕ ಬಂಧನದ ಅಗತ್ಯ ಕಾಣದೇ ತಾನು ಇಷ್ಟಪಟ್ಟ ಅರುಣ್‌ನೊಂದಿಗೆ ಲಿವ್-ಇನ್ ಸಂಬಂಧ ಬೆಳೆಸಿಕೊಳ್ಳುತ್ತಾಳೆ. ಅನಂತರ ಮದುವೆಯಾದರೂ ಅದರಲ್ಲಿ ಒಗ್ಗಿಕೊಳ್ಳಲು ಕಷ್ಟಪಡುತ್ತಾ ಅವನಿಂದ ದೂರವಾಗುತ್ತಾಳೆ. ಹೀಗೆ, ಶ್ರೀದೇವಿ ತನ್ನ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಸ್ವತಃ ತೆಗೆದುಕೊಳ್ಳುವ ಮತ್ತು ಅದಕ್ಕಾಗಿ ತಾನೇ ಬೆಲೆ ತೆರುವ ಹೆಣ್ಣುಮಗಳು.

ಈ ಪ್ರಕಾರ, ಇಲ್ಲಿ ಬರುವ ಗೌರಿಯರಲ್ಲಿ ಹಳೆಯ ಪೀಳಿಗೆಯ ಮಹಿಳೆಯರು ತಮಗೆ ಸಮಾಜ ಕಟ್ಟಿಕೊಟ್ಟ ಪರಿಮಿತಿಯೊಳಗೆ ಬದುಕುತ್ತಿದ್ದಾರೆ ಮತ್ತು ಇಂದಿನ ಪೀಳಿಗೆಯ ಹೆಣ್ಣುಮಕ್ಕಳು ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಾ ಸ್ವತಂತ್ರವಾದ ಬದುಕನ್ನು ಕಟ್ಟಿಕೊಂಡಿದ್ದಾರೆ ಎನ್ನಬಹುದು. ಆದರೆ, ಹಿರಿಯ ತಲೆಮಾರುಗಳು, ಹೊಸತಲೆಮಾರಿನ ಹೆಣ್ಣುಮಕ್ಕಳ ಸ್ವತಂತ್ರ ನಿರ್ಧಾರಗಳನ್ನು ಸಂಯಮದಿಂದ ಒಪ್ಪಿಕೊಳ್ಳುವ ವಿಕಸತನ ಕಂಡುಕೊಳ್ಳುವುದು ಇಲ್ಲಿನ ವಿಶೇಷ.

ವೈವಾಹಿಕ ಸಂಬಂಧಗಳ ಮರು ನಿರೂಪಣೆ

ಗೌರಿಯರು ಕಾದಂಬರಿಯಲ್ಲಿ ನಮಗೆ ವಿಭಿನ್ನ ಮಾದರಿಗಳ ವೈವಾಹಿಕ ಸಂಬಂಧಗಳ ಮುಖಾಮುಖಿಯಾಗುತ್ತದೆ. ಇಲ್ಲಿನ ಸದಾಶಿವಪ್ಪ ಮತ್ತು ಪಾರ್ವತಿ ದಂಪತಿಗಳದ್ದು ಸಮನ್ವಯದ ಸಂಸಾರ. ಮಕ್ಕಳನ್ನು ಚೆನ್ನಾಗಿ ಓದಿಸಿ ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾ ಅನುಭವಿಸುವ ನೋವು ನಲಿವುಗಳನ್ನು ಅರ್ಥಮಾಡಿಕೊಂಡು, ಅವರ ಸ್ವನಿರ್ಧಾರಗಳನ್ನು ಕಾಲಕ್ರಮೇಣ ಸ್ವೀಕರಿಸುತ್ತಾರೆ. ವಿಶೇಷವಾಗಿ, ಪಾರ್ವತಿಗೆ ಆರಂಭದಲ್ಲಿ ಸ್ವಲ್ಪ ಕಷ್ಟವೆನಿಸಿದರೂ, ನಿಧಾನವಾಗಿ ಅವುಗಳನ್ನು ಒಪ್ಪಿಕೊಂಡು, ಬದಲಾದ ತನ್ನ ಹೆಣ್ಣುಮಕ್ಕಳ ಬದುಕನ್ನು ತನ್ನದಾಗಿಸುವ ವಿಶಾಲತೆಯನ್ನು ಮುಟ್ಟುತ್ತಾಳೆ.

ಸದಾಶಿವಪ್ಪನ ತಮ್ಮ ಶಿವಲಿಂಗಪ್ಪ ಮತ್ತು ಚೆನ್ನಮ್ಮನ ಸಂಸಾರ ಒಂದು ರೀತಿಯಲ್ಲಿ, ಚೆನ್ನಮ್ಮನ ನಿಯಂತ್ರಣದಲ್ಲಿಯೇ ನಡೆದು, ಅವಳು ತೆಗೆದುಕೊಳ್ಳುವ ಕೆಲವು ಆತುರದ ಮತ್ತು ಅತಿಯಾದ ಸ್ವಾರ್ಥದ ನಿರ್ಧಾರಗಳು ಸಂಸಾರಕ್ಕೆ ಮುಳುವಾಗುವುದನ್ನು ನಾವು ನೋಡಬಹುದು. ಇನ್ನು ಕಲ್ಯಾಣಿ ತನ್ನ ಗಂಡನ ಆತ್ಮಹತ್ಯೆಯ ನಂತರ ಕೂಡ ಗಂಡನ ಮನೆಯಲ್ಲಿಯೇ ಉಳಿದುಕೊಂಡು, ಮಗನನ್ನು ಕಳೆದುಕೊಂಡ ತನ್ನ ಅತ್ತೆಮಾವನಿಗೆ ಆಶ್ರಯವಾಗಿರಲು ನಿರ್ಧರಿಸುವುದು ವಿಶೇಷವೇ ಸರಿ.

ಇನ್ನು ಈ ಕಾದಂಬರಿಯ ಮುಖ್ಯ ಪಾತ್ರಗಳಾದ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿ ಅವರ ವೈವಾಹಿಕ ಜೀವನಗಳು ಹೆಣ್ಣುಮಕ್ಕಳ ಗಟ್ಟಿತನಕ್ಕೆ ಒಂದು ಉದಾಹರಣೆ ಮಾತ್ರವಲ್ಲ, ಅವುಗಳು ಹೇಗೆ ವಿಕಸಿತವಾಗಿವೆ ಎನ್ನುವುದನ್ನು ನಾವಿಲ್ಲಿ ನೋಡಬಹುದು. ಶಿವಲೀಲಾ, ತನ್ನನ್ನು ಆರ್ಥಿಕವಾಗಿ ಶೋಷಣೆ ಮಾಡಿದ ಗಂಡನಿಂದ ಬಿಡುಗಡೆ ಪಡೆಯುವ ನಿರ್ಧಾರ ತೆಗೆದುಕೊಳ್ಳುವಾಗ ಗರ್ಭಿಣಿಯಾಗಿದ್ದಳು ಎನ್ನುವುದು ವಿಶೇಷ. ಆದರೂ, ವಿಚ್ಛೇದನ ಪಡೆದು, ಒಂಟಿಯಾಗಿ ಮಗುವನ್ನು ಸಾಕುವ ಧೈರ್ಯ ತೋರುತ್ತಾಳೆ. ಹಾಗೆಯೆ, ಅಕ್ಕಮ್ಮನಿಗೆ ತನ್ನ ಗಂಡ ವಿಷಯ ಲಂಪಟನೆಂದು ಗೊತ್ತಾದ ಮೇಲೆ ವಿಚ್ಛೇದನ ಪಡೆಯುವುದು ಮಾತ್ರವಲ್ಲ, ಅನಂತರ ತಾನು ಇಷ್ಟಪಟ್ಟ ಗಂಡಸಿನಿಂದ ಮಗುವನ್ನು ಪಡೆದು ಸಾಕುತ್ತಾಳೆ. ಅವನನ್ನು ಮದುವೆಯಾಗದಿರುವುದು ಅವಳಿಗೆ ಒಂದು ತೊಡಕಾಗಿ ಕಾಣಿಸುವುದಿಲ್ಲ. ಇದೊಂದು ಮುಕ್ತ, ಆದರೆ ಪ್ರೀತಿಯಿಂದ ಬೆಸೆದ ಸಂಬಂಧ. ಇದನ್ನು ಮೀರಿದ ಆಧುನಿಕ ಗಂಡು-ಹೆಣ್ಣಿನ ಸಂಬಂಧವನ್ನು, ನಾವು ಶ್ರೀದೇವಿ ಮತ್ತು ಅರುಣನ ನಡುವೆ ಕಾಣಬಹುದು. ಗಂಡು ಹೆಣ್ಣಿನ ಸಂಬಂಧ ಯಾವುದೇ ಬಂಧನಗಳಿಲ್ಲದೆ ಮುಕ್ತವಾಗಿರಬೇಕೆಂದು ಇಚ್ಛಿಸುವ ಶ್ರೀದೇವಿ, ಅದನ್ನು ನಿಭಾಯಿಸಲಾಗದೆ ಹೆಣಗಾಡುತ್ತಾಳೆ. ಇದಕ್ಕೆ ಹೊಂದಿಕೊಳ್ಳಲಾಗದ ಅರುಣ್ ಅವಳಿಂದ ದೂರವಾಗುತ್ತಾನೆ. ಆದರೆ, ಅವನನ್ನು ಮರೆಯಲಾಗದ ಶ್ರೀದೇವಿ ಪರಿತಪಿಸುತ್ತಾಳೆ. ಶ್ರೀದೇವಿಯ ಪಾತ್ರದ ಮೂಲಕ, ಸಂಬಂಧಗಳು ಕೇವಲ ಗಂಡಿನ ತಪ್ಪಿನಿಂದ ಮಾತ್ರ ಕೆಡುವುದಿಲ್ಲ, ಬದಲಾಗಿ, ಆ ತಪ್ಪನ್ನು ಹೆಣ್ಣು ಕೂಡ ಮಾಡಬಹುದು ಎನ್ನುವುದನ್ನು ಹೇಳಿದಂತಿದೆ. ಗಂಡು-ಹೆಣ್ಣಿನ ಸಂಬಂಧದಲ್ಲಿ ಪೂರ್ಣಪ್ರಮಾಣದ ಮುಕ್ತತೆ ಬೇಕೆಂದರೆ, ಎರಡೂ ಮನಸ್ಸುಗಳು ಮುಕ್ತವಾಗಿ ತೆರೆದುಕೊಂಡಿದ್ದರೆ ಮಾತ್ರ ಸಾಧ್ಯ ಎನ್ನುವುದನ್ನು ನಾವಿಲ್ಲಿ ಕಾಣಬಹುದು. ಹೀಗಾಗಿ, ಈ ಮನೆಯ ಮೂರು ಹೆಣ್ಣುಮಕ್ಕಳು ವೈವಾಹಿಕ ವ್ಯವಸ್ಥೆಗೆ ವಿಚ್ಛೇದನ ಕೊಟ್ಟು ಸ್ವತಂತ್ರವಾಗಿ ಬದುಕು ಕಟ್ಟಿಕೊಂಡವರು ಮತ್ತು ಯಾವುದೇ ಸಾಮಾಜಿಕ ಕಳಂಕಗಳಿಗೆ ಹೆದರದೆ ಬದುಕುತ್ತಿರುವವರು ಎನ್ನಬಹುದು.

ಪೀಳಿಗೆಗಳ ನಡುವಿನ ಅಂತರ ಮತ್ತು ಕಂಡುಕೊಳ್ಳಬೇಕಾದ ಪರಸ್ಪರ ಅರಿವು

ತಮ್ಮ ಮೂವರು ಹೆಣ್ಣುಮಕ್ಕಳನ್ನು ಚೆನ್ನಾಗಿ ವಿದ್ಯಾವಂತರನ್ನಾಗಿಸಿ ಸರಕಾರಿ ನೌಕರಿ ಪಡೆಯುವಂತೆ ಮಾಡಿದ ಸದಾಶಿವಪ್ಪ ಮತ್ತು ಪಾರ್ವತಿ ದಂಪತಿಗಳಿಗೆ,

ಅವರ ವೈಯಕ್ತಿಕ ಬದುಕನ್ನು ತಮ್ಮಿಂದ ಸರಿಪಡಿಸಲು ಸಾಧ್ಯವಾಗಲಿಲ್ಲ ಎಂಬ ನೋವು ಕಾಡುತ್ತಿರುತ್ತದೆ. ಆದರೆ, ಗೌರಮ್ಮನ ನೋಪಿ ಪೂಜೆಗಾಗಿ ಬಹಳ ಕಾಲದ ನಂತರ ಮನೆಗೆ ಮರಳಿದ ಹೆಣ್ಣುಮಕ್ಕಳ ಮೂಲಕ ಅವರವರ ವೈಯಕ್ತಿಕ ಬದುಕಿನ ಏಳು-ಬೀಳುಗಳ ವಾಸ್ತವದ ಅರಿವಿನ ನಂತರ, ಅವರು ತಂತಮ್ಮ ಬದುಕನ್ನು ಸಂಭಾಳಿಸಿದ ರೀತಿ ಹೆಮ್ಮೆ ತರುತ್ತದೆ. ಶಿವಲೀಲಾ ಗಂಡನಿಂದ ವಿಚ್ಛೇದನೆ ಪಡೆದು ತನ್ನ ಮಗನನ್ನು ಒಬ್ಬಳೇ ಧೈರ್ಯವಾಗಿ ಬೆಳೆಸುತ್ತಿರುವ ರೀತಿ ಅವರಿಗೆ ಮೆಚ್ಚುಗೆ ಯಾಗುತ್ತದೆ. ಅಕ್ಕಮ್ಮ ಕೂಡ ತನ್ನ ಸ್ತ್ರೀಲೋಲ ಗಂಡನಿಂದ ಬಿಡುಗಡೆ ಪಡೆದು, ಮುಂದೆ ತಾನು ಇಷ್ಟಪಟ್ಟ ಗಂಡಿನಿಂದ ಮಗುವನ್ನು ಪಡೆದು, ಆ ಮಗುವನ್ನು ಇಲ್ಲಿಗೆ ಕರೆದುಕೊಂಡು ಬಂದಿರುವುದು, ಆರಂಭದಲ್ಲಿ ಸಂಪ್ರದಾಯಸ್ಥ ಮನಸ್ಥಿತಿಯ ಪಾರ್ವತಿಗೆ ಇರಿಸುಮುರುಸಾದರೂ, ಕೊನೆಗೆ ಅದನ್ನು ತನ್ನ ಮೊಮ್ಮಗನೆಂದು ಒಪ್ಪಿಕೊಳ್ಳುವ ಸ್ಥಿತಿಗೆ ತಲುಪುತ್ತಾಳೆ. ಹಾಗೆಯೆ, ಸದಾಶಿವಪ್ಪ ಕೂಡ ಅಕ್ಕಮ್ಮನ ಮಗುವನ್ನು ತನ್ನ ಕಾಲಿನ ಮೇಲೆ ಕೂರಿಸಿಕೊಳ್ಳುವ ಮಟ್ಟಿಗೆ ಬದಲಾಗಿ, ಮಗಳ ಬದುಕಿಗೆ ಸಮ್ಮತಿ ಸೂಚಿಸುತ್ತಾರೆ. ಆದರೆ, ಅಕ್ಕಂದಿರಿಗಿಂತ ಇನ್ನೂ ಆಧುನಿಕವೆನಿಸುವ ಶ್ರೀದೇವಿಯ ಬದುಕು ಹೆತ್ತವರಿಗೆ ಸಂಪೂರ್ಣ ಅರ್ಥವಾಗದೆ ಹೋದರೂ, ಅವಳ ಬದುಕಿನ ನಿರ್ಧಾರಗಳನ್ನು ಅವಳ ಇಷ್ಟಕ್ಕೆ ಬಿಡುವಷ್ಟು ವಿಕಸಿತರಾಗುತ್ತಾರೆ. ಕೆಲವೊಮ್ಮೆ, ಪಾರ್ವತಿ ತನ್ನ ತಂಗಿ ದಾಕ್ಷಾಯಿಣಿಯಲ್ಲಿ, ತನ್ನ ಮನಸ್ಸಿನ ಕಸಿವಿಸಿಗಳನ್ನು ಹಂಚಿಕೊಳ್ಳುವುದು ಉಂಟು. ಆಗ ದಾಕ್ಷಾಯಿಣಿ ಅಕ್ಕನಿಗೆ ಸಮಾಧಾನ ಹೇಳುತ್ತಾಳೆ-ಬಿಟ್ಟುಬಿಡಕ್ಕ. ಕಾಲ ಬದಲಾಗಿದೆ, ಅವರಿಷ್ಟದಂತೆ ಬದುಕಲಿ. ಈಗ ನಮ್ಮ ಕಾಲವಲ್ಲ. ನಾವು ಕೂಡ ಕಾಲಕ್ಕೆ ತಕ್ಕಂತೆ ಬದಲಾಗಬೇಕೆನ್ನುತ್ತಾಳೆ.

ಹೀಗೆ, ಸದಾಶಿವಪ್ಪ ಮತ್ತು ಪಾರ್ವತಿ ತಮ್ಮ ಹೆಣ್ಣುಮಕ್ಕಳ ಸ್ವತಂತ್ರ ನಿರ್ಧಾರಗಳನ್ನು ಸ್ವೀಕರಿಸುವಷ್ಟು ಬದಲಾಗುವುದನ್ನು ನಾವಿಲ್ಲಿ ನೋಡಬಹುದು. ಅದೇ ರೀತಿಯಲ್ಲಿ, ಮೂವರು ಹೆಣ್ಣುಮಕ್ಕಳು ಕೂಡ, 'ತಮ್ಮ ಬದುಕಿನ ಭಾರ ತಮಗೆ' ಎನ್ನುವ ಧೋರಣೆ ಹೊಂದಿದ್ದು, ತಮ್ಮೆಲ್ಲಾ ಕಷ್ಟನಷ್ಟಗಳನ್ನು ತಾವೇ ನಿರ್ವಹಿಸುವ ನಿರ್ಧಾರ ತೆಗೆದು ಕೊಳ್ಳುತ್ತಾರೆ. ಅವರೆಂದೂ ಹೆತ್ತವರ ಮುಂದೆ ಕಣ್ಣೀರು ಹಾಕುವುದಿಲ್ಲ. ಬದಲಾಗಿ, ತಮ್ಮ ಜೀವನದಲ್ಲಿನ ಆಗುಹೋಗುಗಳನ್ನು ನಗುಮುಖದೊಂದಿಗೆ ಹೆತ್ತವರೊಂದಿಗೆ ಹಂಚಿಕೊಳ್ಳುತ್ತಾರೆ.

ಈ ಕಾದಂಬರಿಯ ಮೂವರು ಪ್ರಮುಖ ಹೆಣ್ಣುಮಕ್ಕಳ ದಾಂಪತ್ಯ ವಿಚ್ಛೇದನದಲ್ಲಿ ಅಂತ್ಯಗೊಂಡು, ಅನಂತರ ಪರ್ಯಾಯ ಬದುಕು ಕಟ್ಟಿಕೊಳ್ಳುವುದು ಒಂದು ರೀತಿಯಲ್ಲಿ ಏಕತಾನವಾಗಿ ಕಂಡರೂ, ಅದು ಅನಿವಾರ್ಯವೆನಿಸುತ್ತದೆ. ಇಲ್ಲಿನ ಹೆಣ್ಣುಮಕ್ಕಳು, ದೋಷಾರೋಪಣೆಯಿಲ್ಲದ ಮತ್ತು ರೋದನೆಯಿಲ್ಲದ ಬಿಡುಗಡೆಯ ವಿವಿಧ ಮಾದರಿಗಳನ್ನು, ತಮ್ಮ ಹೆತ್ತವರ ಅಥವಾ ಬಂಧು ಬಳಗಗಳ ಸಹಾಯವಿಲ್ಲದೆ

ಬಹಳ ಧೈರ್ಯವಾಗಿ ಕಂಡುಕೊಳ್ಳುವುದು ವಿಶೇಷವೆನಿಸುತ್ತದೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದ ಹೆಣ್ಣುಮಕ್ಕಳು, ಹೀಗೆ, ಸಾಮಾಜಿಕ ಕಟ್ಟುಪಾಡುಗಳಿಗೆ ಅಂಜದೆ, ತಾವು ಅನುಭವಿಸಿದ ನೋವುಗಳನ್ನು ಹಿಂದೆಬಿಟ್ಟು, ತಮ್ಮಿಷ್ಟದಂತೆ ಸ್ವತಂತ್ರವಾಗಿ ಬದುಕುತ್ತಾ, ಭವಿಷ್ಯವನ್ನು ರೂಪಿಸುವ ರೀತಿ ವಿಸ್ಮಯ ಹುಟ್ಟಿಸುತ್ತದೆ.

ಕೊನೆಯದಾಗಿ, ಜಗತ್ತಿನ ಎಲ್ಲಾ ಪಲ್ಲಟಗಳ ನಡುವೆ, **ಗೌರಿಯರು** ನಮಗೆ ಹೇಳುವ ಕಿವಿಮಾತೆಂದರೆ, ನಮ್ಮ ಸಮಸ್ಯೆಗಳನ್ನು ನಾವೇ ನಿರ್ವಹಿಸಬೇಕು, ಸುತ್ತಲಿನ ಸಮಾಜದ ಮಾತಿಗೆ ಅಂಜದೇ ತಮಗನಿಸಿದ ಬದುಕನ್ನು ನಿರ್ಭೀತಿಯಿಂದ ಕಟ್ಟಿಕೊಳ್ಳಬೇಕು. ಇದನ್ನು ನಮಗೆ ಶಿವಲೀಲಾ, ಅಕ್ಕಮ್ಮ, ಶ್ರೀದೇವಿ ಮತ್ತು ಕಲ್ಯಾಣಿ, ಎಲ್ಲರೂ ಸ್ವತಃ ತಾವು ಬದುಕುತ್ತಿರುವ ರೀತಿಯ ಮೂಲಕ ಹೇಳುತ್ತಾರೆ. ಒಟ್ಟಿನಲ್ಲಿ, ಅಮರೇಶ ನುಗಡೋಣಿಯವರ **ಗೌರಿಯರು** ಇಂದಿನ ಹೆಣ್ಣುಮಕ್ಕಳಿಗೆ ಮತ್ತು ಅವರನ್ನು ಹೆತ್ತವರಿಗೆ, ಬದುಕಿನ ಪಲ್ಲಟಗಳನ್ನು ಎದುರಿಸುವ ವಿವಿಧ ಮಾದರಿಗಳನ್ನು ಓದುಗರ ಮುಂದೆ ಪ್ರಕಟಿಸುತ್ತದೆ.

◆◆

೯

ಗೌರಿಯರು : ವಿಷಮ ದಾಂಪತ್ಯದ ಕಥನ

ಸಿ.ಎಸ್. ಭೀಮರಾಯ

ಪ್ರೊ. ಅಮರೇಶ ನುಗಡೋಣಿ ನಾಡಿನ ಮಹತ್ವದ ಕಥೆಗಾರ, ಕಾದಂಬರಿಕಾರ ಮತ್ತು ವಿಮರ್ಶಕರು. ಕಳೆದ ಮೂರುವರೆ ದಶಕಗಳಿಂದ ಕಥೆ, ಸಂಶೋಧನೆ ಮತ್ತು ವಿಮರ್ಶೆ ಪ್ರಕಾರಗಳಲ್ಲಿ ಅಮರೇಶ ನುಗಡೋಣಿಯವರ ಸಾಧನೆ ಪ್ರಮುಖವಾಗಿದೆ. ಸಣ್ಣ ಕಥೆಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾದ ಅಮರೇಶ ನುಗಡೋಣಿ ಈಗ ಕಾದಂಬರಿಯ ದೊಡ್ಡ ಬೀಸಿಗೆ ಜಿಗಿದಿದ್ದಾರೆ.

'ಗೌರಿಯರು' ಪ್ರೊ. ಅಮರೇಶ ನುಗಡೋಣಿಯವರ ಎರಡನೆಯ ಕಾದಂಬರಿ. ಹನ್ನೆರಡು ಅಧ್ಯಾಯಗಳನ್ನು ಈ ಕಾದಂಬರಿ ಒಳಗೊಂಡಿದೆ. ಹಳ್ಳಿ ಮತ್ತು ನಗರಗಳ ಆವರಣದಲ್ಲಿ ಸುತ್ತುತ್ತಲೇ ಕಥೆ ಸಮಕಾಲೀನ ಮಧ್ಯಮ ವರ್ಗದ ಕೌಟುಂಬಿಕ, ಔದ್ಯೋಗಿಕ, ಸಾಮಾಜಿಕ, ಕೃಷಿ, ಆರ್ಥಿಕ, ಸಾಂಸ್ಕೃತಿಕ ವಿಸ್ತಾರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಕಾದಂಬರಿಕಾರರು ಕಥನಕ್ಕಾಗಿ ಒಂದು ದಿನದ ಅವಧಿಯನ್ನು ಆಯ್ದುಕೊಂಡಿದ್ದಾರೆ. ಆದರೆ ಈ ಅವಧಿಯಲ್ಲಿ ಮೂರು ದಶಕಗಳ ಕಥನಗಳು ಬೇರೆ ಬೇರೆಯವರ ನೆನಪಿನಲ್ಲಿ ನಿರೂಪಿತವಾಗಿವೆ. ನಾಲ್ಕು ತಲೆಮಾರಿನವರ ಸಂಕೀರ್ಣ ಜೀವನದ ಹದಗೊಂಡ ಕಥನದ ನೇಯ್ಗೆ ಈ ಕಾದಂಬರಿಯನ್ನು ರೂಪಿಸಿರುವುದು ಕಂಡುಬರುತ್ತದೆ. ಸದಾಶಿವಪ್ಪ ಮತ್ತು ಶಿವಲಿಂಗಪ್ಪರ ಮೂಲಕ ರೈತ ಜೀವನದ ಸಂದಿಗ್ಧತೆ ಮತ್ತು ಸವಾಲುಗಳನ್ನು ಸೂಕ್ಷ್ಮವಾಗಿ ಕಾದಂಬರಿ ಪರಿಶೀಲಿಸುತ್ತದೆ. ಅಲ್ಲದೆ ಕಥಾನಕವನ್ನು ಮೂರು ಹೆಣ್ಣು ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿದ್ದು, 'ಗೌರಿಯರು' ಕಾದಂಬರಿಯ ಶೀರ್ಷಿಕೆಯು ಒಂದು ರೂಪಕಾತ್ಮಕವಾದುದು. ಈ ಕಾದಂಬರಿಯ ಕೇಂದ್ರ ಪಾತ್ರಗಳಾದ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರ ಸ್ವಭಾವಗಳು ಹಾಗೂ ತಮ್ಮ ಜೀವನ ಸಂದರ್ಭದಲ್ಲಿ ತಮಗೆ ಎದುರಾದ ಸಮಸ್ಯೆಗಳನ್ನು ತಾವು ಹೇಗೆ ಎದುರಿಸುತ್ತಾರೆ ಮತ್ತು ನಿಭಾಯಿಸುತ್ತಾರೆ, ಅವರು ತೆಗೆದುಕೊಳ್ಳುವ

ನಿರ್ಧಾರಗಳೇನು? ತನ್ನ ದಾರಿಯನ್ನು ತಾನೇ ಹುಡುಕಿಕೊಳ್ಳುವ ಒತ್ತಾಯ ಹೆಣ್ಣಿನ ಮೇಲೆ ಇದೆ ಎಂಬುದು ನಿಜಕ್ಕೂ ಅಮರೇಶ ನುಗಡೋಣಿಯವರ ಕಥಾನಕ ಶೈಲಿ ಗಮನಾರ್ಹವಾಗಿದೆ. ಅಪರೂಪವಾಗುತ್ತಿರುವ ಪ್ರಾದೇಶಿಕ ಸೊಗಡಿನೊಂದಿಗೆ ಆಧುನಿಕ ಚಿಂತನೆಯ ಎಳೆಗಳೂ ಸೇರಿಕೊಂಡ ಬದುಕಿನ ಒಂದು ದಟ್ಟ ನೇಯ್ಗೆಯನ್ನು ನಾವು ಇಲ್ಲಿ ಕಾಣುತ್ತೇವೆ. ಪ್ರಾದೇಶಿಕ ಸೊಗಡು, ಸ್ತ್ರೀ ಶೋಷಣೆ ಇವೆರಡೂ ಕನ್ನಡ ಕಥಾಲೋಕಕ್ಕೆ ಹೊಸದೇನಲ್ಲ. ಆದರೆ 'ಗೌರಿಯರು' ಕಾದಂಬರಿಯ ವಿಶಿಷ್ಟ ಛಾಪು ಇರುವುದು, ಈ ಪ್ರಾದೇಶಿಕ ಸೊಗಡಿನ ಸಂಸ್ಕೃತಿಯಲ್ಲಿ ಕ್ರಾಂತಿಕಾರಕವೆಂಬಂತೆ ಮೂಡುವ ಪ್ರತಿಭಟನಾ ಪ್ರಜ್ಞೋದಯದಲ್ಲಿ; ಇದು ಮಧ್ಯಮ ವರ್ಗದ ಕುಟುಂಬದಲ್ಲಿ ಸ್ವಲ್ಪಮಟ್ಟಿಗಾದರೂ ಉಂಟು ಮಾಡುವ ಪಲ್ಲಟದಲ್ಲಿ. ಈ ಕಾದಂಬರಿಯ ಭೂಮಿಕೆ ರಾಯಚೂರು ಸೀಮೆ. ವಾಸ್ತವವಾದೀ ಪರಂಪರೆಯ ಉತ್ತಮ ಕೃತಿಗಳನ್ನು ನೆನಪಿಗೆ ತರುವ ಈ ಕಾದಂಬರಿ ಆ ಬಗೆಯ ಪರಿಣಾಮ ಬೀರದಿದ್ದರೂ, ತನ್ನ ಕಥನಶಕ್ತಿಯಿಂದ ನಮ್ಮ ಗಮನ ಸೆಳೆಯುತ್ತದೆ. ಅಮರೇಶ ನುಗಡೋಣಿಯವರು ಸೊಗಸಾಗಿ ಕಥೆ ಹೇಳುತ್ತಾರೆ. ಇಂದು ನಮ್ಮ ಬದುಕಿಗೆ ಕಥೆಯ ಅಗತ್ಯವಿದೆ.

ಭಾರತೀಯ ಸಮಾಜದಲ್ಲಿನ ಮಹಿಳೆಯ ಸ್ಥಾನಮಾನ ಜಗತ್ತಿನ ಬೇರೆ ದೇಶಗಳಿಗಿಂತ ಸ್ವಲ್ಪ ಭಿನ್ನ. ಮಹಿಳೆಯರು ಬಹುತೇಕ ಕುಟುಂಬ ಹಾಗೂ ಮನೆಗೆಲಸಕ್ಕೆ ಅಂಟಿಕೊಂಡಿರುತ್ತಾರೆಂಬುದು ಹಳೆಯ ಹೇಳಿಕೆ. ಆದರೆ ಮಹಿಳೆ ಇತ್ತೀಚೆಗೆ ಬದಲಾಗುತ್ತಿದ್ದಾಳೆ. ಮಹಿಳೆ ಪುರುಷನ ಸಹಚಾರಿಣಿ; ಅವನಷ್ಟೇ ಮಾನಸಿಕ ಸಾಮರ್ಥ್ಯ ಹೊಂದಿದ್ದಾಳೆ, ಅವನಷ್ಟೇ ಸ್ವಾತಂತ್ರ್ಯದ ಹಕ್ಕನ್ನು ಹೊಂದಿದ್ದಾಳೆ. ಪುರುಷರು ತಮ್ಮ ಕ್ರಿಯಾಕ್ಷೇತ್ರಗಳಲ್ಲಿ ಯಾವ ರೀತಿಯ ಶ್ರೇಷ್ಠ ಸ್ಥಾನವನ್ನು ಹೊಂದಲು ಹಕ್ಕುವುಳ್ಳವರಾಗಿರುವರೋ ಅದೇ ರೀತಿ ತಮ್ಮ ಕ್ರಿಯಾ ಕ್ಷೇತ್ರಗಳಲ್ಲಿ ಮಹಿಳೆಯರೂ ಹೊಂದಿದ್ದಾರೆ. ಇದು ಸ್ವಾಭಾವಿಕವಾದ ಸ್ಥಿತಿಯಾಗಿರಬೇಕೇ ಹೊರತು ಓದು-ಬರಹ ಕಲಿತುದರ ಪರಿಣಾಮವಾಗಬಾರದು.

ಜಾಗತೀಕರಣದಿಂದ ಕುಟುಂಬಗಳು ಒಡೆದು ಹೋಗುತ್ತಿವೆ. ಜಾಗತೀಕರಣ ಕುಟುಂಬದ ಸದಸ್ಯರ ನಡುವಿನ ಸಂಬಂಧಗಳ ಮೇಲೆ ಗಾಢವಾದ ಪ್ರಭಾವ ಬೀರುತ್ತಿದೆ. ಕೌಟುಂಬಿಕ ಸಂಬಂಧವನ್ನು ಕಾಪಾಡುವ ಮೌಲ್ಯಗಳು ಅಸಹನೀಯವಾಗಿ ಬದಲಾಗಿವೆ. ಜಾಗತೀಕರಣ ಆಯ್ದ ಕೆಲವರಿಗೆ ಅಸಾಧಾರಣ ಆರ್ಥಿಕ ಸಾಮರ್ಥ್ಯವನ್ನು ತಂದುಕೊಡುತ್ತದೆ. ಆದರೆ ಅದು ರೂಪಿಸುವ ಜೀವನ ದೃಷ್ಟಿಯಾದರೂ ಎಂತಹದು? 'ಹೆಚ್ಚು-ಅತಿ ಹೆಚ್ಚು', 'ದೊಡ್ಡದು-ಮತ್ತಷ್ಟು ದೊಡ್ಡದು' ಎಂಬ ಪ್ರವೃತ್ತಿಯನ್ನು ಪೋಷಿಸುತ್ತದೆ. ಆಗ ಜೀವನ ಮೌಲ್ಯ, ಜೀವನ ಧರ್ಮ, ಮಾನವೀಯತೆ ಎಂಬುದು ಜನರ ಜೀವನದಲ್ಲಿ ಯಾವ ನಿರ್ಣಾಯಕ ಪಾತ್ರವನ್ನೂ ವಹಿಸುವುದಿಲ್ಲ. 'ಸಂಪಾದನೆ-ಬಳಕೆ'ಯ ಪ್ರಕ್ರಿಯೆ ಜಾಗತೀಕರಣದ ಬೆನ್ನೆಲುಬಾಗಿ ನಮ್ಮ ಜೀವನ ಮೌಲ್ಯಗಳನ್ನು ರೂಪಿಸುತ್ತಿದೆ. ತಂದೆ-ಮಕ್ಕಳ ನಡುವೆ, ಗಂಡ-ಹೆಂಡತಿ ನಡುವೆ, ಕುಟುಂಬದ

ಸಂಬಂಧಗಳು ತಮ್ಮದೇ ಹೊಸ ಸಮೀಕರಣಗಳನ್ನು ರೂಪಿಸಿಕೊಳ್ಳುತ್ತಿವೆ. ಗಂಡ-ಹೆಂಡತಿಯರಲ್ಲಿ ಪರಸ್ಪರ ಹೊಂದಾಣಿಕೆ ಕಡಿಮೆಯಾಗುತ್ತಿದೆ. ಹಿಂದೆ ಕಾಣದ ಹೊಸ ಸಂಬಂಧಗಳು ಕೂಡ ಈಗ ಹುಟ್ಟಿಕೊಳ್ಳುತ್ತಿರುವುದು ವಿಚಿತ್ರ ಸಂಗತಿ.

'ಗೌರಿಯರು' ಕಾದಂಬರಿಯ ಕಥಾನಕವು ತಮ್ಮ ಸ್ವಂತ ನಿರ್ಧಾರದ ಮೇಲೆ ನಡೆಯುವ ಮೂವರು ಹೆಣ್ಣುಮಕ್ಕಳ ಕೌಟುಂಬಿಕ ಬದುಕಿನ ಚಿತ್ರಣವನ್ನು ಒಳಗೊಂಡಿದೆ. ಗಂಡ-ಹೆಂಡತಿಯರ ನಡುವಿನ ಸಂಘರ್ಷವು ಅವರ ಕುಟುಂಬಗಳನ್ನು ದಾಟಿ ತುಸು ಸಾರ್ವಜನಿಕ ಎಂದು ಹೇಳಬಹುದಾದ ವಲಯವನ್ನು ಪ್ರವೇಶಿಸಿಬಿಡುತ್ತದೆ. ಈ ಕಾದಂಬರಿಯಲ್ಲಿ ಸಂಪ್ರದಾಯಬದ್ಧ ಗತಕಾಲ ಮತ್ತು ಬದಲಾಗುತ್ತಿರುವ ವರ್ತಮಾನ ಮುಖಾಮುಖಿಯಾಗುತ್ತವೆ. ಕಾದಂಬರಿಯಲ್ಲಿ ಅನೇಕ ಪ್ರಮುಖ ಪಾತ್ರಗಳು ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರ ಐತಿಹ್ಯದ ಕೇಂದ್ರಬಿಂದುವಿನಲ್ಲಿ ಮುಖಾಮುಖಿಯಾಗುತ್ತಲೇ ಸಂಬಂಧಗಳ ಸುಳಿಯಲ್ಲಿ ಹೊಸ ಬದುಕನ್ನು ಶೋಧಿಸಿಕೊಳ್ಳುತ್ತವೆ. ಸೊರಗಿದ ಸಂಬಂಧಗಳು ಮತ್ತು ಕಳಂಕಿತ ಸಂಬಂಧಗಳಿಂದ ಬಿಡುಗಡೆಗೆ ತವಕಿಸುತ್ತಲೇ ತಮ್ಮ ಬದುಕಿನ ಮಾರ್ಗಗಳಿಗೆ ಹುಡುಕಾಡುವ ಪರಿಯಲ್ಲಿ, ವಸ್ತು ಮತ್ತು ತಂತ್ರ ಎರಡೂ ದೃಷ್ಟಿಯಿಂದಲೂ ಅಮರೇಶ ನುಗಡೋಣಿಯವರ ಈ ಕಾದಂಬರಿ ವಿಭಿನ್ನವಾಗಿ ಕಾಣುತ್ತದೆ. ಸಾಂಪ್ರದಾಯಿಕ ಪರಿಕಲ್ಪನೆಗಳಿಂದ ಭಿನ್ನವಾಗಿ, ಹತ್ತಾರು ಪಾತ್ರಗಳ ಬದುಕು ತಂತಾನಾಗಿ ತೆರೆದುಕೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ಹೊಸ ಮೌಲ್ಯಗಳ ಅನ್ವೇಷಣೆಯೂ ಕಾಲಚಕ್ರದ ಸಹಜ ಕ್ರಿಯೆಯಂತೆ ಪಾತ್ರಗಳೊಳಗಿನಿಂದಲೇ ಹುಟ್ಟಿಕೊಳ್ಳುವುದು ಅಮರೇಶ ನುಗಡೋಣಿಯವರ 'ಕಾದಂಬರಿ ರಚನೆ' ಹೊಸ ದಿಕ್ಕಿನತ್ತ, ಹೊಸ ಸಾಧ್ಯತೆಗಳತ್ತ ಹೊರಳುತ್ತಿರುವುದರ ಸೂಚನೆಯಾಗಿದೆ. ಈ ಕಾದಂಬರಿಯಲ್ಲಿ ಸಂಕಥನದ ಓಟವಿದ್ದೂ ಹಳೆಯ 'ಅದೇ ಬದುಕು, ಅದೇ ರೀತಿ' ಮಾದರಿಗಳನ್ನು ಮೀರುವ ಆಶಯ ಸ್ಪಷ್ಟವಾಗಿ ಕಾಣುತ್ತದೆ. ವಿಷಮ ದಾಂಪತ್ಯದ ಅಸೌಖ್ಯವನ್ನು ಮೀರುವ ಹವಣಿಕೆಯಲ್ಲಿ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರು ಸಾಂಪ್ರದಾಯಿಕ ಲಕ್ಷ್ಮಣರೇಖೆಗಳನ್ನು ದಾಟುತ್ತಾರೆ. ಇದು ದಂಗೆಯೇಳುವ ಪರಿಯೆನಿಸಿದರೂ ನಿಜವಾದ ಬಂಡಾಯ ಮತ್ತು ನೈತಿಕತೆಯ ಕೆಲವು ಪ್ರಶ್ನೆಗಳು ಇಲ್ಲಿ ಹುಟ್ಟಿಕೊಳ್ಳುತ್ತವೆ. ಅಷ್ಟಾದರೂ ಪುರುಷ ನಿರ್ಮಿತ ನಿಯಮಗಳಿಗೆ ಪೆಟ್ಟು ಕೊಡುವಲ್ಲಿ ಈ ಕಾದಂಬರಿಯಲ್ಲಿನ ನಾಯಕಿಯರು ಯಶಸ್ವಿಯಾಗುತ್ತಾರೆ. ಭಾರತೀಯ ಸಮಾಜದ ಡಾಂಭಿಕತೆಯನ್ನು ಒಡೆಯುವ ಅಮರೇಶ ನುಗಡೋಣಿಯವರ ಕಾದಂಬರಿ ಸ್ವಚ್ಛಂದ ಮನಸ್ಸಿನ ಮಹಿಳೆಯರ ಮನೋವ್ಯಾಪಾರವನ್ನು ಯಥಾವತ್ತಾಗಿ ಚಿತ್ರಿಸುತ್ತದೆ. ಸೊರಗಿದ ಸಂಬಂಧಗಳು ಮತ್ತು ಕಳಂಕಿತ ಸಂಬಂಧಗಳಿಂದ ಬಿಡುಗಡೆಗೆ ತವಕಿಸುತ್ತಲೇ ತಮ್ಮ ಬದುಕಿನ ಮಾರ್ಗಗಳಿಗೆ ಹುಡುಕಾಡುವ ಪರಿಯಲ್ಲಿ, ವಸ್ತು ಮತ್ತು ತಂತ್ರ ಎರಡೂ ದೃಷ್ಟಿಯಿಂದಲೂ ನುಗಡೋಣಿಯವರ ಈ ಕೃತಿ ವಿಭಿನ್ನವಾಗಿ ಕಾಣುತ್ತದೆ.

ಹೊಸ ತಲೆಮಾರಿನ ಪ್ರಾತಿನಿಧಿಕ ಪಾತ್ರಗಳಾದ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿ ಹೆಚ್ಚಿನ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ನಗರವನ್ನು ಸೇರುತ್ತಾರೆ. ಆದರೆ ಅವರು ತಮ್ಮ ಬಾಲ್ಯವನ್ನು ಚಿನ್ನೂರು ಎಂಬ ಹಳ್ಳಿಯಲ್ಲೇ ಕಳೆದಿರುತ್ತಾರೆ; ನಾಲ್ಕೈದು ವರ್ಷಗಳ ನಂತರ ಅವರು ತಮ್ಮ ತಂದೆ-ತಾಯಿಯರನ್ನು ಕಾಣಲು ನಗರದಿಂದ ಚಿನ್ನೂರಿಗೆ ಬರುತ್ತಾರೆ; ತಂದೆ-ತಾಯಿಯರು ಇವರನ್ನು ಕರೆಸಲು ಗೌರಿ ನೋಪಿ ಪೂಜೆಯು ಒಂದು ನೆಪವಾಗಿರುತ್ತದೆ. ಒಂದೆಡೆ ಗೌರಿ ನೋಪಿ ಪೂಜೆಯ ಸಿದ್ಧತೆಗಳು ಭರದಿಂದ ನಡೆಯುತ್ತವೆ; ಇನ್ನೊಂದೆಡೆ ಈ ಮಹಿಳೆಯರು ತಮ್ಮ ವೈವಾಹಿಕ ಬದುಕು ಬಿರುಕುಗೊಂಡಿರುವುದನ್ನು ನಿವೇದಿಸಿಕೊಳ್ಳುತ್ತಾರೆ. ಅವರು ತಮ್ಮದಲ್ಲದ ತಪ್ಪುಗಳಿಗೆ ಪರಿತಪಿಸುವ ಸನ್ನಿವೇಶಗಳು ಇಲ್ಲಿ ನಿರ್ಮಾಣವಾಗುತ್ತವೆ. ಅವರ ಬದುಕಿನ ರೀತಿ ಗೌರಿ ನೋಪಿ ಪೂಜೆಯಲ್ಲಿ ಭಾಗಿಯಾದವರಲ್ಲಿ ಹಲವರಿಗೆ ಅಸಮಾಧಾನವನ್ನುಂಟು ಮಾಡುತ್ತದೆ. ಈಗ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರ ಬದುಕಿಗೆ ಅರ್ಥವುಂಟೇ ಎಂಬ ಪ್ರಶ್ನೆ ಓದುಗರಿಗೆ ಗಂಭೀರವಾಗಿ ಕಾಡುತ್ತದೆ.

ಗೌರಮ್ಮನಿಗೆ ನೋಪಿ ಪೂಜೆ ಮಾಡುವ ಸಂದರ್ಭದಲ್ಲಿ ಸೇರಿದ ಊರಿನ ಮಹಿಳೆಯರು ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರ ವೈವಾಹಿಕ ಬದುಕಿನ ಕುರಿತು ಹೇಳುವ ಮಾತುಗಳನ್ನು ಗಮನಿಸಿ:

"ಹರಿಶಿನ-ಕುಂಕುಮದ ಭರಣಿಯಿಂದ ಗೌರಿ ಹಣೆಗೆ ಬೆರಳಿನಿಂದ ಹಚ್ಚಿ ಅದನ್ನು ಮತ್ತೆ ಮನೆ ಮಂದಿಗೆ ಕೊಟ್ಟಳು ಹಂಪಮ್ಮ. "ತಾಳಿಗೆ ಹರಿಶಿನ-ಕುಂಕುಮ ಹಚ್ಚಿಕೊಳ್ರಮ್ಮ" ಎಂದು ಸೂಚಿಸಿದಳು. ಪಾರ್ವತಿ, ದಾಕ್ಷಾಯಿಣಿ ಇಬ್ಬರೂ ತಮ್ಮ ತಾಳಿಗಳನ್ನು ತೆಗೆದು ಲೇಪಿಸಿಕೊಂಡರು. ಭರಣಿ ಶಿವಲೀಲಾ ಕೈಯಿಗೆ ಹೋಯಿತು. ಹಣೆಗೆ ಹಚ್ಚಿಕೊಂಡಳು. ಅಕ್ಕಮ್ಮ, ಶ್ರೀದೇವಿನೂ ಹಣೆಗೆ ಹಚ್ಚಿಕೊಂಡರು. ಇವರು ನಿಂತಿದ್ದರಲ್ಲ, ಅಕ್ಕ-ಪಕ್ಕ ಕುಳಿತ ಊರ ಮುತ್ತೈದೆಯರು 'ತಾಳಿಗೆ ಹರಿಶಿನ-ಕುಂಕುಮ ಹಚ್ಚಿಕೊಳ್ರಮ್ಮ' ಎಂದು ಹೇಳತೊಡಗಿದರು. ಅಷ್ಟರಲ್ಲೇ ಭರಣಿ ಮರಳಿ ಹಂಪಮ್ಮನ ಕೈಯಿಗೆ ಹೋಗಿತ್ತು. 'ಎಂಥ ಕಾಲ ಬಂತು ನೋಡು!' 'ತಾಳಿನೂ ಹಾಕಿಕೊಳ್ಳದ ಮಕ್ಕಳು' ಅಂದಳು ಒಬ್ಬ ಮಹಿಳೆ. 'ಮದುವೆ ಆಗಿದೆ ಅಂತ ಏನು ಪಕ್ಕ?' ಅಂದಳು ಇನ್ನೊಬ್ಬ ಮಹಿಳೆ. 'ಅದನೂ ಖರೆ. ನಮ್ಮಂಗ ಜಲ್ದಿ ಮದುವೆ ಯಾಕ ಮಾಡಿಕೊಳ್ತಾರೇಳು?' ಅಂದಳು ಮತ್ತೊಬ್ಬ ಮಹಿಳೆ" (ಪುಟ-೧೩೪). ಗಂಡು-ಹೆಣ್ಣುಗಳ ಲೋಕದಿಂದ ಬೆಳೆಯಬೇಕಾದ ಕುಟುಂಬ ಪ್ರಪಂಚದ ಸುತ್ತಲಿನ ಹೊಸ ಬದುಕಿನ ವಿವರಗಳನ್ನು ಲೇಖಕರು ಹೆಣೆದಿದ್ದಾರೆ.

ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರ ತಂದೆ ಸದಾಶಿವಪ್ಪ, ತಾಯಿ ಪಾರ್ವತಿ. ಕಾದಂಬರಿಯ ಬೆಳವಣಿಗೆಯಲ್ಲಿ ಸದಾಶಿವಪ್ಪನ ಪಾತ್ರ ಮಹತ್ವಪೂರ್ಣ ವಾಗಿದೆ. ಅವನದು ಗಟ್ಟಿ ವ್ಯಕ್ತಿತ್ವ, ಮಕ್ಕಳಲ್ಲಿ ಅವನಿಗೆ ಅಪಾರ ಪ್ರೀತಿ. ಸದಾಶಿವಪ್ಪ

ತನ್ನ ಸಹೋದರನಾದ ಶಿವಲಿಂಗಪ್ಪನೊಂದಿಗೆ ಕೃಷಿ ಮಾಡುತ್ತ ಚೆನ್ನೂರಿನಲ್ಲಿ ವಾಸವಾಗಿದ್ದಾನೆ. ಸದಾಶಿವಪ್ಪನದು ಎಂಟು ಎತ್ತಿನ ಒಕ್ಕಲುತನದ ಮನೆತನ. ಮನೆ ಅಂಕಣದ ತುಂಬ ದನಕರಗಳು. ಮನೆಯ ಯಜಮಾನ ಸದಾಶಿವಪ್ಪ. ಒಕ್ಕಲುತನದ ಸಮಸ್ತ ಉಸ್ತುವಾರಿ ಶಿವಲಿಂಗಪ್ಪನದು. ಕಾದಂಬರಿಯಲ್ಲಿ ಪಾರ್ವತಿ, ದಾಕ್ಷಾಯಿಣಿ, ಶಿವಲಿಂಗಪ್ಪ, ಶರಣಬಸವ, ಚೆನ್ನಮ್ಮ, ಚಂದ್ರಕಲಾ, ಹಂಪಮ್ಮ, ಕಲ್ಯಾಣಿ, ಮಂಜುಳಾ ಮೊದಲಾದ ಪಾತ್ರಗಳು ತಮ್ಮ ವ್ಯಕ್ತಿ ವಿಶೇಷಗಳಿಂದ ಗಮನ ಸೆಳೆಯುತ್ತವೆ. ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿ –ಇವರೆಲ್ಲರಿಗೂ ಅವರದೇ ಆದ ಇತಿಹಾಸವಿದೆ. ಒಬ್ಬೊಬ್ಬರ ಬದುಕು ರೂಪುಗೊಳ್ಳುವ ಕ್ರಮದ ಬಗ್ಗೆಯೂ ಕಾದಂಬರಿಕಾರರ ಆಸಕ್ತಿ ಇದೆ. ಇದೇ ಕಾದಂಬರಿಯ ಮೂಲದ್ರವ್ಯ. ತಮ್ಮ ವೈಯಕ್ತಿಕ ಸಂಕಟಗಳನ್ನು ಗೆಲ್ಲುವ ಪ್ರಯತ್ನದಲ್ಲಿ ಅಮರೇಶ ನುಗಡೋಣಿಯವರ ಕೇಂದ್ರ ಪಾತ್ರಗಳು ಕಂಡುಕೊಳ್ಳುವ ಮೌಲ್ಯಗಳು ಸಾಮುದಾಯಿಕತೆಯ ಮೌಲ್ಯಗಳಲ್ಲ. ಸಂಪ್ರದಾಯದ ಪ್ರಧಾನಧಾರೆ ದುರ್ಬಲವಾದಾಗ ಬದುಕಿನ ಅನೇಕ ಸಾಧ್ಯತೆಗಳು ಅನಾವರಣಗೊಳ್ಳುತ್ತವೆ. ಹೊಸ ವಿಧದಲ್ಲಿ ಬದುಕು ರೂಪುಗೊಳ್ಳುತ್ತಾ ಹೋಗುತ್ತದೆ. ಮನುಷ್ಯ ತನ್ನ ಮಿತಿ–ಸಾಧ್ಯತೆಗಳ ನಡುವೆಯೇ ಜೀವನ ರೂಪಿಸಿಕೊಳ್ಳುವ ಕ್ರಮ ಕುತೂಹಲಕಾರಿಯಾದುದು. ಕಾದಂಬರಿ ಈ ಎಲ್ಲ ಸಾಧ್ಯತೆಗಳನ್ನು ಅನ್ವೇಷಿಸುತ್ತದೆ.

ಸದಾಶಿವಪ್ಪ ಮತ್ತು ಶಿವಲಿಂಗಪ್ಪ ಕೃಷಿಯನ್ನು ಒಂದು ಜೀವನ ವಿಧಾನವೆಂದು ಅರಿತವರು. ಬರಗಾಲ, ಸಾಲ, ಆತ್ಮಹತ್ಯೆಯ ಮೃತ್ಯು ಚಕ್ರಕ್ಕೆ ಸಿಲುಕಿರುವ ರೈತರ ವಾಸ್ತವ ಸ್ಥಿತಿಯನ್ನು ಸದಾಶಿವಪ್ಪ ಮತ್ತು ಶಿವಲಿಂಗಪ್ಪನವರ ಮಾತುಗಳಲ್ಲಿ ಗಮನಿಸಿ:

"*ಒಂದು ಆಸರೆಯಂತೂ ಇದೆ. ನೀನು ಪ್ರಯತ್ನ ಮಾಡಿ ಸರ್ಕಾರಿ ಕೆಲ್ಸಕ್ಕೆ ಜಿಗಿ. ಒಕ್ಕಲತನದಲ್ಲಿ ಹುರುಳಿಲ್ಲದಂತಾಗ್ಯಾದ. ಹೊಟ್ಟೆಪಾಡಿಗೆ ನಮ್ಮ ಕಣ್ಣು ಮುಂದೆ ಹೊಲ ಮನೆ ಬುಟ್ಟು ರೈತರು ನಗರಕ್ಕೆ ದುಡಿಯಲು ಹೊರಟು ಹೋದರು. ನೀರಾವರಿ ಇರುವ ನಮ್ಮ ಸೀಮೆಗಳ ಗತಿ ಹಿಂಗಾಗಿದೆ. ಇನ್ನ ಬಯಲ ಭೂಮಿ ಸೀಮೆಗಳಲ್ಲಿ ಒಕ್ಕಲತನ ನಿಂತೇ ಹೋಗ್ಯಾದ*" ಎಂದು *ಸದಾಶಿವಪ್ಪ ನಿಜ ಪರಿಸ್ಥಿತಿಯನ್ನು ಹೇಳಿದ. "ಹೊಲಗಳಿಗೆ ಮಾಡಿದ ಖರ್ಚು ಹೊಳ್ಳಿ ಬರದಿಲ್ಲ. ನಮ್ಮ ಹೊಲ್ದಾಗ ನಾವು ನಿಂತು ದಗದ ಮಾಡಿದ್ರೂ ಈ ಗತಿ ಐತೆ. ಕೂಲಿ ಮಂದಿನ್ನ ದಗದಕ್ಕೆ ಕರಕೊಂಡು ಮಾಡಿದ್ರ ಮೈತುಂಬ ಸಾಲ ಮಾಡ್ಕೊಳ್ಳುವ ಗತಿ ಬಂದಾದ" ಶಿವಲಿಂಗಪ್ಪ ತನ್ನ ಸ್ವ–ಅನುಭವದಿಂದ ಹೇಳಿದ........*" (ಪುಟ–೧೪೪). ಕೃಷಿ ಲಾಭವಿಲ್ಲದ ಬೇಸರದ ಪುನರಾವರ್ತಿತ ಗೊಡ್ಡು ಕೆಲಸವೆಂದೇ ಶಿವಲಿಂಗಪ್ಪನ ಭಾವನೆ. ಸ್ವಾತಂತ್ರ್ಯ ದೊರೆತು ಎಪ್ಪತ್ತೈದು ವರ್ಷಗಳು ಕಳೆದರೂ ಅಧಃಪತನದಿಂದ ಮೇಲೇಳದ ರೈತರ ಜೀವನ ನೋಡಿದವರಿಗೆ ಈ ಮಾತು ಸುಳ್ಳೆಂದು ಅನಿಸಲು ಸಾಧ್ಯವಿಲ್ಲ.

ಸದಾಶಿವಪ್ಪನೇ ತನ್ನ ಹಿರಿಯ ಮಗಳಾದ ಶಿವಲೀಲಾಳಿಗೆ ಮದುವೆಯ ಹುಡುಗನನ್ನು ಹುಡುಕುತ್ತಾನೆ. ತಂದೆ ನೋಡಿದ ಹುಡುಗನನ್ನು ಮದುವೆಯಾಗಲು

ಶಿವಲೀಲಾ ಒಪ್ಪಿಕೊಳ್ಳುತ್ತಾಳೆ. ಆದರೆ ಮದುವೆಯಾದ ಕೆಲವು ತಿಂಗಳುಗಳಲ್ಲಿಯೇ ಗಂಡ-ಹೆಂಡತಿಯರಲ್ಲಿ ಸಹಜವಾಗಿ ವೈಮನಸ್ಸು ಉಂಟಾಗುತ್ತದೆ. ಯಾಕೆಂದರೆ ಗಂಡನೇ ಕುಟುಂಬದಲ್ಲಿ ಎಲ್ಲ ನಿರ್ಣಯಗಳನ್ನು ತೆಗೆದುಕೊಳ್ಳುವವನಾಗಿರುತ್ತಾನೆ. ಇದರಿಂದಾಗಿ ಕುಟುಂಬದಲ್ಲಿ ಶಿವಲೀಲಾಳಿಗೆ ಆರ್ಥಿಕ ಸ್ವಾತಂತ್ರ್ಯವೇ ಇಲ್ಲದಂತಾಗುತ್ತದೆ. ಅವಳು ತನ್ನ ಗಂಡನ ಕುಟುಂಬದವರಿಗಾಗಿಯೇ ದುಡಿಯುವಂತಾಗುತ್ತದೆ. ಶಿವಲೀಲಾ ತಾನು ಗರ್ಭಿಣಿ ಎಂದು ಹೇಳಿದಾಗಲೂ ಗಂಡ ಚಂದ್ರಶೇಖರ ಪ್ರೀತಿಯಿಂದ ಸ್ಪಂದಿಸುವುದಿಲ್ಲ. ಅವಳು ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆಯಲ್ಲಿ ತನ್ನ ಪ್ರತಿಭೆ ಮತ್ತು ಕನಸುಗಳನ್ನು ಕಳೆದುಕೊಂಡವಳು; ತನ್ನ ಖಾಸಗಿ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ವಿರಸ ದಾಂಪತ್ಯದ ಕಹಿಯನ್ನು ಉಂಡವಳು. ಪುರುಷ ಪ್ರಧಾನತೆಯ ಹಿಂಸೆ, ಕಿರುಕುಳ ಮತ್ತು ಕ್ರೌರ್ಯಗಳಿಂದ ಅವಳು ರೋಸಿ ಹೋಗುತ್ತಾಳೆ. ಇದರಿಂದ ಅವಳು ವಿಮೋಚಿತಳಾಗಲು ನಿರ್ಧರಿಸುತ್ತಾಳೆ. ಶಿವಲೀಲಾ ಸ್ವತಂತ್ರ ಬದುಕಿಗಾಗಿ ಗಂಡನಿಂದ ಡೈವೋರ್ಸ್ ಪಡೆಯುತ್ತಾಳೆ. ಅವಳು ತಾನು ಹೆತ್ತ ಮಗುವಿನ ಬೆಳವಣಿಗೆಯ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾಳೆ. ಅವಳು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತನ್ನ ಸ್ಥಾನಮಾನ ಏನೇಂಬುವುದನ್ನು ಚೆನ್ನಾಗಿ ಅರಿತವಳು. ಈ ಹಿನ್ನೆಲೆಯಲ್ಲಿ ಶಿವಲೀಲಾ ದಿಟ್ಟತನದ ಹೆಣ್ಣಾಗಿ ಕಾಣುತ್ತಾಳೆ. ಶಿವಲೀಲಾ ಪಾತ್ರದಲ್ಲಿ ಒಂದಿಷ್ಟು ಸಂಯಮವಿರುವುದು ಎದ್ದು ಕಾಣುತ್ತದೆ.ಶಿವಲೀಲಾಳ ಬದುಕು ನೋವಿನದಾಗಿದೆ. ತನಗೊದಗುವ ಎಲ್ಲ ವಿಪತ್ತುಗಳನ್ನೆದುರಿಸುವ ಆಕೆ ತನ್ನ ನಿಷ್ಠೆ ಉಳಿಸಿಕೊಂಡೇ ಸಾಗುವುದು ಮೆಚ್ಚುವಂಥ ಅಂಶ. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಯಾವ ರೀತಿ ಶೋಷಣೆಗೆ ಒಳಪಡಿಸಿ ಅವಳನ್ನು ದುರಂತದತ್ತ ದೂಡುತ್ತದೆ ಎಂಬುದನ್ನು ಈ ಪಾತ್ರ ಪರಿಚಯಿಸುತ್ತದೆ.

ಕಾದಂಬರಿಯಲ್ಲಿ ಮತ್ತೊಂದು ಪ್ರಮುಖ ಪಾತ್ರ ಅಕ್ಕಮ್ಮಳದ್ದು. ಅವಳು ತನ್ನ ಹಠ ಮತ್ತು ಸಾಧನೆಗಳಿಂದ ಗಮನ ಸೆಳೆಯುತ್ತಾಳೆ. ಅಕ್ಕಮ್ಮಳ ಛಲ ಪುರುಷನನ್ನು ಮೀರಿ ನಿಲ್ಲುತ್ತದೆ. ಬ್ಯಾಂಕ್ ಉದ್ಯೋಗಿಯಾಗಿರುವ ಅಕ್ಕಮ್ಮಳಿಗೆ ಕಾಲೇಜು ಉಪನ್ಯಾಸಕನೊಬ್ಬನ ಪರಿಚಯವಾಗುತ್ತದೆ. ಇದು ಸ್ನೇಹಕ್ಕೆ ತಿರುಗುತ್ತದೆ; ಸ್ನೇಹವು ಪ್ರೇಮವಾಗಿ ರೂಪಾಂತರವಾಗುತ್ತದೆ. ಅಕ್ಕಮ್ಮ ತನ್ನ ತಂದೆ-ತಾಯಿಯರ ಹಂಗಿಲ್ಲದೆ ತಾನು ಮದುವೆಯಾಗುವ ಹುಡುಗನನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಅವಳು ತನ್ನ ವೈವಾಹಿಕ ಬದುಕಿನ ಕುರಿತು ತಾನಾಗಿಯೇ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಷ್ಟು ಪ್ರಬುದ್ಧಳಾಗಿ ಕಾಣುತ್ತಾಳೆ. ಅಕ್ಕಮ್ಮ ತಾನು ಪ್ರೀತಿಸಿದ ರಾಮಚಂದ್ರನೊಂದಿಗೆ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಮದುವೆಯಾಗುತ್ತಾಳೆ. ಅವಳು ಈ ವಿಚಾರವನ್ನು ತನ್ನ ತಂದೆ-ತಾಯಿಯರಿಗೆ ಸ್ವಲ್ಪ ದಿನಗಳ ನಂತರ ತಿಳಿಸುತ್ತಾಳೆ. ಆದರೆ ಗಂಡ ರಾಮಚಂದ್ರ ದುರ್ಗುಣಗಳಿಂದ ಕೂಡಿದ ವ್ಯಕ್ತಿ. ಅವನು ಮಹಾ ಲಂಪಟ; ಹೆಂಡತಿ ಇದ್ದಾಗಲೂ ಮತ್ತೊಂದು ಹೆಣ್ಣನ್ನು ಬಯಸುವ ಕಾಮುಕ. ರಾಮಚಂದ್ರ ಮನೆಗೆಲಸದ

ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ್ದು ಅಕ್ಕಮ್ಮಳ ಗಮನಕ್ಕೆ ಬರುತ್ತದೆ. ಅಷ್ಟೇ ಅಲ್ಲದೆ ಕಾಲೇಜಿನಲ್ಲಿಯೂ ರಾಮಚಂದ್ರನ ಮೇಲೆ ಲೈಂಗಿಕ ದೌರ್ಜನ್ಯದ ಆರೋಪಗಳು ಕೇಳಿಬರುತ್ತವೆ. ಇವುಗಳಿಂದ ಅಕ್ಕಮ್ಮ ಆಘಾತಕ್ಕೆ ಒಳಗಾಗುತ್ತಾಳೆ. ತನ್ನ ಗಂಡ ರಾಮಚಂದ್ರನ ಸಾಂದರ್ಭಿಕ ಅನಾದರ, ಕೆಟ್ಟ ನಡತೆ ಮತ್ತು ಸ್ವಪ್ರತಿಷ್ಠೆಗಳಿಂದ ಅಕ್ಕಮ್ಮ ದುಃಖಪಡುತ್ತಾಳೆ. ಇವುಗಳ ಕುರಿತು ರಾಮಚಂದ್ರನಿಗೆ ಪ್ರಶ್ನಿಸಿದಾಗ ಅವನು ಕೋಪಿಸಿಕೊಂಡು ಹೊರಟು ಹೋಗುತ್ತಾನೆ. ಅಕ್ಕಮ್ಮ ಗಂಡನ ದುರಾಸೆ ಮತ್ತು ಸ್ತ್ರೀಲೋಲುಪತೆಯನ್ನು ಆಘಾತದಿಂದಲೇ ಎದುರಿಸುತ್ತಾಳೆ. ಅಕ್ಕಮ್ಮ ರಾಮಚಂದ್ರನಿಂದ ಡೈವೋರ್ಸ್ ಪಡೆಯುತ್ತಾಳೆ. ಸ್ವಲ್ಪ ದಿನಗಳ ನಂತರ ಅಕ್ಕಮ್ಮಳಿಗೆ ಸಿದ್ಧಾರ್ಥ ಎಂಬ ಯುವಕನ ಪರಿಚಯವಾಗುತ್ತದೆ; ಆತನಿಂದ ಅವಳು ಒಂದು ಮಗುವನ್ನು ಪಡೆಯುತ್ತಾಳೆ. ಆದರೆ ಸಿದ್ಧಾರ್ಥನ ತಂದೆ–ತಾಯಿಯರು ವಿಚ್ಛೇದಿತಳಾದ ಅಕ್ಕಮ್ಮಳನ್ನು ಸಿದ್ಧಾರ್ಥ ಮದುವೆಯಾಗಲು ಒಪ್ಪುವುದಿಲ್ಲ. ಆದ್ದರಿಂದ ಅಕ್ಕಮ್ಮ 'ಸಿಂಗಲ್ ಮದರ್' ಆಗಿಯೇ ತನ್ನ ಮಗ ಶಿವನನ್ನು ಪೋಷಿಸುವ ಜವಾಬ್ದಾರಿ ತೆಗೆದುಕೊಳ್ಳುತ್ತಾಳೆ. ಅವಳದು ಗಟ್ಟಿ ಸ್ವಭಾವ.

ಕಾದಂಬರಿಯಲ್ಲಿ ಬರುವ ಮೂರನೇ ಮುಖ್ಯ ಪಾತ್ರವೆಂದರೆ ಶ್ರೀದೇವಿಯದ್ದು. ಶ್ರೀದೇವಿ ಪದವಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಸೇವೆಗೆ ಸೇರುತ್ತಾಳೆ. ಶ್ರೀದೇವಿ ದುಡುಕಿನ ಸ್ವಭಾವದವಳು. ಶ್ರೀದೇವಿ ತನ್ನ ಸಹದ್ಯೋಗಿ ಅರುಣನನ್ನು ಪ್ರೀತಿಸುತ್ತಾಳೆ. ಶ್ರೀದೇವಿ ಮತ್ತು ಅರುಣ ಪರಸ್ಪರ ಆಕರ್ಷಿತರಾದ ಪ್ರೇಮಿಗಳು. ಅರುಣ ಮತ್ತು ಶ್ರೀದೇವಿ ಪರಸ್ಪರವಾಗಿ ಚರ್ಚಿಸಿ ಮದುವೆಯ ಬಂಧನ ಬೇಡವೆಂದು ನಿರ್ಧರಿಸುತ್ತಾರೆ. ಅವರಿಬ್ಬರು 'ಲಿವ್ ಇನ್ ರಿಲೇಶನ್‌ಶಿಪ್' ಇಷ್ಟಪಟ್ಟು ಬದುಕುತ್ತಾರೆ. ಹಾಗೆ ನೋಡಿದರೆ ಅವರು ಗಂಡ–ಹೆಂಡತಿಯರೇನೂ ಅಲ್ಲ. ಆಕಸ್ಮಿಕವಾಗಿ ಕೂಡಿದ ಅವರು ಮದುವೆಯಾಗದಿದ್ದರೂ ಮದುವೆಯಾದವರ ಹಾಗೆಯೇ ಜೀವನ ನಡೆಸುತ್ತಾರೆ. ಒಂದು ರೀತಿಯಲ್ಲಿ ಅವರದು ಒಪ್ಪಂದದ ಕೂಡುವಿಕೆ. ಅಸಹಜ ಮತ್ತು ಕೃತ್ರಿಮವಾದ ಪ್ರೇಮ ಸಂಬಂಧ ಅವರದು. ಆದರೆ ಸ್ವಲ್ಪ ದಿನಗಳ ನಂತರ ಶ್ರೀದೇವಿ ಕಟ್ಟಳೆಗಳು ಒಂದೊಂದಾಗಿ ಶುರುವಾಗುತ್ತವೆ. ಅವಳ ಈ ವಿಚಿತ್ರ ವರ್ತನೆಯಿಂದ ಅರುಣ ಪರಿತಪಿಸುವಂತಾಗುತ್ತದೆ. ಶ್ರೀದೇವಿಯ ಮಾತು ಮತ್ತು ಧೋರಣೆಗಳಿಂದ ನೋಯುವ ಅರುಣ ಅಮಾಯಕನಂತೆ ಕಾಣುತ್ತಾನೆ. ಶ್ರೀದೇವಿ ವಿನಾಕಾರಣವಾಗಿ ಈ ಸಂಬಂಧವನ್ನು ಮುರಿದುಕೊಳ್ಳುತ್ತಾಳೆ. ಅವಳು ತೆಗೆದುಕೊಳ್ಳುವ ನಿರ್ಧಾರಗಳು ಸ್ಥಿರವಾಗಿರುವುದಿಲ್ಲ; ಅವು ಬದಲಾಗುತ್ತಲೇ ಹೋಗುತ್ತವೆ. ಅವಳು ತಾನು ಕೈಗೊಳ್ಳುವ ನಿರ್ಧಾರಗಳ ಉಚಿತಾನುಚಿತತೆಯನ್ನು ಅರಿಯದಷ್ಟು ವಿಚಿತ್ರ ಸ್ವಭಾವದವಳು. ಸಂಶಯ ಪಿಶಾಚಿ ಶ್ರೀದೇವಿ, ಅರುಣನ ನಡತೆಯನ್ನು ಸಂಶಯಿಸಿ ವಿನಾಕಾರಣ ಅವನಿಗೆ ತೊಂದರೆ ಕೊಡುತ್ತಾಳೆ. ಅವಳ ಅಕಾರಣವಾದ ಈ ವಿಚಿತ್ರ ವರ್ತನೆಯನ್ನು ಕಂಡ

ಅರುಣನಿಗೆ ಆಶ್ಚರ್ಯವಾಗುತ್ತದೆ. ಈ ಪಾತ್ರ ಹೆಣ್ಣಿನ ಅಹಂಭಾವದ ಪ್ರತೀಕವಾಗಿ ರಚನೆಯಾದಂತೆ ಕಂಡುಬರುತ್ತದೆ.

ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಾಗಿ ಬರುವ ಈ ಮೂವರು ಮಹಿಳೆಯರ ವಿಷಮ ದಾಂಪತ್ಯದ ಸುಳಿಗೆ ಸಿಕ್ಕ ಬದುಕಿನ ಸ್ಥೂಲವಾದ ಚಿತ್ರಣವಿದು. ಇಂಥ ವಿಷಮ ದಾಂಪತ್ಯದ ಕಥಾವಸ್ತುವನ್ನು ಬಹುಸೂಕ್ಷ್ಮವಾದ ನೆಲೆಯಲ್ಲಿ ಕಟ್ಟಿಕೊಡುವ 'ಗೌರಿಯರು' ಏಕಕಾಲಕ್ಕೆ ಕಥಾಪ್ರಧಾನ ಹಾಗೂ ಪಾತ್ರಪ್ರಧಾನ ಕಾದಂಬರಿಯಾಗಿದೆ. ಕಡಿಮೆ ಸಂಖ್ಯೆಯಲ್ಲಿರುವ ಪಾತ್ರಗಳ ಬದುಕೇ ಇಲ್ಲಿ ಕಥೆಯಾಗಿದ್ದು, ಅವು ಅನುಭವಿಸುವ ಅನುಭವಗಳು ಬಿಚ್ಚಿಕೊಂಡಂತೆ ಕಥೆ ಅಡೆತಡೆಯಿಲ್ಲದೆ ಸಾಗುತ್ತದೆ. ಕೌಟುಂಬಿಕ ಪ್ರೀತಿ ಮತ್ತು ಸಂಘರ್ಷಗಳ ದ್ವಂದ್ವಾತ್ಮಕ ನೆಲೆಯಲ್ಲಿ ಶಿವಲೀಲಾ-ಚಂದ್ರಶೇಖರ, ಅಕ್ಕಮ್ಮ-ರಾಮಚಂದ್ರ ಮತ್ತು ಶ್ರೀದೇವಿ-ಅರುಣರ ನಡುವಿನ ಸಂಬಂಧದ ಸ್ವರೂಪವನ್ನು ಅರಿಯುವ ಪ್ರಕ್ರಿಯೆಯನ್ನೇ ಲೇಖಕರು ಕಾದಂಬರಿಯಾಗಿಸಿದ್ದಾರೆ. ಕಾದಂಬರಿಯಲ್ಲಿ ಶಿವಲೀಲಾ, ಅಕ್ಕಮ್ಮ ಮತ್ತು ಶ್ರೀದೇವಿಯವರ ಕೌಟುಂಬಿಕ ಜೀವನದ ತೊಳಲಾಟಗಳು ಸಹಜವಾಗಿ ಚಿತ್ರಿತವಾಗಿವೆ. ಅಮರೇಶ ನುಗಡೋಣಿಯವರು ಚಿತ್ರಿಸುವ ಮಹಿಳೆಯರು ನಿರ್ಭಿಡೆಯ ವ್ಯಕ್ತಿತ್ವದವರು, ಅಪರಿಮಿತ ಸ್ವಾತಂತ್ರ್ಯವನ್ನು ಬಳಸಲು ಇಚ್ಛೆಪಡುವವರು. ದಾಂಪತ್ಯದಲ್ಲಿ ಹುಟ್ಟುವ ವಿರಸ, ವ್ಯಕ್ತಿ-ವ್ಯಕ್ತಿಗಳ ನಡುವೆ ಎಂಥ ಬಿರುಕನ್ನು ತರಬಲ್ಲುದೆಂಬುದಕ್ಕೆ ಈ ಕಾದಂಬರಿಯ ನಾಯಕಿಯರು ಸಾಕ್ಷಿಯಾಗಿ ನಿಲ್ಲುತ್ತಾರೆ. ಈ ಕಾದಂಬರಿಯಲ್ಲಿ ಮೇಲುನೋಟಕ್ಕೆ ಶಿಷ್ಟವೂ ಮತ್ತು ಆಧುನಿಕವೂ ಆಗಿರುವ ಜೀವನಕ್ರಮದೊಳಗೆ ಅಂತರ್ಗತವಾಗಿರುವ ಮೋಸ, ಹಿಂಸೆ, ಅತೃಪ್ತಿ, ಅಭದ್ರತೆ ಮತ್ತು ಹೊಸದಾಗಿ ಹುಟ್ಟಿಕೊಂಡಿರುವ ಹಲವು ಮನೋವಿಕಾರಗಳ ಸೂಕ್ಷ್ಮ ಚಿತ್ರಣವಿದೆ. ವಸ್ತು ಮತ್ತು ಪಾತ್ರಗಳು ಅಮರೇಶ ನುಗಡೋಣಿಯವರ ನಿರ್ಮಾಣವೇ ಆಗಿರುವ ಕಾರಣ ಅವು ಅವರು ನಡೆಸಿದಂತೆ ನಡೆದಿವೆ. ಈ ಪಾತ್ರಗಳು ತಮ್ಮ ವೈಯಕ್ತಿಕ ಸ್ತರದಲ್ಲಿ ವಿಹರಿಸುತ್ತವೆಯೇ ಹೊರತು ಅವುಗಳಿಗೆ ಸಾಮಾಜಿಕ ಜವಾಬ್ದಾರಿ ಎಂಬುದೇ ಇಲ್ಲ. ಸುಖದ ಬೆನ್ನು ಹತ್ತಿರುವ ನಗರದಲ್ಲಿ ವಾಸಿಸುವ ಗಂಡು-ಹೆಣ್ಣುಗಳ ಸಣ್ಣತನ, ಟೊಳ್ಳುತನ, ಅಸೂಕ್ಷ್ಮತೆ, ಅಮಾನವೀಯ ನಡವಳಿಕೆಗಳು ಒಂದು ಜೀವನಶೈಲಿಯೇ ಆಗಿರುವ ಬಗೆಯನ್ನು ಕಾದಂಬರಿಯು ವ್ಯಂಗ್ಯ, ವಿಡಂಬನೆ ಮತ್ತು ವಿಷಾದಗಳಲ್ಲಿ ದಾಖಲಿಸುತ್ತದೆ.

ಅಮರೇಶ ನುಗಡೋಣಿಯವರು ಮನುಷ್ಯನ ಸುಪ್ತ ಮನಸ್ಸಿನ ಪರಿಚಯವನ್ನು ಕಾದಂಬರಿಯಲ್ಲಿ ಬರುವ ಪಾತ್ರಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇಲ್ಲಿಯ ಅನೇಕ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ಮಾನಸಿಕ ತುಮುಲತೆಗೆ ಒಳಗಾಗಿರುವುದು ಕಂಡುಬರುತ್ತದೆ. ತಮ್ಮ ಕನಸುಗಳನ್ನು ಬಲಪ್ರಯೋಗ ಮಾಡಿಯಾದರೂ ನನಸಾಗಿಸಲೆತ್ನಿಸುವ ವ್ಯಕ್ತಿಗಳ ಪ್ರಯತ್ನದಲ್ಲಿ ಉಳಿದವರು ಸಿಕ್ಕಿ

ನರಳುತ್ತಾರೆ. ವ್ಯೂಹ-ಪ್ರತಿವ್ಯೂಹಗಳು ಒಂದಕ್ಕೊಂದು ತಾಕಲಾಡಿ ಸಂಘರ್ಷ ಉಂಟಾಗುತ್ತದೆ. ಸಂಕೀರ್ಣ ಮತ್ತು ನಿಗೂಢತೆಗಳಿಂದ ಕೂಡಿದ ಸಂಬಂಧಗಳಲ್ಲಿ ಕ್ರೂರ ಸಾಮಾಜಿಕ ವಾಸ್ತವಕ್ಕೆ ಒಗ್ಗದ ಮನುಷ್ಯನ ಅಂತಃಕರಣವನ್ನು ತೋರಿಸುತ್ತಾರೆ. ತಾವು ಹೆಣೆಯುವ ಬಲೆಯಲ್ಲಿ ತಾವೇ ಸಿಕ್ಕಿ ಪಾತ್ರಗಳು ಒದ್ದಾಡುತ್ತವೆ. ಈ ಕಾದಂಬರಿಯಲ್ಲಿ ಮಾನವೀಯ ಸಂಬಂಧ, ಹೋರಾಟ ಸಫಲತೆ, ವೈಫಲ್ಯ, ಸ್ವಾರ್ಥ, ತಳಮಳ, ಅಳಸಿಹೋದ ಸಂಬಂಧಗಳ ಶೋಧನೆ ಇದೆ. ಹಳ್ಳಿ- ನಗರಗಳಲ್ಲಿ ವಾಸಿಸುವ ವಿಭಿನ್ನ ವರ್ಗಗಳ ಮಾನಸಿಕ ಸ್ಥಿತಿ, ಮನೋಭಿಲಾಷೆ, ಅಲ್ಲಿಯ ಯಾತನೆ ಈ ಕಾದಂಬರಿಯಲ್ಲಿ ಅಂತರ್ಗತವಾಗಿರುವುದು ಕಂಡುಬರುತ್ತದೆ. ಪ್ರತಿಯೊಂದು ಪಾತ್ರಗಳ ಭಾವುಕ ಮನೋಭಾವ, ಮಾನಸಿಕ, ಸಾಮಾಜಿಕ, ಕೌಟುಂಬಿಕ ಒತ್ತಡಗಳಿಂದ ನಿರ್ಬಂಧಿತವಾದ ಮನುಷ್ಯ ಸ್ವಭಾವವನ್ನು ನಿರ್ಲಿಪ್ತವಾಗಿ ಅವಲೋಕಿಸುವ ದೃಷ್ಟಿಕೋನ ಈ ಕಾದಂಬರಿಯಲ್ಲಿ ಅನಾವರಣಗೊಂಡಿದೆ. ಈ ಕಾದಂಬರಿ ಸ್ತ್ರೀ ಸ್ವಾತಂತ್ರ್ಯದ ಕೆಚ್ಚು, ಆಧುನಿಕ ವಿಚಾರವಂತಿಕೆ, ಮನುಷ್ಯನ ವಿಚಿತ್ರ ತೆವಲು ಮತ್ತು ಮನೋ ವರ್ತನೆಗಳನ್ನು ತೋರಿಸುವುದಷ್ಟಕ್ಕೆ ಸೀಮಿತವಾಗಿಲ್ಲ, ಸ್ತ್ರೀ ಮನಸ್ಸಿನೊಳಗಡೆ ಬೀಸುವ ದಟ್ಟ ಬಿರುಗಾಳಿಯನ್ನೂ, ಸುಳಿವ ತಂಗಾಳಿಯನ್ನೂ ಓದುಗರು ಅನುಭವಿಸಬಹುದಾಗಿದೆ.

'ಗೌರಿಯರು' ಕಾದಂಬರಿಯಲ್ಲಿ ಅಮರೇಶ ನುಗಡೋಣಿ ಮನುಷ್ಯ ಸಂಬಂಧಗಳನ್ನು ನಿರ್ವಹಿಸಿರುವ ರೀತಿ ಅವರ ಸೂಕ್ಷ್ಮತೆ ಮತ್ತು ಪ್ರಬುದ್ಧತೆಗಳಿಗೆ ಸಾಕ್ಷಿಯಾಗಿದೆ; ಒಂದು ಜೀವನಕ್ರಮವನ್ನು ಅದಕ್ಕೆ ನಿಕಟವಾದ ಭಾಷೆ, ಪರಿಭಾಷೆ, ನುಡಿಗಟ್ಟು, ನಂಬಿಕೆ, ಆಚರಣೆ ಮತ್ತು ಪುರಾಣಗಳ ಮಟ್ಟದಲ್ಲಿಯೇ ಹಿಡಿಯುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ತಮ್ಮ ಪಾತ್ರಗಳನ್ನು ತೀವ್ರವಾದ ಸಂಘರ್ಷಗಳಿಗೆ ದೂಡಿದರೂ ಅವುಗಳನ್ನು ಲೇಖಕರು ಕಪ್ಪು-ಬಿಳುಪು ಪಾತ್ರಗಳಾಗಿ ಮಾಡುವುದಿಲ್ಲ. ಒಂದೇ ಸನ್ನಿವೇಶದಲ್ಲಿ ಅವರ ವ್ಯಕ್ತಿತ್ವದ ಹಲವು ಗುಣಗಳು ಮತ್ತು ಸಾಧ್ಯತೆಗಳು ವ್ಯಕ್ತಗೊಂಡು ಕಾದಂಬರಿಯು ಕಟ್ಟಿಕೊಡುವ ಅನುಭವ ಸಮೃದ್ಧವಾಗುತ್ತದೆ. ಒಂದೊಂದು ಕುಟುಂಬದ ಕಥೆಯೂ ಒಂದೊಂದು ಪ್ರತ್ಯೇಕ ಸ್ವತಂತ್ರ ಕಾದಂಬರಿಯಾಗಿ ಬೆಳೆಯಬಲ್ಲ ವಸ್ತು ಸಮೃದ್ಧಿ ಈ ಕಾದಂಬರಿಯಲ್ಲಿದೆ. ಪ್ರಸ್ತುತ ರಚನೆಯಲ್ಲಿ ಅವು ಒಗ್ಗೂಡಿ ನಿರೂಪಣೆಯು ಸಾಂದ್ರವಾಗಿಯೂ, ಕಥೆಯು ಅಡಕವಾಗಿಯೂ ಮೂಡಿಬಂದಿದೆ. ಈ ಕಾದಂಬರಿಯಲ್ಲಿ ಕೆಲವು ಘಟನೆಗಳು, ವಿವರಗಳು ಮತ್ತು ಸಂಗತಿಗಳು ಅಸಹಜವೆನಿಸಿದರೂ ಇವು ಕೃತಿಯ ವಸ್ತುವಿಗೆ ಪೂರಕವಾಗಿದ್ದು, ಈ ವಸ್ತುವಿನ ಅಂತರಂಗದ ಶೋಧ ನಡೆಸುತ್ತವೆ. ಮಧ್ಯಮ ವರ್ಗದ ಬದುಕನ್ನು ನಿಷ್ಠುರವಾಗಿ, ಆದರೆ ಅನುಕಂಪದಿಂದ ಕಂಡಿರುವ ಕ್ರಮ ನೈತಿಕ ಸೂಕ್ಷ್ಮಗಳನ್ನು ಒಳಗೊಂಡಿದೆ. ಗಂಡ-ಹೆಂಡತಿ ಸಂಬಂಧ, ಸಾಮಾಜಿಕ, ಆರ್ಥಿಕ, ಕೃಷಿ, ಕೌಟುಂಬಿಕ ಸಮಸ್ಯೆ, ಶೋಷಣೆ, ಆಧುನಿಕತೆಯ ಪ್ರಭಾವದಿಂದ ಉಂಟಾಗಿರುವ ಸಮಸ್ಯೆಗಳೆಲ್ಲವೂ ಇಲ್ಲಿ ಶೋಧನೆಗೆ ಒಳಗಾಗಿ ಅವುಗಳ ಒಳಿತು-

ಕೆಡಕು ಓದುಗರ ಎದೆತಟ್ಟುತ್ತವೆ. ಇವುಗಳನ್ನು ಆಯಾ ಪಾತ್ರಗಳ ಬದುಕಿನಲ್ಲೇ ಗ್ರಹಿಸಿ ಅನಾವರಣಗೊಳಿಸಿರುವ ರಚನಾ ವಿನ್ಯಾಸ ಈ ಕಾದಂಬರಿಯದ್ದು. ಕಾದಂಬರಿಗೆ ಒಂದೆರಡು ಮಿತಿಗಳಿವೆ. ಇಲ್ಲಿಯ ಕಥನ ಶೈಲಿ ಸಹಜವಾಗಿದೆಯಾದರೂ ಕಲಾತ್ಮಕತೆಯ ಕೊರತೆ ಎದ್ದು ಕಾಣುತ್ತದೆ. ತಾತ್ವಿಕ ಶೋಧನೆಗಿಂತಲೂ ಹೆಚ್ಚಾಗಿ ಕಥೆಯ ನಿರೂಪಣೆ ಕಣ್ಣಿಗೆ ಕಾಣುವ ವಸ್ತುಗಳ ವಿವರಣೆಯಲ್ಲಿ ನುಗಡೋಣಿಯವರಿಗೆ ಹೆಚ್ಚಿನ ಆಸಕ್ತಿ. ಆದ್ದರಿಂದ ಇಲ್ಲಿಯ ಕಥೆಯ ಬೆಳವಣಿಗೆ, ಅದಕ್ಕೆ ಪೂರಕವಾಗುವ ಘಟನೆಗಳ ವಿವರಣೆ ಕೂಡ ಕಾದಂಬರಿಕಾರರ ಗಮನ ಹೆಚ್ಚಾಗಿದೆ. ವಸ್ತುವಿನ ವಾಸ್ತವತೆ, ಅದರ ಅಭಿವ್ಯಕ್ತಿ ತಂತ್ರದಲ್ಲಿನ ಸಹಜತೆ ಮತ್ತು ಸರಳತೆಗಳಿಂದ ಅಮರೇಶ ನುಗಡೋಣಿಯವರ 'ಗೌರಿಯರು' ಒಂದು ವಿಶಿಷ್ಟ ಕಾದಂಬರಿಯಾಗಿದೆ.

◆◆

೧೦

ಉರದಲ್ಲಿ ಮುಳ್ಳುಂಟೆಂದು ಅಪ್ಪಲಾರೆ

ಶೈಲಜ ಇಂ. ಹಿರೇಮಠ

ಅಮರೇಶ ನುಗಡೋಣಿ ಅವರ **ಗೌರಿಯರು** ಕಾದಂಬರಿಯು ಪ್ರಧಾನವಾಗಿ ಎರಡು ವಿಷಯಗಳಿಗೆ ಆದ್ಯತೆ ನೀಡುತ್ತದೆ: ೧. ಉಳುವ ಭೂಮಿಯನ್ನು ಕೇಂದ್ರೀಕರಿಸಿಕೊಂಡು ರೈತರು ತಮ್ಮ ಬವಣೆಗಳನ್ನು ಮೀರುವುದಕ್ಕಾಗಿ ನಡೆಸುವ ಹೋರಾಟಗಳನ್ನು ನಿರೂಪಿಸುತ್ತದೆ. ಗ್ರಾಮೀಣ ಭಾಗದಲ್ಲಿ ಭೂಮಿಯನ್ನು ಗೌರಿಯೆಂದೇ ಗುರುತಿಸಲಾಗುತ್ತದೆ. ಪಾರ್ವತಿ ಮಣ್ಣನ್ನು ಸಂಕೇತಿಸುವುದರಿಂದ ಆಕೆಯನ್ನು 'ಗೌರಿ' ಎಂದೂ ಕರೆಯುತ್ತಾರೆ. ಪ್ರಸ್ತುತ ಕಾದಂಬರಿಯು ರೈತರ ಮೇಲೆ ಹಾಗೂ ಗೌರಿಯ (ಕೃಷಿಭೂಮಿ) ಮೇಲೆ ಬಂಡವಾಳಶಾಹಿಗಳು, ಸಾಲ ಸೌಲಭ್ಯಗಳನ್ನು ನೀಡುವವರು ಹಾಗೂ ವಾಣಿಜ್ಯೋದ್ಯಮಿಗಳು ನಡೆಸುವ ದೌರ್ಜನ್ಯದ ಆಯಾಮಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತದೆ.

೨. ಗೌರಿಯರು ಅಂದರೆ ಮಹಿಳೆಯರ ಮತ್ತು ಹೆಣ್ಣುಮಕ್ಕಳ ಸಮಕಾಲೀನ ಸಂಕಟಗಳನ್ನು ತಲ್ಲಣಗಳನ್ನು ಹಾಗೂ ಮಹಿಳಾ ಏಜೆನ್ಸಿಯನ್ನು ಕಾದಂಬರಿಕಾರರು ತೆರೆದಿಡುತ್ತಾರೆ. ತಮ್ಮ ಬಾಳಸಂಗಾತಿಯನ್ನು ತಾವೇ ಆಯ್ಕೆ ಮಾಡಿಕೊಂಡ ಕಾರಣ ದಿಂದಾಗಿ, ಸ್ಥಿರ-ಚರ ಆಸ್ತಿಗಳ ಮೇಲೆ ಹಕ್ಕು ಸ್ಥಾಪಿಸಿದ್ದಕ್ಕಾಗಿ, ಮದುವೆಯಾಗದೇ, ಇಷ್ಟ ಬಂದ ವ್ಯಕ್ತಿಯೊಂದಿಗೆ ಬದುಕು ಸಾಗಿಸುತ್ತಿರುವುದರಿಂದಾಗಿ ಹೀಗೆ ಹಲವು ಆಯಾಮಗಳಲ್ಲಿ ಹಕ್ಕು ಚಲಾಯಿಸುತ್ತಿರುವ ಮಹಿಳೆಯರು ನೇತ್ಯಾತ್ಮಕ ನೆಲೆಯಲ್ಲಿ ನಿರೂಪಣೆಗೊಳ್ಳುತ್ತಾರೆ; ಮರ್ಯಾದೆಗೇಡು ಹತ್ಯೆಗೂ ಒಳಗಾಗುತ್ತಾರೆ. ಮಹಿಳಾ ಹಕ್ಕುಗಳು ಮತ್ತು ಸಾಂಪ್ರದಾಯಿಕ ಆಚರಣೆಗಳು, ಮೌಲ್ಯಗಳು ಪರಸ್ಪರ ಅನುಸಂಧಾನಿಸುವುದಿಲ್ಲ. ಯಾಕೆಂದರೆ ಸಾಂಪ್ರದಾಯಿಕ ಆಚರಣೆಗಳು ಸಾಮಾಜಿಕ ಶ್ರೇಣೀಕರಣ, ಜಂಡರ್ ಶ್ರೇಣೀಕರಣವನ್ನು ಸಮರ್ಥಿಸುತ್ತಿರುತ್ತವೆ; ಹೀಗಾಗಿ ಅವುಗಳು ಮಹಿಳಾ ಹಕ್ಕುಗಳೊಂದಿಗೆ ಮಾನವ ಹಕ್ಕುಗಳೊಂದಿಗೆ ಸ್ನೇಹಿಯಾಗಿರಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ

ಹೆಣ್ಣುಮಕ್ಕಳು, ಲೈಂಗಿಕ ಅಲ್ಪಸಂಖ್ಯಾತರು, ದಮನಿತ ಸಮುದಾಯಗಳು ಸಂವಿಧಾನದತ್ತ ಹಕ್ಕುಗಳೆಡೆಗೆ ಚಲಿಸುವುದನ್ನು ಸಾಂಪ್ರದಾಯಿಕ ಸಮಾಜ ನಿಷೇಧಿಸುತ್ತವೆ; ಹಾಗೂ ವಿರೋಧಿಸುತ್ತವೆ; ಅಂಥವರನ್ನು ದಮನಿಸುತ್ತವೆ ಕೂಡ. ಬಾಹ್ಯದಲ್ಲಿ ಆಧುನಿಕವಾದ ಸಮಾಜವೂ ಮಹಿಳಾ ವಿಷಯದಲ್ಲಿ, ಟ್ರಾನ್ಸ್ ಸಮುದಾಯಗಳ ವಿಷಯದಲ್ಲಿ ಅತ್ಯಂತ ಕರ್ಮಠ ಮನೋಭಾವವನ್ನು ಹೊಂದಿರುತ್ತದೆ. ಹೀಗಾಗಿ ಸಾಮಾಜಿಕ ನೀತಿ ಪಾಠವನ್ನು ಪಾಲಿಸದವರನ್ನು ಸಮಾಜ ವಿರೋಧಿಗಳಂತೆ, ಅಪರಾಧಿಗಳಂತೆ ನಿರೂಪಿಸಲಾಗುತ್ತದೆ; ಹಾಗೂ ಅಂಥವರನ್ನು ಅಘೋಷಿತವಾಗಿ, ಅಲಿಖಿತವಾಗಿ ಬಹಿಷ್ಕರಿಸಲಾಗುತ್ತದೆ. ಒಟ್ಟಾರೆಯಾಗಿ ಹೆಣ್ಣಿನ ವಿಷಯಕ್ಕೆ ಸಂಬಂಧಿಸಿದಂತೆ ಸಾಂಪ್ರದಾಯಿಕ ಸಮಾಜ ಮತ್ತು ಮಹಿಳಾ ಹಕ್ಕುಗಳ ನಡುವೆ ನಡೆದ ಸಂಘರ್ಷಣೆಯನ್ನು, ಸಂಘರ್ಷಣೆಯು ತಂದ ಪಲ್ಲಟಗಳನ್ನು ಕಾದಂಬರಿಯು ಅನಾವರಣಗೊಳಿಸುತ್ತದೆ.

ನಾಲ್ಕು ತಲೆಮಾರಿನವರ ಸಂಕೀರ್ಣ ಜೀವನದ ಹದಗೊಂಡ ಕಥನದ ನೆಯ್ಗೆ ಪ್ರಸ್ತುತ ಕಾದಂಬರಿಯನ್ನು ರೂಪಿಸಿದೆ. ಅರಿವು ಪಡೆದುಕೊಂಡ ಆಧುನಿಕ ಮಹಿಳೆಯರಾದ ಶಿವಲೀಲಾ, ಅಕ್ಕಮ್ಮ, ಶ್ರೀದೇವಿಯರ ಮೂಲಕ ಮದುವೆ ಸಂಸ್ಥೆಯನ್ನು, ದಾಂಪತ್ಯ ನಿಷ್ಠೆಯನ್ನು ನಿಷ್ಠುರ ವಿಮರ್ಶೆಗೆ ಒಳಪಡಿಸಿದರೆ; ಸದಾಶಿವಪ್ಪ, ಶಿವಲಿಂಗಪ್ಪ ಹಾಗೂ ಶಂಕರಲಿಂಗ ಇವರ ಮೂಲಕ ರೈತರ ಜೀವನದ ಸಂದಿಗ್ಧತೆಯನ್ನು ಹಾಗೂ ಸವಾಲನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತದೆ. ಚಿನ್ನೂರಿನಲ್ಲಿ ಪಾರ್ವತಿ–ಸದಾಶಿವಪ್ಪ ಅವರ ಮನೆಯಲ್ಲಿ ನಡೆಯುವ ಗೌರಮ್ಮನ ನೋಪಿ ಪೂಜೆಯನ್ನು ನೆಪವಾಗಿಸಿಕೊಂಡು ಗೌರಿಯರ ಸಂಕಟಗಳನ್ನು, ಸಂಕಟದೊಳಗೂ ಅವರಲ್ಲಿ ಜೀವಂತವಾಗಿದ್ದ ಆತ್ಮವಿಶ್ವಾಸವನ್ನು, ಘನತೆಯನ್ನು, ಬದುಕಿನ ಜಿಗುಟುತನವನ್ನು ಕಾದಂಬರಿ ಹಿಡಿದಿಟ್ಟಿದೆ.

'ಗ್ರಾಮಗಳು ಅಪಾಯದಲ್ಲಿವೆ' ಎನ್ನುವುದನ್ನು ಬಹಳ ಸಂಕೀರ್ಣವಾದ ಆಯಾಮಗಳಲ್ಲಿ ರೈತರ ಸಮಕಾಲೀನ ಬದುಕನ್ನು ಕೇಂದ್ರೀಕರಿಸಿಕೊಂಡು ಪ್ರಸ್ತುತ ಕಾದಂಬರಿಯು ನಿರೂಪಿಸುತ್ತದೆ. ಗ್ರಾಮದ ಹಿಂದುಳಿಯುವಿಕೆಗೆ, ರೈತರು ನಗರಕ್ಕೆ ವಲಸೆ ಹೋಗುವುದಕ್ಕೆ ಕಾರಣಗಳನ್ನು ಶೋಧಿಸಿದ ಇದುವರೆಗಿನ ಅಧ್ಯಯನಗಳು ರೈತನನ್ನೇ ಹೊಣೆಗಾರರನ್ನಾಗಿಸಿದೆ. ನಗರ ಜೀವನದ ಆಕರ್ಷಣೆ, ಹೆಚ್ಚಿನ ಕೂಲಿಯ ಆಸೆ, ಶೋಕಿ ಜೀವನದ ಅಪೇಕ್ಷೆ ಮುಂತಾದ ಕಾರಣಗಳಿಂದಾಗಿ ರೈತರು ಕೃಷಿಯನ್ನು ಬಿಟ್ಟು ಕಾರ್ಖಾನೆಯೆಡೆಗೆ ಚಲಿಸುವುದನ್ನು ಮಾನವಿಕ ಅಧ್ಯಯನಗಳು ಗುರುತಿಸುತ್ತವೆ. ಆದರೆ ಕಥೆ, ಕಾದಂಬರಿ, ಸಿನಿಮಾ ಮೊದಲಾದ ಸೃಜನಶೀಲ ಅಭಿವ್ಯಕ್ತಿಗಳು ಬದುಕಿನ ಒಳ ಚಲನೆಗಳನ್ನು, ನಾಡಿಮಿಡಿತಗಳನ್ನು ಹಿಡಿಯುತ್ತಾ, ಅಧಿಕಾರವು ನಡೆಸುವ ಹುನ್ನಾರಗಳ ಮೇಲೆ ಬೆಳಕು ಚೆಲ್ಲುತ್ತವೆ.

ಬರಗಾಲ ಮತ್ತು ಕೃಷಿಗಾಗಿ ಮಾಡಿದ ಸಾಲದ ಹೊರೆ – ಇವುಗಳು ರೈತರನ್ನು ವಲಸೆ ಹೋಗುವುದಕ್ಕೆ ಹೇಗೆ ಒತ್ತಾಯಿಸುತ್ತವೆ ಎನ್ನುವುದನ್ನು ಬಹಳ ಸೂಕ್ಷ್ಮವಾಗಿ

ಕಾದಂಬರಿ ನಿರೂಪಿಸುತ್ತದೆ. ಅಮರೇಶ ನುಗಡೋಣಿ ಅವರು 'ರೈತ' ಪರಿಕಲ್ಪನೆಯನ್ನು ಏಕಶಿಲ್ಪವಾಗಿ ನೋಡುವುದಿಲ್ಲ. ಜಾತಿ ಶ್ರೇಣೀಕರಣದಲ್ಲಿ ಮೊದಲ ಮತ್ತು ಮಧ್ಯಮ ಸ್ತರದಲ್ಲಿರುವವರು, ಉತ್ತಮ ಆರ್ಥಿಕ ಚರಿತ್ರೆ ಹೊಂದಿದವರು ಕೃಷಿ ನಷ್ಟದಿಂದ ವಲಸೆ ಹೋಗುವುದು ಅಷ್ಟು ಸುಲಭವಲ್ಲ; ಅವರವರ ಜಾತಿ, ವರ್ಗದ ಹಿನ್ನೆಲೆಯೇ ಅವರ ಬದುಕಿನ ಚಲನೆಗೆ ತಡೆಗೋಡೆಗಳಾಗಿ ನಿಲ್ಲುತ್ತವೆ; ಕಲ್ಯಾಣಿಯ ಪತಿ ಶಂಕರಲಿಂಗನ ಸ್ವ ಹತ್ಯೆಯ ಪ್ರಕರಣದ ನಿರೂಪಣೆಯಲ್ಲಿ ಈ ಸಂಗತಿಯು ಮೂಡಿ ಬಂದಿದೆ. ನೂರಾರು ಜನಕ್ಕೆ ಕೆಲಸ ಕೊಟ್ಟವರು, ಬೇರೆ ಊರಿಗೆ ಹೋಗಿ ಕೂಲಿ ಕೆಲಸ ಮಾಡುವುದನ್ನು ಸ್ವಜಾತಿಯವರೇ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳುತ್ತಾರೆ, ಅವರೇ ಶಂಕರಲಿಂಗನು ವಲಸೆ ಹೋಗುವುದನ್ನು ತಡೆಯುತ್ತಾರೆ; ಜಾತಿ ಶ್ರೇಣೀಕರಣ ದಲ್ಲಿ ಕೆಳಹಂತದಲ್ಲಿ, ವರ್ಗ ಶ್ರೇಣೀಕರಣದಲ್ಲಿ ಕೆಳಹಂತದಲ್ಲಿ ಗುರುತಿಸಲ್ಪಟ್ಟವರು ಬಹಳ ಸ್ವತಂತ್ರರು; ಯಾಕೆಂದರೆ ಇವರುಗಳು ಮೇಲ್ಜಾತಿ ಮತ್ತು ಮಧ್ಯಮ ಜಾತಿಯ ಹಾಗೆ ಸಾಮಾಜಿಕ ಪ್ರತಿಷ್ಠೆಯ ನಿರೂಪಣೆಯ ಬಲೆಗೆ ಸಿಕ್ಕಿಸಿರುವುದಿಲ್ಲ. ಹೀಗಾಗಿ ಬದುಕಿನ ನಿರ್ಧಾರವನ್ನು ಅನುಕೂಲಕ್ಕೆ ತಕ್ಕ ಹಾಗೆ ಬದಲಾಯಿಸಿಕೊಳ್ಳುತ್ತಾರೆ. ಶಂಕರಲಿಂಗನ ಸ್ವಹತ್ಯೆಗೆ ಸ್ವಜಾತಿಯೊಳಗಿನ ಸಾಮಾಜಿಕ ಪ್ರತಿಷ್ಠೆಯ ನಿರೂಪಣೆಗಳು, ಸರಕಾರಿ ಹಾಗೂ ಅರೆ ಸರಕಾರಿ ಸಾಲಸೌಲಭ್ಯಗಳು ನೀಡುವ ಪ್ರಚೋದನೆಗಳು ಕಾರಣಗಳಾಗಿ ನಿಲ್ಲುತ್ತವೆ. ಕೃಷಿಗಾಗಿ ಮಾಡಿದ ಸಾಲ ತೀರಿಸಲಾಗದೇ, ಜೀವನೋತ್ಪಾದನೆಗೆ ಮಾರ್ಗ ಕಾಣದೆ ಶಂಕರಲಿಂಗನು ತನ್ನ ಜೀವವನ್ನು ಹತ್ಯೆ ಮಾಡಿಕೊಳ್ಳುತ್ತಾನೆ.

ಪ್ರಸ್ತುತ 'ರೈತರ ಆತ್ಮಹತ್ಯೆ' ಪರಿಭಾಷೆಯನ್ನು ಪ್ರಸ್ತುತ ಕಾದಂಬರಿಯು ಸಮಸ್ಯೀಕರಿಸಿ ನೋಡುತ್ತದೆ. ಇದುವರೆಗೆ ನಡೆದ ಅಧ್ಯಯನಗಳಲ್ಲಿ ಬಳಕೆಗೊಂಡ 'ರೈತರ ಆತ್ಮಹತ್ಯೆ'ಯ ಪರಿಭಾಷೆಯು ಬಂಡವಾಳಶಾಹಿಗಳು ನಡೆಸುವ ದೌರ್ಜನ್ಯಗಳು, ಬ್ಯಾಂಕುಗಳು ನೀಡುವ ಕೃಷಿ ಸಾಲಗಳು, ಯಂತ್ರ ಸಾಲಗಳು ಒಡ್ಡುವ ಆಮಿಷಗಳು ಇವುಗಳೆಲ್ಲಾ ಹುರಿಗೊಂಡು ಹೆಣೆಯುವ ಸಾವಿನ ಜಾಲದ ಮೇಲೆ ಬೆಳಕು ಚೆಲ್ಲುವುದಿಲ್ಲ. ಯಾಕೆಂದರೆ ಜಾಗತೀಕರಣದ ಸಂದರ್ಭದಲ್ಲಿ ಬಂಡವಾಳಶಾಹಿಗಳ ಉದ್ಯಮಗಳು ಹಾಗೂ ಕೃಷಿ ಸಾಲ ಹಾಗೂ ಯಂತ್ರ ಸಾಲಗಳು ಅಭಿವೃದ್ಧಿಯ ಸಂಗತಿಗಳಾಗಿಯೇ ಪರಿಗಣಿತವಾಗಿವೆ. ಪ್ರಸಕ್ತ ಕಾದಂಬರಿಯಲ್ಲಿ ಅಮರೇಶ ನುಗಡೋಣಿ ಅವರು ಆಡಳಿತ ವ್ಯವಸ್ಥೆಯು ಕೊಡಮಾಡುವ ಯಂತ್ರ ಸಾಲ, ಕೃಷಿ ಸಾಲಗಳು ಯಾರ ಉದ್ಧಾರಕ್ಕಿವೆ ಎನ್ನುವುದನ್ನು ಸಮಸ್ಯೀಕರಿಸಿಕೊಂಡು ಶೋಧ ನಡೆಸಿದ್ದಾರೆ. ರೈತರ ಅಭಿವೃದ್ಧಿಗಾಗಿ ಎಂದು ನಿರ್ದಿಷ್ಟಗೊಂಡ ಯೋಜನೆಗಳು ಹೇಗೆ ಅವರ ಸಾವಿಗೆ ಶೂಲವಾಗಿ ಪರಿಣಮಿಸುತ್ತವೆ ಎನ್ನುವುದರ ಮೇಲೆ ಇಲ್ಲಿನ ಕಥಾ ಪ್ರಸಂಗಗಳು ಬೆಳಕು ಚೆಲ್ಲುತ್ತವೆ. ರೈತರ ಸಾಲ, ಕೃಷಿ ಸಾಲ ಇವುಗಳು ಬಂಡವಾಳಶಾಹಿಗಳಿಗೆ, ಬ್ಯಾಂಕುಗಳಿಗೆ ಲಾಭ ತಂದುಕೊಡುವ

ಉದ್ದೇಶ ಹೊಂದಿವೆಯೇ ಹೊರತು, ರೈತರ ಬದುಕನ್ನು ಬೆಳಗಿಸಲು ಅಲ್ಲ; ಅಭಿವೃದ್ಧಿಯ ನೆಪದಲ್ಲಿ ಸಾಲ ಯೋಜನೆಗಳು ಒದಗಿಸುವ ಸೌಲಭ್ಯಗಳನ್ನು ಬಳಸಲು ರೈತರು ಶಕ್ತರಾಗಿಲ್ಲ; ಅಥವಾ ಅಂತಹ ಸೌಲಭ್ಯಗಳು ರೈತರಿಗೆ ಸಹಾಯಕವಾಗುವುದಿಲ್ಲ. ಸಾಲವು ನೀಡುವ ಆಧುನಿಕ ಕೃಷಿ ಯಂತ್ರಗಳು, ಬೀಜ ಮತ್ತು ಗೊಬ್ಬರ ಸೌಲಭ್ಯವು ರೈತರಿಗೆ ಹಣವನ್ನು ದ್ವಿಗುಣಗೊಳಿಸಿಕೊಳ್ಳುವ ಹಾಗೂ ಶ್ರೀಮಂತರಾಗುವ ಮರೀಚಿಕೆಯನ್ನು ಬೆಂಬೀಳುವಂತೆ ಮಾಡುತ್ತದೆ; ಅವರ ಪ್ರಜ್ಞೆಯಲ್ಲಿ ಕರಗಿದ ಪಾರಂಪರಿಕ ಜ್ಞಾನದ ಮೇಲೆ ನಂಬಿಕೆ ಕಳೆದುಕೊಳ್ಳುವಂತೆ ಮಾಡುತ್ತದೆ; ವಾಣಿಜ್ಯೋದ್ಯಮಿಗಳಿಗೆ, ಬಂಡವಾಳಶಾಹಿಗಳಿಗೆ ಲಾಭ ತರುವ ಹುನ್ನಾರವಿರುವ 'ಅಭಿವೃದ್ಧಿ' ಯೋಜನೆಗಳತ್ತ ವಾಲುವಂತೆ ವ್ಯವಸ್ಥೆಯೇ ಒತ್ತಾಯಿಸುತ್ತದೆ. ರೈತರು ಅಭಿವೃದ್ಧಿಗೊಳ್ಳುತ್ತಾರೋ ಇಲ್ಲವೋ ಎನ್ನುವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ; ಆದರೆ ಬ್ಯಾಂಕುಗಳು, ಕೃಷಿಯಂತ್ರ, ಬೀಜ, ಗೊಬ್ಬರದ ಉತ್ಪಾದನೆಗಾರರು ಖಂಡಿತವಾಗಿಯೂ ಅಭಿವೃದ್ಧಿಯನ್ನು ಹೊಂದುತ್ತಾರೆ; ಸಾಲದಿಂದಾಗಿ ಸೋತು ಅತ್ತ ಬಡ್ಡಿ ಕಟ್ಟಲಾಗದೆ, ಇತ್ತ ನಿತ್ಯ ಜೀವನ ನಿರ್ವಹಣೆ ಮಾಡಲೂ ಆಗದೆ ಪರಿತಪಿಸುತ್ತ ಸ್ವಹತ್ಯೆ ಮಾಡಿಕೊಳ್ಳುತ್ತಾರೆ; ಕೆಲವರು ಕೃಷಿ ಜೀವನ ಬಿಟ್ಟು ಕೂಲಿ ಕೆಲಸಗಳನ್ನು ಅರಸಿ ಪಟ್ಟಣಗಳತ್ತ ವಲಸೆ ಹೋಗುತ್ತಾರೆ. ಸದಾಶಿವಪ್ಪನ ತಮ್ಮ ಶಿವಲಿಂಗಪ್ಪನ ಕಥೆಯಲ್ಲಿ, ಕಲ್ಯಾಣಿಯ ಗಂಡ ಶಂಕರಲಿಂಗನ ಕಥೆಯಲ್ಲಿ ಇದರ ಒಳಸುಳಿಗಳನ್ನು ಅಮರೇಶ ನುಗಡೋಣಿ ಅವರು ಅರ್ಥಪೂರ್ಣವಾಗಿ ಕಟ್ಟಿಕೊಡುತ್ತಾರೆ. ಹಾಗೆಯೇ ಜೀವನಕ್ಕೆ ಅಗತ್ಯವಿರುವಷ್ಟು ಮಾತ್ರ ಉತ್ಪಾದನೆ ಮಾಡಿ, ಕೃಷಿಕರಾಗಿಯೇ ಬಾಳಬೇಕೆನ್ನುವ ರೈತರ ಬದುಕಿನ ಆಯ್ಕೆಗಳನ್ನು ಭೂ ಮಾಫಿಯಾದವರು ಹೇಗೆ ಕಿತ್ತುಕೊಳ್ಳುತ್ತಾರೆ ಎನ್ನುವ ಸೂಕ್ಷ್ಮ ವಿಷಯಗಳು ಮನಮುಟ್ಟುವಂತೆ ಕಾದಂಬರಿಯಲ್ಲಿ ನಿರೂಪಿತವಾಗಿದೆ.

ಅನೇಕ ರೈತರು ಸ್ವಇಚ್ಛೆಯಿಂದ, ತಮ್ಮ ಕೃಷಿ ಭೂಮಿಯನ್ನು ಮಾರಾಟ ಮಾಡುವುದಿಲ್ಲ. ರಾಜಕಾರಣಿಗಳು, ಬಂಡವಾಳಶಾಹಿಗಳ ದುರಾಸೆಯು ಮುಖ್ಯರಸ್ತೆ ಪಕ್ಕದಲ್ಲಿರುವ ಕೃಷಿಭೂಮಿಯನ್ನು ಮಾರಾಟ ಮಾಡಲು ಒತ್ತಾಯಿಸುತ್ತದೆ. ರೆಸಾರ್ಟ್ ಕಟ್ಟಿಕೊಂಡು ಹೆಚ್ಚು ಹಣವನ್ನು ಮಾಡಿಕೊಳ್ಳಲು ವಾಣಿಜ್ಯೋದ್ಯಮಿಗಳು ರೈತರ ಭೂಮಿಯ ಮೇಲೆ ಕಣ್ಣು ಹಾಕುತ್ತಾರೆ; ರೈತರು ಅಬ್ಬಬ್ಬ ಎಂದರೆ ಎಂಟರಿಂದ ಹತ್ತು ಲಕ್ಷ ವಾರ್ಷಿಕ ಆದಾಯ ದುಡಿಯಬಹುದು; ಆದರೆ ರೆಸಾರ್ಟ್ ನಿರ್ಮಿಸುವುದರಿಂದ ವಾರಕ್ಕೆ ಹತ್ತು ಲಕ್ಷ ದುಡಿಯಬಹುದು ಎನ್ನುವುದು ವಾಣಿಜ್ಯೋದ್ಯಮಿಗಳ ಲೆಕ್ಕಾಚಾರ. ರಿಯಲ್ ಎಸ್ಟೇಟ್ ದಂಧೆಗಳು, ರೆಸಾರ್ಟ್ ನಿರ್ಮಾಣಗಳು ಹೇಗೆ ರೈತರ ಕೃಷಿ ಭೂಮಿ ಮೇಲೆ ಆಕ್ರಮಣ ಮಾಡುತ್ತವೆ ಎನ್ನುವುದನ್ನು ಸದಾಶಿವಪ್ಪನ ಮೇಲೆ ತೋಟವನ್ನು ಮಾರಲೇಬೇಕೆನ್ನುವ ಒತ್ತಡದ ಪ್ರಸಂಗದ ನಿರೂಪಣೆಯಲ್ಲಿ ಅಮರೇಶ ನುಗಡೋಣಿ ಅವರು ಬಹಳ ತೀಕ್ಷ್ಣವಾಗಿ ಕಟ್ಟಿಕೊಡುತ್ತಾರೆ. ಅಮರೇಶ ನುಗಡೋಣಿ

ಅವರ ಗೌರಿಯರು ಕಾದಂಬರಿಯಲ್ಲಿನ ಈ ಪ್ರಸಂಗವನ್ನು ಓದುವಾಗ ಕೊರಟಾಲ ಶಿವ ಅವರು ಬರೆದು ನಿರ್ದೇಶಿಸಿದ ಶ್ರೀಮಂತುಡು (೨೦೧೫) ಎನ್ನುವ ತೆಲುಗು ಸಿನಿಮಾ ನೆನಪಿಗೆ ಬರುತ್ತದೆ; ಅಲ್ಲಿ ದೇವರ ಕೋಟಾದ ನೈಸರ್ಗಿಕ ಸಂಪನ್ಮೂಲವನ್ನು ರಾಜಕಾರಣಿಗಳು ಹಾಗೂ ಅವರ ಸಂಬಂಧಿಗಳು ಹೇಗೆ ಕಬಳಿಸಲು ಕಾರಣವಾಗುತ್ತಾರೆ ಎನ್ನುವುದರ ಚಿತ್ರಣ ಸುದೀರ್ಘವಾಗಿ ಬರುತ್ತದೆ. ದೇವರ ಕೋಟಾದಲ್ಲಿ ಕೃಷಿ ಭೂಮಿಯನ್ನು ಹೊಂದಿದ ರೈತರ ಮೇಲೆ ರಾಜಕಾರಣಿಗಳು ಹಲ್ಲೆ ಮಾಡಿ ಊಳುವ ಭೂಮಿಯನ್ನು ಮಾರಾಟ ಮಾಡಲು ಒತ್ತಡ ತರುತ್ತಾರೆ ಎನ್ನುವುದರ ಚಿತ್ರಣ ಬಂದಿದೆ. ನನ್ನ ಓದಿನ ಮಿತಿಯಲ್ಲಿ ಹೇಳುವುದಾದರೆ ರಾಜಕಾರಣಿಗಳು, ಭೂ ಮಾಫಿಯಾದವರು ರೈತರ ಜಮೀನನ್ನು ಒತ್ತಾಯದಿಂದ ಖರೀದಿಸಲು ಪ್ರಯತ್ನಿಸುವ ಇವುಗಳ ಹಿಂದೆ ರೆಸಾರ್ಟ್ ನಿರ್ಮಾಣ, ರಿಯಲ್ ಎಸ್ಟೇಟ್ ಉದ್ದೇಶಗಳು ಹೇಗೆ ಕಾರಣವಾಗುತ್ತವೆ ಎನ್ನುವುದರ ಕಥಾನಿರೂಪಣೆ ಕನ್ನಡದಲ್ಲಿ ಮೊದಲು ಕಂಡುಬಂದದ್ದು ಅಮರೇಶ ನುಗಡೋಣಿ ಅವರ **ಗೌರಿಯರು** ಕಾದಂಬರಿಯಲ್ಲಿ.

ಪ್ರಸ್ತುತ ಕಾದಂಬರಿಯು ಮಹಿಳೆಯರನ್ನು ಕೇಂದ್ರಕ್ಕೆ ತಂದುಕೊಂಡು ತಮ್ಮ ಸಂಪಾದನೆಯ ಮೇಲೆ ಹಕ್ಕು ಉಳಿಸಿಕೊಳ್ಳುವುದನ್ನು, ಕೌಟುಂಬಿಕ ಜವಾಬ್ದಾರಿಯಲ್ಲಿ ಸಮಾನ ಹಂಚಿಕೆಯಿರಬೇಕೆನ್ನುವ ಅಪೇಕ್ಷೆಯನ್ನು, ದಾಂಪತ್ಯದಲ್ಲಿ ಗಂಡೂ ಲೈಂಗಿಕ ನಿಷ್ಠೆ ಹೊಂದಿರಬೇಕೆನ್ನುವ ನಿರೀಕ್ಷೆಯನ್ನು ನಿರೂಪಿಸಿದೆ ಹಾಗೂ ತಾಯಿಯಾಗಲು ಮದುವೆ ಸಂಸ್ಥೆಯ ಅಗತ್ಯವಿಲ್ಲ ಎನ್ನುವ ನಿಲುವನ್ನು ಅತ್ಯಂತ ಮಾರ್ಮಿಕವಾಗಿ ಸೂಚಿಸುತ್ತದೆ.

ಮಹಿಳೆಯರ ಹಕ್ಕುಗಳನ್ನು ಸಮಾಧಿಯಾಗಿಸಿ, ಅದರ ಮೇಲೆ ಮದುವೆ ಹಾಗೂ ಕುಟುಂಬ ಸಂಸ್ಥೆಗಳು ಭದ್ರವಾಗಿ ನೆಲೆಯೂರಿವೆ; ಐಕ್ಯೆ-ಸ್ವಾತಂತ್ರ್ಯದೆಡೆಗೆ ಚಲಿಸುವುದೆಂದರೆ ಇಂತಹ ಸಾಂಪ್ರದಾಯಿಕ ಸಂಸ್ಥೆಗಳನ್ನು ಪಲ್ಲಟಗೊಳಿಸುವುದೇ ಆಗಿದೆ. ಮಹಿಳೆಯರ ಹಕ್ಕುಗಳೆಡೆಗಿನ ಚಲನೆಯನ್ನು ಸಾಂಪ್ರದಾಯಿಕ ಸಂಸ್ಥೆಗಳು ಸ್ವೀಕರಿಸಿದಾಗ, ಅಳವಡಿಸಿಕೊಂಡಾಗ, ನಿಜಾರ್ಥದಲ್ಲಿ ಸಮಾಜ ಪ್ರಗತಿ ಸಾಧ್ಯವಾಗುತ್ತದೆ. ಜಂಡರ್ ಸಮನ್ಯಾಯ ರೂಢಿಸಿಕೊಳ್ಳುವ ಕುಟುಂಬಗಳು ದೇಶದ ಪ್ರಗತಿ ಸೂಚಕ ಗಳಾಗುತ್ತವೆ.

ಆದರೆ ಜಂಡರ್ ಆಧಾರಿತವಾಗಿರುವ ಅಸಮಾನತೆಯ ನೆಲೆಗಳನ್ನು ಮದುವೆ ಮತ್ತು ಕುಟುಂಬ ಸಂಸ್ಥೆಗಳು ಭೂಮಿಕೆಯಾಗಿಸಿಕೊಂಡಿದ್ದರಿಂದ ಅವುಗಳು ಸಮಾನತೆಯ ತತ್ವಗಳ ಆಚರಣೆಯನ್ನು ನಿರಾಕರಿಸುತ್ತವೆ ಹಾಗೂ ತಿರಸ್ಕರಿಸುತ್ತವೆ; ಯಾಕೆಂದರೆ ಹೆಣ್ಣು ಸಮಾನತೆಯತ್ತ ಚಲಿಸಿದರೆ ಅದು ಕುಟುಂಬದ ವಿಘಟನೆಗೆ ಕಾರಣವಾಗುತ್ತದೆ ಎಂದು ನಂಬುತ್ತವೆ. ಸಮಾನತೆಯ ಸಿದ್ಧಾಂತದ ಮೇಲೆ ರೂಪುಗೊಂಡ ಭಾರತದ ಸಂವಿಧಾನದ ಆಧಾರದ ಮೇಲೆ ಕಾರ್ಯನಿರ್ವಹಿಸುವ

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಆಡಳಿತಾಂಗ ವ್ಯವಸ್ಥೆಗಳು ಕೂಡ ಗಂಡಿನ ಅಹಮಿಕೆಯನ್ನು ಪೋಷಿಸುತ್ತ ಕುಟುಂಬ ರಚನೆಯನ್ನು ಉಳಿಸಿಕೊಂಡಿವೆ; ಹಾಗೂ ಅವುಗಳನ್ನು ಸಾಂಸ್ಕೃತಿಕ ಅನನ್ಯತೆಯ ತಾಣಗಳನ್ನಾಗಿ ನಿರೂಪಿಸುತ್ತವೆ. ಸಾಂಸ್ಕೃತಿಕ ಮತ್ತು ಆಡಳಿತ ನೆಲೆಯಲ್ಲಿ ಚಾಲ್ತಿಯಲ್ಲಿರುವ ಇಂತಹ ಯಜಮಾನ್ಯ ಅಲೆಗಳ ಅಬ್ಬರದ ವಿರುದ್ಧ ತಡೆಗೋಡೆಯಾಗಿ ನಿಂತುಕೊಂಡು ಮಹಿಳಾ ಪಾತ್ರಗಳ ಮೂಲಕ ಮಹಿಳಾ ಹಕ್ಕುಗಳನ್ನು ಕೇಂದ್ರೀಕರಿಸಿಕೊಂಡು ಕುಟುಂಬವನ್ನು ಸಾಂಪ್ರದಾಯಿಕ ಸಮಾಜ ಒಪ್ಪುವಂತೆ ಮಾಡುವುದು ಅತ್ಯಂತ ಸವಾಲಿನ ಸಂಗಾತಿಯಾಗಿದೆ. ಈ ಸವಾಲಿನ ಪಯಣವನ್ನು ಕಾದಂಬರಿಕಾರರು ಅತ್ಯಂತ ವಿವೇಕದಿಂದ, ವಿವೇಚನೆಯಿಂದ ನಿರ್ವಹಿಸಿದ್ದಾರೆ. ಆದರೆ ಹೆಣ್ಣುಮಕ್ಕಳ ಹಕ್ಕುಗಳನ್ನು ಕೇಂದ್ರಕ್ಕೆ ತಂದುಕೊಂಡು ಇಂತಹ ಸಾಂಪ್ರದಾಯಿಕ ಸಂಸ್ಥೆಗಳನ್ನು ಮರುಪರಿಶೀಲಿಸುವುದು ಬಹಳ ಸೂಕ್ಷ್ಮ ಹಾಗೂ ಸವಾಲಿನ ವಿಷಯವಾಗುತ್ತದೆ. ಇಂತಹ ಸಂಕೀರ್ಣ ಸವಾಲನ್ನು ಗೌರಿಯರು ಕಾದಂಬರಿ ಅತ್ಯಂತ ದೊಡ್ಡ ಜವಾಬ್ದಾರಿಯಿಂದ ನಿಭಾಯಿಸುತ್ತದೆ.

'ದಾಂಪತ್ಯ' ಎನ್ನುವುದೇ ನೈತಿಕ ಸಿದ್ಧಾಂತದ ಆಧಾರದ ಮೇಲೆ ರೂಪುಗೊಂಡಿದೆ, ಇದರೊಳಗಿನ 'ನೈತಿಕತೆ' ಹೆಣ್ಣನ್ನು ಮಾತ್ರ ಕೇಂದ್ರೀಕರಿಸಿಕೊಂಡಿರುತ್ತದೆ ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. 'ಪ್ರಶ್ನಾತೀತವಾಗಿ ಹೆಣ್ಣುಮಕ್ಕಳು ದಾಂಪತ್ಯದ ಚೌಕಟ್ಟಿಗೆ ಬದ್ಧವಾಗಿರಬೇಕು' ಎನ್ನುವ ಯೋಚನಾ ಕ್ರಮವನ್ನು, ಪ್ರತಿಯೊಬ್ಬರಲ್ಲೂ ನಮ್ಮ-ನಮ್ಮ ಸಾಮಾಜೀಕರಣವು ರಕ್ತಗತಗೊಳಿಸಿರುತ್ತದೆ. ಎಷ್ಟೇ ಪ್ರಗತಿಪರರಾದರೂ 'ದಾಂಪತ್ಯ'ದ ಪ್ರಶ್ನೆಯನ್ನು 'ನೈತಿಕ' ಚೌಕಟ್ಟಿಗೆ ಬಂಧಿತರಾಗಿಯೇ ನೋಡುತ್ತಾರೆ. ಅನೇಕ ವಿಮರ್ಶಕರು ಗೌರಿಯರು ಕಾದಂಬರಿಯಲ್ಲಿನ ಶ್ರೀದೇವಿ ಪಾತ್ರವನ್ನು ದಾಂಪತ್ಯದ ಕಣ್‌ಪಟ್ಟಿ ಕಟ್ಟಿಕೊಂಡೇ ನೋಡಿದ್ದಾರೆ; ಹೀಗಾಗಿ ಆಕೆ ಅತ್ಯಂತ ಅವಿವೇಕಿಯಾಗಿ, ನೀತಿಹೀನಳಾಗಿ ಕಂಡಿದ್ದಾಳೆ. ಆದರೆ 'ಶ್ರೀದೇವಿ' ಪಾತ್ರವನ್ನು ಅಸಂಪ್ರದಾಯಿಕ ನೆಲೆಯಲ್ಲಿಯೇ ಅನುಸಂಧಾನ ಮಾಡಬೇಕಿದೆ.

ನನಗೆ ಈ ಕಾದಂಬರಿಯಲ್ಲಿ ಅತಿಯಾಗಿ ಕಾಡಿದ ಪಾತ್ರ ಶ್ರೀದೇವಿಯದ್ದು. ಶಿವಲೀಲಾ, ಅಕ್ಕಮ್ಮ ಪಾತ್ರಗಳು ಮೇಲ್ನೋಟಕ್ಕೆ ಸಾಮಾಜಿಕ ಕಟ್ಟಳೆಗಳನ್ನು ಒಡೆದಂತೆ ಕಂಡುಬಂದರೂ, ಅವುಗಳು ಒಂದಿಲ್ಲ ಒಂದು ರೀತಿಯಲ್ಲಿ ಸಾಂಪ್ರದಾಯಿಕ ಗಡಿರೇಖೆಯೊಳಗಡೆಯೇ ಉಳಿದುಕೊಂಡು ಬಿಡುತ್ತವೆ; ಇವರಿಬ್ಬರೂ 'ಮದುವೆ' ಎನ್ನುವ ಸಾಂಸ್ಥಿಕ ರಚನೆಯನ್ನು ಒಪ್ಪಿಕೊಂಡು ಅದರೊಳಗಡೆ ಪ್ರವೇಶಿಸುತ್ತಾರೆ; ಅಲ್ಲಿ ಇವರ ಹಕ್ಕುಗಳು ಅರ್ಥ ಕಳೆದುಕೊಂಡಾಗ ಹಾಗೂ ವ್ಯಕ್ತಿತ್ವದ ಘನತೆಯು ಅಪಮಾನಿತವಾದಾಗ 'ಮದುವೆ' ಚೌಕಟ್ಟಿನಿಂದ ಹೊರಬರುತ್ತಾರೆ; ಸಾಂಪ್ರದಾಯಿಕ ಮದುವೆಯಾದ ಶಿವಲೀಲಾ ಪತಿಗೆ ವಿಚ್ಛೇದನ ನೀಡಿ, ಮಗನ ಭವಿಷ್ಯದತ್ತ ಚಿತ್ತ ಕೇಂದ್ರೀಕರಿಸುತ್ತಾಳೆ; ಆದರೆ ಪ್ರೇಮ ವಿವಾಹವಾದ ಅಕ್ಕಮ್ಮ ಲಂಪಟ ಗಂಡನಿಗೆ

ವಿಚ್ಛೇದನ ನೀಡಿ, ಸಿದ್ಧಾರ್ಥನೊಂದಿಗೆ ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಬಾಳುತ್ತಾಳೆ; ಅವನಿಂದ ಮಗುವನ್ನು ಪಡೆದು ಸಿಂಗಲ್ ಮದರಾಗಿ ಸಂತೋಷದಿಂದ ಜೀವನ ಸಾಗಿಸುತ್ತಾಳೆ; ಶಿವಲೀಲಾ ಮತ್ತು ಅಕ್ಕಮ್ಮ ಮೇಲ್ನೋಟಕ್ಕೆ 'ಗಂಡ' ಮತ್ತು 'ಮದುವೆ' ಎನ್ನುವ ಸಾಂಸ್ಕೃತಿಕ ರಚನೆಗಳನ್ನು ನಿರಚನಗೊಳಿಸಿದಂತೆ ಕಂಡುಬಂದರೂ, ಹೆತ್ತ ಮಗುವಿನ ಜವಾಬ್ದಾರಿಯನ್ನು ನಿರ್ವಹಿಸುವ ಅವರು 'ತಾಯಿ' ಪಾತ್ರದಲ್ಲಿ ಕರಗುತ್ತಾರೆ; ಸಾಂಪ್ರದಾಯಿಕ ರಚನೆಗಳು ತಾಯಿ ಪಾತ್ರವನ್ನು ಆತ್ಯಂತಿಕ 'ಶಕ್ತಿ' ನೆಲೆಯಲ್ಲಿ ಕಟ್ಟಿಕೊಡುತ್ತವೆ. ಹೀಗಾಗಿಯೇ ನನಗೆ 'ತಾಯಿ' ಪಾತ್ರದ ಬಗ್ಗೆ ಗುಮಾನಿ ಹುಟ್ಟುತ್ತವೆ. ಸಾಮಾಜಿಕ ಆಕರಗಳು ಮತ್ತು ನಡೆದ ಅಧ್ಯಯನಗಳು 'ತಾಯಿ' ಪ್ರತಿನಿಧೀಕರಣವನ್ನು ಹೊರತುಪಡಿಸಿ, ಹೆಂಡತಿ, ವಿಧವೆ, ಸೂಳೆ ಪ್ರತಿನಿಧೀಕರಣವನ್ನು ದಮನಿತ ಹಾಗೂ ಅಧೀನ ನೆಲೆಯಲ್ಲಿ ನೋಡುತ್ತವೆ. "ಜಗತ್ತಿನಲ್ಲಿ ಕೆಟ್ಟ ಹೆಂಡತಿ ಇರಬಹುದು. ಕೆಟ್ಟ ತಾಯಿ ಇರುವುದಿಲ್ಲ" ಎನ್ನುವ ಗಾದೆ ಮಾತನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಿದೆ. ದುಷ್ಟೆಯಾಗಿ, ಕೆಟ್ಟವಳಾಗಿ ನಿರೂಪಿತವಾಗುವ ಹೆಣ್ಣುಮಕ್ಕಳು ಸಾಮಾಜಿಕ ಲಕ್ಷ್ಮಣ ರೇಖೆಯನ್ನು ದಾಟಿದವರಾಗಿದ್ದಾರೆ. ಅವರು ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸಿ ದವರಾಗಿದ್ದಾರೆ. ಪಿತೃ ಸಂಸ್ಕೃತಿಯು ಹೆಣ್ಣಿನ ಯಾವ ಪ್ರತಿನಿಧೀಕರಣವನ್ನು ವೈಭವೀಕರಿಸುತ್ತಿರುತ್ತದೆಯೋ, ಅದು ಯಾವಾಗಲೂ ವ್ಯವಸ್ಥೆಯ ಪರವಾಗಿರುತ್ತದೆ; ಅದಕ್ಕಾಗಿಯೇ 'ತಾಯಿ' ಪ್ರತಿನಿಧೀಕರಣ ವಿಜೃಂಭಣೆಯಿಂದ, ಇತ್ಯಾತ್ಮಕ ನೆಲೆಯಲ್ಲಿ ನಿರೂಪಿತಗೊಳ್ಳುತ್ತದೆ. ಹೀಗಾಗಿಯೇ 'ತಾಯಿ' ಹೊಣೆಗಾರಿಕೆಯನ್ನು ಉಳಿಸಿಕೊಂಡ, ಶಿವಲೀಲಾ, ಅಕ್ಕಮ್ಮ ಅವರು ಪಾರ್ಶ್ವಿಕ ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯ ಭಾಗವಾಗಿಯೇ ಉಳಿದುಕೊಂಡು ಬಿಡುತ್ತಾರೆ ಎನಿಸುತ್ತದೆ ಆದರೆ ಶ್ರೀದೇವಿಯ ಪಾತ್ರ ಹಾಗಲ್ಲ; ಅರುಣನೊಂದಿಗೆ ನೋಂದಾಯಿತ ಮದುವೆಯಾಗಿಯೇ ವಿವಾಹ ಹಾಗೂ ಕುಟುಂಬ ಸಂಸ್ಥೆಯ ನಿರೀಕ್ಷೆ, ನಿರ್ದೇಶನಗಳನ್ನು ಮುರಿದು ಹಾಕುತ್ತಾಳೆ. ಮದುವೆಯಾದರೂ ಗಂಡ-ಹೆಂಡತಿಯರಿಬ್ಬರು ಒಂದೇ ಊರಿನಲ್ಲಿದ್ದರೂ ಒಂದೇ ಸೂರಿನಡಿ ಗಂಡನೊಂದಿಗೆ ಬಾಳಲು ಶ್ರೀದೇವಿ ಅಪೇಕ್ಷಿಸುವುದಿಲ್ಲ. ಲೈಂಗಿಕ ಸಂಗಾತಕ್ಕೆ ಮಾತ್ರ ಗಂಡನನ್ನು ಒಪ್ಪಿಕೊಳ್ಳುತ್ತಾಳೆ; ಆದರೆ ಮಗುವನ್ನು ಹೇರುವ ಯೋಚನೆಯೇ ಅವಳಲ್ಲಿ ಬಂದಿಲ್ಲ. 'ಮದುವೆ' ಎಂದರೆ ಒಂದೇ ಸೂರಿನಡಿ ಗಂಡ-ಹೆಂಡತಿಯರಿಬ್ಬರೂ ಬಾಳುತ್ತ ಮಕ್ಕಳನ್ನು ಪಡೆದು ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುತ್ತ ಬಾಳುವುದು ಎಂದು ಸಾಂಪ್ರದಾಯಿಕ ಸಮಾಜ ವ್ಯಾಖ್ಯಾನಿಸುತ್ತದೆ. 'ಮಹಾ ಆಧುನಿಕರು' ಎಂದು ಗುರುತಿಸಿಕೊಳ್ಳುವವರು ಕೂಡ ಮದುವೆಯ ಬಗ್ಗೆ ಸಾಂಪ್ರದಾಯಿಕ ನಿಲುಗಳನ್ನೇ ಮೈಗೂಡಿಸಿಕೊಂಡಿರುತ್ತಾರೆ. ಆದರೆ ಶ್ರೀದೇವಿಯು ಯಾವ ನಿಟ್ಟಿನಲ್ಲಿಯೂ ಕೌಟುಂಬಿಕ ನೆಲೆಗಳನ್ನು ಒಪ್ಪಿಕೊಳ್ಳುವುದಿಲ್ಲ; ಸಮಾಜದ ವಿರುದ್ಧವೇ ಈಜುವ ಈಕೆ ಕೇವಲ ತನ್ನ ಅಂತರಾಳದ ಧ್ವನಿಗಳನ್ನು ಕೇಳಿಸಿಕೊಳ್ಳುತ್ತಾಳೆ; ಅದರಂತೆ ನಡೆಯುತ್ತಾಳೆ;

ಸಮಾಜದ ಮಾತುಗಳಿಗೆ ಕಿವುಡಾಗುತ್ತಾಳೆ. ಹೀಗೆ ಶ್ರೀದೇವಿಯು ಪಯಣಿಸುವ ದಾರಿಯು ಸ್ವತಃ ಅವಳಿಗೇ ಸ್ಪಷ್ಟವಾಗಿಲ್ಲ; ಯಾಕೆಂದರೆ ಹೊಸ ಕಾಲುದಾರಿಯನ್ನು ಈಕೆಯೇ ಕಂಡುಕೊಳ್ಳಲು ಹೊರಟಿದ್ದಾಳೆ. ಆದರೂ ತನ್ನ ಆಯ್ಕೆ-ನಿರಾಕರಣೆಯ ಹಕ್ಕುಗಳನ್ನು ಚಲಾಯಿಸುತ್ತಾ ಹೊಸದಾರಿಗಳನ್ನು ಕಂಡುಕೊಳ್ಳುವತ್ತ ಗಟ್ಟಿ ಹೆಜ್ಜೆಯನ್ನು ಊರಿದ್ದಾಳೆ. ಹೀಗಾಗಿ ಶ್ರೀದೇವಿ ಪಾತ್ರ ಅತ್ಯಂತ ರ್‍ಯಾಡಿಕಲ್ ಆಗಿ ಕಾಣುತ್ತದೆ.

ಶ್ರೀದೇವಿಯಂತಹ ಪಾತ್ರವನ್ನು ರೂಪಿಸಲು ಹಾಗೂ ನಿಭಾಯಿಸಲು ಕಾದಂಬರಿಕಾರರು ಬಹಳ ಸವಾಲುಗಳನ್ನು ಎದುರಿಸಿದ್ದಾರೆ ಎನ್ನಿಸುತ್ತದೆ. ಹೆಣ್ಣು ಸಂಪೂರ್ಣವಾಗಿ ಸಾಮಾಜಿಕ ಕಬಂಧ ಬಾಹುಗಳಿಂದ ಬಿಡಿಸಿಕೊಂಡು, ಹಕ್ಕುಗಳನ್ನು ಚಲಾಯಿಸುತ್ತಾ ಸಾಗಿದರೆ ಹೇಗೆ ಕಾಣುತ್ತಾಳೆ ಎಂದರೆ ಥೇಟ್ ಶ್ರೀದೇವಿಯ ಹಾಗೆ ಕಾಣುತ್ತಾಳೆ. ಇಂತಹ ಹೆಣ್ಣುಮಕ್ಕಳು ಹೊರಲೋಕಕ್ಕೆ ಹುಚ್ಚರಾಗಿ, ಅವಿವೇಕಿಗಳಾಗಿ, ಮೂರ್ಖರಾಗಿ, ಸಮಾಜ ಘಾತುಕ ವ್ಯಕ್ತಿಗಳಾಗಿ ಕಾಣುತ್ತಾರೆ; ಯಾಕೆಂದರೆ ಇಂತಹ ಮಹಿಳೆಯರು ಹಾಗೂ ಹೆಣ್ಣುಮಕ್ಕಳು ಹೊರಟ ದಾರಿ ಲೋಕ ಒಪ್ಪಿತವಲ್ಲ ಹೀಗಾಗಿ **ಗೌರಿಯರು** ಕಾದಂಬರಿಯಲ್ಲಿನ ಶ್ರೀದೇವಿಯನ್ನು ಆಕೆಯಿದ್ದಂತೆ ಸ್ವೀಕರಿಸಲು ಎದೆಗಾರಿಕೆ ಹಾಗೂ ಸಂಸ್ಕಾರ ಬೇಕಾಗುತ್ತದೆ. ಯಾರ ಹಂಗಿಗೂ, ನಿಯಂತ್ರಣಕ್ಕೂ, ಊಹೆಗೂ ಕಣ್ಣಿನ ಅಳತೆಗೂ ಸಿಗದ ಶ್ರೀದೇವಿಯ ಬದುಕಿನ ಪಯಣ ಕೌತುಕಮಯವಾಗಿದೆ; ಬೇಕೆಂದ ಬದುಕನ್ನು ಕಟ್ಟಿಕೊಳ್ಳುತ್ತ ಬೇಡವಾದದ್ದನ್ನು ಮುಲಾಜಿಲ್ಲದೆ ತಿರಸ್ಕರಿಸುತ್ತ ಸಾಗುವ ಅವಳು ಸಾಂಪ್ರದಾಯಿಕ ಸಮಾಜಕ್ಕೆ ಸವಾಲಾಗಿ ಕಾಣುತ್ತಾಳೆ. ಅವಳೇ ಆಯ್ದುಕೊಂಡ ಸಂಘರ್ಷದ ಬದುಕಿನ ಪಯಣದಲ್ಲಿ ಎದುರಾದ ಕಠಿಣ ಪ್ರಸಂಗಗಳನ್ನು ಯಾರನ್ನೂ ದೂರದೇ ಹೊಣೆಗಾರರನ್ನಾಗಿಸದೆ ಆತ್ಮವಿಶ್ವಾಸದಿಂದ ಎದುರಿಸುತ್ತಾಳೆ.

ಗೌರಿಯರು ಕಾದಂಬರಿಯಲ್ಲಿ ಇರುವಿಕೆಯಿಂದ ಆಗುವಿಕೆಯೆಡೆಗೆ ಚಲಿಸುವ ಹೆಣ್ಣುಮಕ್ಕಳ ಪಯಣ 'ವಿವಾಹ' ಮತ್ತು 'ಕುಟುಂಬ'ದ ಸ್ವರೂಪದಲ್ಲಿ ಬಹುದೊಡ್ಡ ಪಲ್ಲಟ ಸೃಷ್ಟಿಸುತ್ತದೆ. ಇಲ್ಲಿನ ಯಾವ ಪಾತ್ರವೂ ಜಡವಾಗಿಲ್ಲ; ಪ್ರತಿ ಪಾತ್ರವೂ ಪ್ರಜ್ಞಾಶೀಲವಾಗಿವೆ; ಕ್ರಿಯಾಶೀಲವಾಗಿವೆ; ಪಾತ್ರಗಳೊಳಗೆ ಅಂತರ್ಗತಗೊಂಡ ಸ್ವಾಯತ್ತ ಪ್ರಜ್ಞೆಯು ಸಾಮಾಜಿಕ ಕಟ್ಟುಪಾಡಿಗೆ ಬಾಗುವುದಿಲ್ಲ; ಅವುಗಳು ತಮಗೆ ಬೇಕೆಂದ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವತ್ತ ಪ್ರಧಾನ ಆಸಕ್ತಿಯನ್ನು ತೋರಿಸುತ್ತವೆ; ಇಂತಹ ಸಂದರ್ಭದಲ್ಲಿ ಎದುರಾದ ಸಾಮಾಜಿಕ ತಿರಸ್ಕಾರದ ಬಗ್ಗೆ ತಲೆಕೆಡಿಸಿಕೊಳ್ಳದೇ ತನಗೇನು ಬೇಕು, ತಾನು ಹೇಗಿರಬೇಕು ಎನ್ನುವುದರತ್ತ ಮಹಿಳಾ ಪಾತ್ರಗಳು ಚಲಿಸುತ್ತವೆ; ಕಾದಂಬರಿಯೊಳಗಡೆ ಚಲನಶೀಲವಾದ ಮಹಿಳಾ ಏಜೆನ್ಸಿಯೇ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ.

ಶಿವಲೀಲಾ, ಅಕ್ಕಮ್ಮ, ಶ್ರೀದೇವಿ – ಈ ಪಾತ್ರಗಳ ಮೂಲಕ ಕಾದಂಬರಿ ಮಹಿಳಾ ಹಕ್ಕುಗಳನ್ನು ಸಂರಕ್ಷಿಸಿ ಮದುವೆ ಹಾಗೂ ಕುಟುಂಬ ಸಂಸ್ಥೆಗಳನ್ನು ಛಿದ್ರಗೊಳಿಸಿದಂತೆ

ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ ಆಳದಲ್ಲಿ ಮದುವೆಯಾಗದೆ ತಾಯಿಯಾದ ಅಕ್ಕಮ್ಮನನ್ನೂ ಆಕೆಯ ಮಗ ಶಿವದರ್ಶನನನ್ನೂ ಸಾಂಪ್ರದಾಯಿಕ ಮನಸ್ಸಿನ ತಾಯಿ ಒಪ್ಪಿಕೊಳ್ಳುತ್ತಾಳೆ. ಬೇರೆ ಬೇರೆ ಕಾರಣಗಳಿಂದ ವಿಚ್ಛೇದನ ಪಡೆದುಕೊಂಡ ಶಿವಲೀಲಾ, ಅಕ್ಕಮ್ಮ ಇಬ್ಬರನ್ನು ಸಂಪ್ರದಾಯಸ್ಥ ತಾಯಿ ತಂದೆ ಸ್ವೀಕರಿಸುತ್ತಾರೆ. ಮದುವೆಯನ್ನು ಗಂಭೀರವಾಗಿ ಪರಿಗಣಿಸಿದ ಶ್ರೀದೇವಿಗೆ ಯಾವ ಒತ್ತಡವನ್ನು ಹೇರದೆ, ಅವಳ ಬದುಕಿನ ಆಯ್ಕೆಯನ್ನು ಗೌರವಿಸುತ್ತಾರೆ – ಈ ಮೂಲಕ ಪ್ರಸ್ತುತ ಕಾದಂಬರಿಯು ಹೊಸ ನೈತಿಕ ಮೌಲ್ಯಗಳನ್ನು ಒಳಗೊಂಡ ಆಧುನಿಕ ಕುಟುಂಬ ರಚನೆಯನ್ನು ಸಾಧ್ಯವಾಗಿಸುತ್ತದೆ ಹಾಗೂ ಅದನ್ನು ಮಾನ್ಯಗೊಳಿಸುತ್ತದೆ. ವಿಷಪೂರಿತ (Toxic) ಪಿತೃಸಂಸ್ಕೃತಿಯನ್ನು ಪ್ರತಿನಿಧಿಸುವ ಕುಟುಂಬವನ್ನು ನಿರಚನಗೊಳಿಸಿ, ಮಹಿಳಾ ಹಕ್ಕುಗಳನ್ನು ಪೋಷಿಸುವ, ಪ್ರೀತಿಸುವ, ಗೌರವಿಸುವ ಆಧುನಿಕ ಕುಟುಂಬ ರಚನೆಯನ್ನು ಸಾಂಪ್ರದಾಯಿಕ ಸಮಾಜದೊಳಗೆ ಸಾಧ್ಯವಾಗಿಸಿದ ಅಮರೇಶ ನುಗಡೋಣಿ ಅವರ ಕಥಾನಿರೂಪಣೆಯ ತಂತ್ರಗಾರಿಕೆಯು ಅತ್ಯಂತ ನವನವೀನವಾಗಿದೆ. ಇಡೀ ಕಾದಂಬರಿಯು ನೆನಪುಗಳ ನೆಯ್ಗೆಯಲ್ಲಿಯೇ ರೂಪುದಾಳಿದೆ. ಬದುಕಿನಲ್ಲಿ ಘಟನೆಗಳು ಜರುಗುತ್ತಿದ್ದಾಗ ಅದರಲ್ಲಿ ಭಾಗಿಯಾದ ವ್ಯಕ್ತಿಗಳ ಭಾವನೆಗಳು ಮುಂಚೂಣಿಯಲ್ಲಿದ್ದು, ವಿವೇಕವನ್ನು ಹಿಂದಕ್ಕೆ ತಳ್ಳುತ್ತದೆ; ಒಂದು ವೇಳೆ ವಿವೇಕ ಇದ್ದರೂ ಅದು ಸ್ವ ಪಕ್ಷಪಾತದ ನೆಲೆಯಲ್ಲಿ ಸಾಗುತ್ತಿರುತ್ತದೆ; ಕಾಲ ಕಳೆದ ನಂತರ ಅದೇ ವ್ಯಕ್ತಿಗಳು, ನಡೆದ ಘಟನೆಯನ್ನು ನೆನಪುಗಳ ಮೂಲಕ ಅನುಸಂಧಾನ ಮಾಡಿದಾಗ ಗಂಭೀರ ಎನಿಸಿದ್ದು ತಮಾಷೆಯಾಗಿ ಕಾಣುತ್ತದೆ; ತಮಾಷೆಯಾಗಿ ಕಂಡದ್ದು ಗಂಭೀರವಾಗಿ ಕಾಣುತ್ತದೆ. ನೆನಪುಗಳು ಯಾವಾಗಲೂ ಉದ್ವೇಗಗಳಿಂದ ಮುಕ್ತವಾಗಿದ್ದು, ವಿವೇಕದೊಂದಿಗೆ ಹೆಜ್ಜೆ ಹಾಕುತ್ತಿರುತ್ತದೆ. ಹೀಗಾಗಿಯೇ ಏನೋ ಅಮರೇಶ ನುಗಡೋಣಿ ಅವರು ನೆನಪುಗಳನ್ನಾಧರಿಸಿಯೇ ಕಾದಂಬರಿಯನ್ನು ಕಟ್ಟಿಕೊಡುತ್ತಾರೆ; ಇದು ಕಾದಂಬರಿಯಲ್ಲಿ ಅಳವಡಿಸಿಕೊಂಡ ಪ್ರಮುಖ ತಂತ್ರಗಾರಿಕೆಯಾಗಿದೆ.

ಪ್ರಸ್ತುತ ಕಾದಂಬರಿಯು 'ತಂದೆ', 'ಗಂಡ', 'ತಾಳಿ' ಎನ್ನುವ ಸಾಂಸ್ಕೃತಿಕ ಸಂಕೇತಾರ್ಥ ನೆಲೆಯ ಸಂಕಥನಗಳನ್ನು ಅರ್ಥಪೂರ್ಣವಾಗಿ ಭಂಜಿಸುತ್ತದೆ. ಈ ಭಂಜನಾ ಪ್ರಕ್ರಿಯೆ ಸಾಂಪ್ರದಾಯಿಕ ಸಂಸ್ಥೆಗಳನ್ನು ಮುರಿಯುವುದಕ್ಕೆ ಮಾತ್ರ ಸೀಮಿತಗೊಳ್ಳುವುದಿಲ್ಲ; ಅದು ಸಮನ್ವಯ ಸಮಾಜದ ನಿರ್ಮಾಣದೆಡೆಗೆ ಸಾಗುತ್ತದೆ.

ಈ ಕಾದಂಬರಿಯ ಬಹುದೊಡ್ಡ ವಿಶಿಷ್ಟತೆಯೆಂದರೆ ಬದುಕು ಒಡ್ಡಿದ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿಯೂ ಇಲ್ಲಿನ ಮುಖ್ಯ ಪಾತ್ರಗಳು ಆತ್ಮವಿಶ್ವಾಸವನ್ನು ಕಳೆದುಕೊಳ್ಳುವುದಿಲ್ಲ; ತಾವು ನಂಬಿಕೆಯಿಟ್ಟ ಮೌಲ್ಯಗಳನ್ನು ಎಂಥದ್ದೇ ಕಠಿಣ ಸಂದರ್ಭದಲ್ಲಿಯೂ ಬಿಟ್ಟುಕೊಡುವುದಿಲ್ಲ. "ಅವರವರ ಬಾಳ್ವೆಗೆ ಅವರವರೇ ಹೊಣೆ" ಎನ್ನುವ ಸದಾಶಿವಪ್ಪನ ಬದುಕಿನ ಸಿದ್ಧಾಂತವು ಇಡೀ ಕಾದಂಬರಿಯನ್ನು ರೂಪಿಸಿದೆ

ಹಾಗೂ ನಿಯಂತ್ರಿಸಿದೆ. ಪಾರ್ವತಿಯನ್ನೊಳಗೊಂಡಂತೆ ಶಿವಲೀಲಾ, ಅಕ್ಕಮ್ಮ ಹಾಗೂ ಶ್ರೀದೇವಿ ಇವರಿಗೆ ಬದುಕನ್ನು ಎದುರಿಸುವುದಕ್ಕೆ ಹಾಗೂ ಹಣೆಬರಹವನ್ನು ಬದಲಿಸುವುದಕ್ಕೆ ಬಹುದೊಡ್ಡ ಶಕ್ತಿಯನ್ನು ನೀಡಿದೆ. ಇರುವಿಕೆಯಿಂದ ಆಗುವಿಕೆಯೆಡೆಗೆ ಪಯಣಿಸುವುದಕ್ಕೆ ಆತ್ಮವಿಶ್ವಾಸವನ್ನು ತುಂಬಿದೆ. 'ಹೆಣ್ಣು ತನ್ನನ್ನು ತಾನು ಸಂಪೂರ್ಣವಾಗಿ ಕಳೆದುಕೊಳ್ಳುವುದರಿಂದಲೇ ಅಂದದ ಕುಟುಂಬ ಅರಳುತ್ತದೆ' ಎಂದು ನಂಬಿದ ಪಾರ್ವತಿಯಲ್ಲೂ ಸದಾಶಿವಪ್ಪನ ಬದುಕಿನ ಸಿದ್ಧಾಂತವು ಆಳದಲ್ಲಿ ಪರಿವರ್ತನೆಯನ್ನು ತರುತ್ತದೆ.

ಅತ್ಯಂತ ಸಾಂಪ್ರದಾಯಿಕ ಪಾತ್ರವೆಂದರೆ ಪಾರ್ವತಿಯದ್ದು. ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಪಡೆದ ಮಗುವನ್ನು ಎದೆಗಪ್ಪಿಕೊಂಡು ಸಾಗುವುದರೊಂದಿಗೆ ಕಾದಂಬರಿ ನಿಲುಗಡೆಗೊಂಡರೂ, ಅದು ಪಲ್ಲಟಗೊಂಡ ಸಮಾಜದ ಆರಂಭವಾಗಿ ಕಾಣುತ್ತದೆ. ಯಾವ ಸದ್ದುಗದ್ದಲವಿಲ್ಲದೆ, ನಿಶ್ಯಬ್ಧವಾಗಿ ಬಹುದೊಡ್ಡ ಪಲ್ಲಟವನ್ನು ಕಾದಂಬರಿಯು ಹಿಡಿದಿಡುತ್ತದೆ. 'ಚಳುವಳಿ' ಹೆಸರಿನಲ್ಲಿ ನಡೆಯುವ ಚರ್ಚೆಗಳು ಸಮಾಜದಲ್ಲಾದ ಬದಲಾವಣೆಯನ್ನು ಗುರುತಿಸಲಾರದಷ್ಟು ಅಬ್ಬರಿಸುತ್ತವೆ. ಸಾಮಾಜಿಕ ಬದಲಾವಣೆಯನ್ನು ಬಾಹ್ಯದಲ್ಲಿ ಗುರುತಿಸುವ ಅಧ್ಯಯನಗಳನ್ನು ಹಾಗೂ ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯಗಳನ್ನು ಬದಿಗಿರಿಸಿ, ಕೌಟುಂಬಿಕ ಬದಲಾವಣೆಯೇ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆಯಾ ಮತ್ತು ಪ್ರೇರಣೆಯಾಗಿದೆಯಾ ಎನ್ನುವುದನ್ನು ಸಮಸ್ಯೀಕರಿಸಿಕೊಂಡು ನೋಡಬೇಕಿದೆ. ಮಹಿಳೆಯರು, ದಮನಿತರು, ಟ್ರಾನ್ಸ್ ಸಮುದಾಯದವರು ಉದ್ಯೋಗ ಪಡೆಯುವುದರಿಂದ, ಶಿಕ್ಷಣ ಹಾಗೂ ಆಸ್ತಿಹಕ್ಕು ಹೊಂದುವುದರಿಂದ, ಸಮಾಜದ ಹೊರ ಪದರಿನಲ್ಲಿ ಬದಲಾವಣೆ ತೋರುತ್ತದೆ; ಆದರೆ ಈ ಬದಲಾವಣೆ ಪಿತೃ ಸಂಸ್ಕೃತಿಯ ಅಪೇಕ್ಷೆ ಹಾಗೂ ಒಪ್ಪಿಗೆಯ ಮೇಲೆ ನಡೆಯುತ್ತಿರುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗಾಗಿ ಇಂತಹ ಸಂಗತಿಗಳು ಸಾಮಾಜಿಕವಾಗಿ ಅಮೂಲಾಗ್ರ ಬದಲಾವಣೆ ತರಲಾರದು; ಹಾಗೂ ಮೂಲಭೂತ ಅಧಿಕಾರ ರಚನೆಗಳನ್ನು ಛಿದ್ರಗೊಳಿಸಲಾರದು. ಆದರೆ ಇಂತಹ ಬದಲಾವಣೆಗಳು ನಿರುಪಯುಕ್ತ ಎಂದು ಹೇಳುತ್ತಿಲ್ಲ. ಆದರೆ ಅದು ವಿಷಪೂರಿತ (Toxic) ಪಿತೃ ಸಂಸ್ಕೃತಿಯನ್ನು ನಾಶಗೊಳಿಸಲಾರದು ಎನ್ನುವುದನ್ನು ಒತ್ತಿ ಹೇಳುತ್ತಿದ್ದೇನೆ. ಸಾಮಾಜಿಕ ಬದಲಾವಣೆ ಸಂಭವಿಸುವುದು ಕುಟುಂಬದೊಳಗಿನ ವಿಷಪೂರಿತ (ಟಾಕ್ಸಿಕ್) ಪಿತೃ ಸಂಸ್ಕೃತಿಯು ನಾಶವಾದಾಗ; ಹೀಗಾಗಿ ಹೆಣ್ಣುಮಕ್ಕಳು ಕಾಲು ದಾರಿಯನ್ನು ನಿರ್ಮಿಸಿಕೊಳ್ಳಬೇಕಿದೆ; ಬಹುಸಂಖ್ಯಾತ ಹೆಣ್ಣುಮಕ್ಕಳು, ಮಹಿಳೆಯರು ಈ ಕಾಲುದಾರಿಯಲ್ಲಿಯೇ ಗಟ್ಟಿ ಹೆಜ್ಜೆ ಊರುತ್ತ ಹೆದ್ದಾರಿಯನ್ನಾಗಿ ಮಾಡಬೇಕಿದೆ ಎನ್ನುವ ಸಂದೇಶ ಕಾದಂಬರಿಯ ಓದಿನಲ್ಲಿ ದಕ್ಕುತ್ತದೆ. ಮಹಿಳೆಯರು ಹಾಗೂ ಹೆಣ್ಣುಮಕ್ಕಳು ಅಸಂಪ್ರದಾಯಿಕ ಬೀಜವನ್ನು ಬಿತ್ತಿ, ಪ್ರತಿ ಮನೆಮನೆಯಲ್ಲಿಯೂ

ಸಂವಿಧಾನದ ಬೆಳಕು ಪ್ರಕಾಶಿಸುವಂತೆ ಮಾಡಬೇಕಿದೆ ಎನ್ನುವ ಅರಿವನ್ನು ಕಾದಂಬರಿಯು ನೀಡುತ್ತದೆ. ಎಲ್ಲ ಪಿತೃ ಸಂಸ್ಕೃತಿಯೂ ಮಹಿಳಾ ವಿರೋಧಿಯಾಗಿರುವುದಿಲ್ಲ; ಮಹಿಳಾ ಸ್ನೇಹಿಯಾದ ಮೌಲ್ಯಗಳು ಅಲ್ಲಿಯೂ ಇರುತ್ತವೆ ಎನ್ನುವುದನ್ನು ಸೂಚ್ಯವಾಗಿ ಕಾದಂಬರಿಕಾರರು ಅತ್ಯಂತ ವಿವೇಕದಿಂದ ಗೌರಿಯರು ಕಾದಂಬರಿಯಲ್ಲಿ ಕಟ್ಟಿಕೊಡುತ್ತಾರೆ.

ಗೌರಮ್ಮನ ನೋಂಪಿ ಪೂಜೆಯ ವಿಶಾಲ ದೈವಿಕ ಹಂದರದಲ್ಲಿ ಹೆಣ್ಣುಮಕ್ಕಳ ವಿಚ್ಛೇದನ ಹಕ್ಕನ್ನು, ಮದುವೆಯಾಗದೆ ಸಂತಾನ ಪಡೆಯುವ ಹಕ್ಕನ್ನು, ಲಿವ್ ಇನ್ ರಿಲೇಶನ್‌ಷಿಪ್‌ನ ಆಯ್ಕೆ ಸ್ವಾತಂತ್ರ್ಯವನ್ನು ಮಾನ್ಯಗೊಳಿಸುತ್ತದೆ. ಅಸಂಪ್ರದಾಯಿಕ ಜೀವನಕ್ರಮವನ್ನು ಆಯ್ದುಕೊಂಡ ಹೆಣ್ಣುಮಕ್ಕಳಿಗೆ ತಾಯಿ–ತಂದೆಯರು ನೀಡುವ ನೈತಿಕ ಬೆಂಬಲವು ಬಹುದೊಡ್ಡ ಸಾಮಾಜಿಕ ಬದಲಾವಣೆಗೆ ಮುನ್ನುಡಿಯನ್ನು ಬರೆಯುತ್ತದೆ. ಈ ನೆಲೆಯಲ್ಲಿ ಕುಟುಂಬದಲ್ಲಿ ಸಂಭವಿಸುವ ಪಲ್ಲಟಗಳೇ ಸಾಮಾಜಿಕ ಪರಿವರ್ತನೆಗೆ ಕಾರಣವಾಗುತ್ತದೆ ಎನ್ನುವ ತಾತ್ವಿಕತೆಯನ್ನು ಪ್ರಸ್ತುತ ಕಾದಂಬರಿಯು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ.

◆◆

ಲೇಖಕರ ವಿಳಾಸ

೧. ಪ್ರೊ. ಎಂ.ಎಸ್. ಆಶಾದೇವಿ, ನಂ.೫೪/೧, "ಸಮೀರ ಕೃಪ" ೧ನೇ ಹಂತ, ೧ನೇ ಮುಖ್ಯರಸ್ತೆ ಕೆಎಚ್‌ಬಿ ಕಾಲೋನಿ, ಬೆಂಗಳೂರು-೫೬೦೦೭೬.

೨. ಡಾ. ಸಬಿತಾ ಬನ್ನಾಡಿ, ಪ್ರಾಧ್ಯಾಪಕಿ, ಚೌಡಮ್ಮನ ಗುಡಿ ಹತ್ತಿರ, ೧ನೇ ತಿರುವು, ಶಾಂತಿ ನಗರ, ಬಿ.ಆರ್. ಪ್ರಾಜೆಕ್ಟ್, ಭದ್ರಾವತಿ ತಾಲೂಕು, ಶಿವಮೊಗ್ಗ ಜಿಲ್ಲೆ-೫೭೭೪೫೧.

೩. ಮೇಟಿ ಮಲ್ಲಿಕಾರ್ಜುನ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಭಾಷಾಶಾಸ್ತ್ರ ಅಧ್ಯಯನ ವಿಭಾಗ, ಸಹ್ಯಾದ್ರಿ ಆರ್ಟ್ಸ್ ಕಾಲೇಜು, ಕುವೆಂಪು ವಿಶ್ವವಿದ್ಯಾಲಯ, ವಿದ್ಯಾನಗರ ಶಿವಮೊಗ್ಗ-೫೭೭೨೦೩

೪ ಡಾ. ರಾಮಲಿಂಗಪ್ಪ ಟಿ. ಬೇಗೂರು, # ೩೯ ಎರಡನೇ ಮೇನ್, ಹತ್ತನೇ ಕ್ರಾಸು, ಉಲ್ಲಾಳ ರಸ್ತೆ, ಜ್ಞಾನಜ್ಯೋತಿ ನಗರ, ಬೆಂಗಳೂರು-೫೬೦೦೫೬.

೫. ಕೋಡಿಬೆಟ್ಟು ರಾಜಲಕ್ಷ್ಮಿ, ನಂ. ೧೦೩, ಅಗ್ರಜ ಶಿಲಾಸ್, ಹೊಗೆಬೈಲ್ ರಸ್ತೆ ಉರ್ವ, ಅಶೋಕ ನಗರ, ಮಂಗಳೂರು-೫೭೫೦೦೬.

೬. ಡಾ. ಸುಭಾಷ್ ರಾಜಮಾನೆ, # ೫೧೧, ಎಂ.ಸಿ. ಲೇಔಟ್, ೧೦ನೇ ಮೇನ್ ವಿಜಯನಗರ, ಬೆಂಗಳೂರು-೫೬೦೦೪೦.

೭. ಡಾ. ಸುಧಾಕರ ದೇವಾಡಿಗ ಬಿ., ಸೌಮ್ಯ ಹೌಸ್, ನಿಯರ್ ಎನ್.ಎಚ್. ೬೬, ಮಠದಬೆಟ್ಟು ರಸ್ತೆ, ಕೋಟೇಶ್ವರ ಅಂಚೆ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ-೫೭೬೨೨೨.

೮. ಡಾ. ಜ್ಯೋತಿ ಎ., ಪ್ರಾಧ್ಯಾಪಕರು (ಇಂಗ್ಲೀಷ್ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೯. ಸಿ.ಎಸ್. ಭೀಮರಾಯ (ಸಿಎಸ್ಬಿ), ಆಂಗ್ಲ ಉಪನ್ಯಾಸಕರು, C/O. ಎನ್.ಎಸ್. ಜಾಗಿರದಾರ್, ಲಕ್ಷ್ಮೀ ನಗರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಶಹಾಪುರ, ಜಿ॥ ಯಾದಗಿರಿ-೫೮೫೨೨೩.

೧೦. ಡಾ. ಶೈಲಜ ಇಂ. ಹಿರೇಮಠ, ಹಿರಿಯ ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬.

◆◆

ದಿಟ್ಟದ ಹೆಜ್ಜೆಗಳು

ಮಹಿಳೆಯರು, ದಮನಿತರು, ಟ್ರಾನ್ಸ್ ಸಮುದಾಯದವರು ಉದ್ಯೋಗ ಪಡೆಯುವುದರಿಂದ, ಶಿಕ್ಷಣ ಹಾಗೂ ಆಸ್ತಿಹಕ್ಕು ಹೊಂದುವುದರಿಂದ, ಸಮಾಜದ ಹೊರ ಪದರಿನಲ್ಲಿ ಬದಲಾವಣೆ ತೋರುತ್ತದೆ; ಆದರೆ ಈ ಬದಲಾವಣೆ ಪಿತೃ ಸಂಸ್ಕೃತಿಯ ಅಪೇಕ್ಷೆ ಹಾಗೂ ಒಪ್ಪಿಗೆಯ ಮೇಲೆ ನಡೆಯುತ್ತಿರುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗಾಗಿ ಇಂತಹ ಸಂಗತಿಗಳು ಸಾಮಾಜಿಕವಾಗಿ ಆಮೂಲಾಗ್ರ ಬದಲಾವಣೆ ತರಲಾರವು. ಹಾಗೂ ಮೂಲಭೂತ ಅಧಿಕಾರ ರಚನೆಗಳನ್ನು ಛಿದ್ರಗೊಳಿಸಲಾರವು. ಇಂಥ ಬದಲಾವಣೆಗಳು ನಿರುಪಯುಕ್ತ ಎಂದು ಹೇಳುತ್ತಿಲ್ಲ, ಆದರೆ ಅವು ವಿಷಪೂರಿತ ಪಿತೃ ಸಂಸ್ಕೃತಿಯನ್ನು ನಾಶಗೊಳಿಸಲಾರವು ಎನ್ನುವುದನ್ನು ಒತ್ತಿ ಹೇಳುತ್ತಿದ್ದೇನೆ. ಹೀಗಾಗಿ ಹೆಣ್ಣುಮಕ್ಕಳು ಕಾಲುದಾರಿಯನ್ನು ನಿರ್ಮಿಸಿಕೊಳ್ಳಬೇಕಿದೆ, ಆ ಕಾಲುದಾರಿಯಲ್ಲಿಯೇ ಗಟ್ಟಿ ಹೆಜ್ಜೆ ಊರುತ್ತಾ ಅದನ್ನು ಹೆದ್ದಾರಿಯನ್ನಾಗಿ ಮಾಡಿಕೊಳ್ಳಬೇಕಿದೆ ಎನ್ನುವ ಸಂದೇಶ ಅಮರೇಶ ನುಗಡೋಣಿಯವರ 'ಗೌರಿಯರು' ಕಾದಂಬರಿಯ ಓದಿನಲ್ಲಿ ದಕ್ಕುತ್ತದೆ. ಎಲ್ಲ ಪಿತೃ ಸಂಸ್ಕೃತಿಯೂ ಮಹಿಳಾ ವಿರೋಧಿಯಾಗಿರುವುದಿಲ್ಲ, ಅಲ್ಲಿಯೂ ಮಹಿಳಾ ಸ್ನೇಹಿಯಾದ ಮೌಲ್ಯಗಳು ಇರುತ್ತದೆ ಎನ್ನುವುದನ್ನೂ ಸೂಚ್ಯವಾಗಿ ಕಾದಂಬರಿಕಾರರು ಅತ್ಯಂತ ವಿವೇಕದಿಂದ ಈ ಕಾದಂಬರಿಯಲ್ಲಿ ಕಟ್ಟಿಕೊಡುತ್ತಾರೆ.

ಡಾ. ಶೈಲಜ ಇಂ ಹಿರೇಮಠ

ವಿಜಯಕಲ್ಯಾಣ ಪ್ರಕಾಶನ
ಕೊಂಡನಾಯಕನಹಳ್ಳಿ
ಹೊಸಪೇಟೆ-583239
ವಿಜಯನಗರ ಜಿಲ್ಲೆ